# ಸಂಪಾದಕೀಯ



ಆತ್ಮೀಯ ಶರಣ ಬಂಧುಗಳೇ,

ಸಕಾರಾತ್ಮಕ ಚಿಂತನೆಗಳಿಗೆ ವಿಶಿಷ್ಟ ಶಕ್ತಿ ಇದೆ. ಬದುಕನ್ನೇ ಬದಲಿಸುವ ಸಾಮರ್ಥ್ಯ ಇದೆ. ಹಾಗಾಗಿ ಸಂಕಷ್ಟದ ಹೊತ್ತಲ್ಲಿ ಕೈಚೆಲ್ಲುವ ಬದಲು ಸಕಾರಾತ್ಮಕ ಮನಸ್ಥಿತಿಯೊಂದಿಗೆ ಮುಂದಡಿ ಇಡೋಣ ಎಂಬ ಆಶಯದಂತೆ ನೊಳಂಬವಾಣಿ ಪತ್ರಿಕೆಗೆ ಇದೀಗ 15 ಸಂವತ್ಸರಗಳ ಸಾರ್ಥಕ ಸಂದರ್ಭದಲ್ಲಿ ಅರಿವಿನ ಯಾನವು ಸಂತೃಪ್ತಿಯ ಅನುಭವ ತಂದ ಘಳಿಗೆ, ಆಧುನಿಕ, ಅತ್ಯಾಧುನಿಕ ಮತ್ತು ತೃತೀಯ ಜಗತ್ತುಗಳು ಅಪೇಕ್ಷೆ ಮಾನದಂಡ ಅವಶ್ಯಕತೆಗಳನ್ನು ಬದಲಾಯಿಸಿಕೊಂಡ ಕಾಲನುಕಾಲದ ಸಂದರ್ಭದಲ್ಲಿಯು ನೊಳಂಬವಾಣಿ ಪತ್ರಿಕೆಯು ಅರಿವಿನ ಅಂತರ್ಜಲವನ್ನು ಬತ್ತಿ ಹೋದಂತೆ ಕಾಪಾಡಿಕೊಂಡು ಬಂದಿದ್ದು, ಪತ್ರಿಕೆಯ ಸತ್ಯಯುತ, ಸತ್ವಯುತ ಮತ್ತು ಅರ್ಥಪೂರ್ಣ ಬದುಕಿನ ಯಾನಕ್ಕೆ ಸಾಕ್ಷಿಯಾಗಿದೆ. ಶರಣರ ಪರಿಕಲ್ಪನೆಗಳು ವ್ಯಾಪಕವಾಗಿ ಅಧಿಕಗೊಂಡಿರುವುದು ಕಳೆದ ಶತಮಾನದಲ್ಲಿಯೆ ಬಸವಾದಿ ಪ್ರಮಥರ ಶರಣ ಸಂಸ್ಕೃತಿ ಪ್ರಣೀತವಾದ ವಿಚಾರಧಾರೆಯನ್ನು ವಚನ ಪ್ರಕಟಣೆಗಳ ಮೂಲಕ ಸಾಮಾಜಿಕ ಸಂವಹನಗೊಳಿಸುವ ಕಾರ್ಯ ನಿರಂತರವಾಗಿ ನಡೆಯುತ್ತಾ ಬಂದಿದೆ. ಹನ್ನೆರಡನೇ ಶತಮಾನದ ಶರಣ ಸಂಸ್ಕೃತ ಪ್ರಣೀತವಾದ ಯುಗಧರ್ಮವು ಪೂರ್ಣಪ್ರಮಾಣದಲ್ಲಿ ಮೌಲ್ಯವ್ಯವಸ್ಥೆ ಆದರಿಸಿತ್ತು. ಮಾನವ ಅಭ್ಯುದಯದಲ್ಲಿ ಸಂಸ್ಕೃತಿ, ಶಿಕ್ಷಣದ ಪಾತ್ರ ಲಿಂಗಾಯಿತ ಮೌಲ್ಯಗಳ ಆಧಾರದಲ್ಲಿ ಜೀವನದ ಸವಾಲುಗಳಿಗೆ ಸ್ಪಂದಿಸುವ ಪ್ರಾಯೋಗಿಕ ಆಧುನಿಕ ಶಿಕ್ಷಣವನ್ನು ರೂಪಿಸುವುದು ಇಂದಿನ ಜಾಗತಿಕ ಪರಿಸ್ಥಿತಿಯಲ್ಲಿ ಲಿಂಗಾಯತರ ಹೆಗಲಿಗೆ ಬಿದ್ದಿರುವ ವಿಶೇಷ ಹೊಣೆಗಾರಿಕೆ. ಇಂತಹ ಅಪೂರ್ವ ಜವಾಬ್ದಾರಿಯನ್ನು ಲಿಂಗಾಯತರು ಸಮರ್ಥವಾಗಿ ನಿರ್ವಹಿಸಿದಲ್ಲಿ ಜಗತ್ತಿನಲ್ಲಿ ಶಾಂತಿ-ಸೌಖ್ಯ-ಸಾಮರಸ್ಯದ ಒಂದು ಹೊಸ ಮನ್ವಂತರಕ್ಕೆ ನಾಂದಿಯಾಗುವುದು ನಿಶ್ಚಿತ. ಪ್ರಗತಿಪರ ವೈಚಾರಿಕತೆಯ ಹೆಸರಿನಲ್ಲಿ ಇಂದು ಪಾಶ್ಚಾತ್ಯ ಚಿಂತಕರ ಕೊಡುಗೆಗಳ ಬಗ್ಗೆ ಮಾತ್ರ ವಿಶೇಷ ಪ್ರಾಶಸ್ತ್ಯ ನೀಡಲಾಗುತ್ತಿದೆ. ಅಂಥ ಚಿಂತನೆಯಲ್ಲೂ ಪ್ರಧಾನವಾಗಿ ಕೇವಲ ಭೌತವಾದದ ವಿಚಾರಗಳನ್ನೇ ಅತ್ಯಂತ ಹಾಗೂ ಪ್ರಗತಿಪರ ಎಂದು ಬಿಂಬಿಸಲಾಗುತ್ತಿದೆ. ವಚನ ಸಾಹಿತ್ಯದ ಇತಿಹಾಸ ಜ್ಞಾನ ಪರಂಪರೆ ಪ್ರಗತಿ ಪರವಲ್ಲವೆಂಬ ಪಾಶ್ಚಾತ್ಯ ಶಿಕ್ಷಣ ಪ್ರೇರಿತ ದಾಸ್ಯದಿಂದ ಕೀಳರಿಮೆಯಿಂದ ನಾವು ಈಗ ಹೊರಬರಬೇಕು. ಧನಾರ್ಜನೆ ಮತ್ತು ಜೀವನೋಪಾಯಕ್ಕಾಗಿ ಕೌಶಲಗಳನ್ನು ಕಲಿಸಿಕೊಡುವುದರ ಜೊತೆಗೆ ನೀತಿ ಮತ್ತು ಗುಣಕ್ಕೆ ಪ್ರಾಧಾನ್ಯ ನೀಡುವ ಪರಂಪರೆ ನಮ್ಮದು. ನಾವು ನಮ್ಮ ಜೀವನದಲ್ಲಿ ಮೌಲ್ಯಗಳನ್ನು ಅಳವಡಿಸಿಕೊಳ್ಳ ಬೇಕಾದುದೇ ಮೌಲ್ಯಗಳನ್ನು ಉನ್ನತೀಕರಿಸುವ ಆಚರಣೆ ಸಾರ್ಥಕವಾಗುವಲ್ಲಿ ಅಳವಡಿಸಿಕೊಳ್ಳುವ ಆದರ್ಶವೇ ಜೀವನ ಮೌಲ್ಯ. ಜೀವನದ ಸಂಪನ್ನತೆ ಸಾಧನಾ ಜೀವನ

## ನಿನಗೆ ಕೇಡಿಲ್ಲದಂತೆ

ಮೌಲ್ಯಗಳಿಂದ ವ್ಯಕ್ತಿತ್ವ ವಿಕಸನ. ಇದು ಅಂತರಂಗದ ಪೂರ್ಣವಿಕಸನ ಭ್ರಾತೃತ್ವಕ್ಕೆ ರಹದಾರಿ. ಇದರಿಂದ ಬಹಿರಂಗ ಬದುಕಿನ ಸುಧಾರಣೆ ಅಂತರಂಗದ ಸಂಪನ್ನತೆಯನ್ನು ಅಳವಡಿಸಿಕೊಂಡರೆ ಬದುಕು ಸಾರ್ಥಕ. ಶರಣರ ವಚನಗಳು, ಜೀವನ ಮೌಲ್ಯಗಳನ್ನು ಅಳವಡಿಸಿಕೊಂಡಿವೆ. ಶರಣರು ಬದುಕಿನ ನಾನಾ ಆಯಾಮಗಳಲ್ಲಿ ಇಣುಕಿ ಆದರ್ಶ ಸಮಾಜದ ಕನಸು ಕಂಡರು. ಮಾನವೀಯ ನಡವಳಿಕೆಗಳಿಗೆ ಬೆಲೆಯಿತ್ತರು. ಇವರು ಪ್ರತಿಪಾದಿಸಿ ವಿಚಾರಗಳೆಲ್ಲವೂ ಜೀವನ ಮೌಲ್ಯಗಳಿಗೆ ಪ್ರೋತ್ಸಾಹ ನೀಡಿದವು.

ಈ ಹಿನ್ನೆಲೆಯಲ್ಲಿ ಸಾರ್ಥಕ 15 ವರ್ಷಗಳನ್ನು ಪೂರೈಸಿದ ನೊಳಂಬವಾಣಿ ಮತ್ತು ನೊಳಂಬ ಲಿಂಗಾಯತ ಸಂಘ ನಿರಂತರವಾಗಿ ಸಮಾಜಮುಖಿ ಕೆಲಸಗಳನ್ನು ಮಾಡುತ್ತ ಬಂದಿದೆ. ಮುಂದಿನ ಜನವರಿ 14 ಹಾಗೂ 15 ರ 2025 ರಂದು ಶ್ರೀಗುರು ಸಿದ್ಧರಾಮೇಶ್ವರ ಜಯಂತಿಯು ಬೆಂಗಳೂರಿನಲ್ಲಿ ನಡೆಯಲಿದ್ದು, ಸಮಾಜ ಬಾಂಧವರೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ತಮ್ಮಲ್ಲಿ ಮನವಿ.

ಶ್ರೀ ಗುರು ಸಿದ್ಧರಾಮೇಶ್ವರರು ಎಲ್ಲರಿಗೂ ಒಳಿತನ್ನು ಮಾಡಲಿ ಎಂದು ಆಶಿಸೋಣ.

ಶರಣು ಶರಣಾರ್ಥಿ...

**ಡಾ. ರಾಕೇಶ್ ಬಿ.ಸಿ.**
ಸಂಪಾದಕರು

# ಅಧ್ಯಕ್ಷರ ಆಶಯ ನುಡಿ



ಆತ್ಮೀಯ ಚಂದಾದಾರರೆ ಹಾಗೂ
ಸಮಾಜ ಬಾಂಧವರೇ.

.....................

ಶರಣು ಶರಣಾರ್ಥಿಗಳು

**ಶ್ರೀ ಬಿ.ಕೆ.ಚಂದ್ರಶೇಖರ್**
ಅಧ್ಯಕ್ಷರು
ನೊಳಂಬ ಲಿಂಗಾಯತ ಸಂಘ (ರಿ.)
ಬೆಂಗಳೂರು.

# ನೊಳಂಬ ಲಿಂಗಾಯತ ಸಂಘದ ಕಾರ್ಯ ಚಟುವಟಿಕೆಗಳು

1) ಅರಸೀಕೆರೆ ಶ್ರೀ ಬಸವರಾಜೇಂದ್ರ ಪ್ರೌಢಶಾಲೆಯ ವಿಚಾರವಾಗಿ ಹಾಸನ ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಉಚ್ಚ ನ್ಯಾಯಾಲಯದ ಆದೇಶದ ಪ್ರಕಾರ ದಿನಾಂಕ: 20.09. 2024ರಂದು ಅರಸೀಕೆರೆಯಲ್ಲಿ ಆಯೋಜಿಸಿದ ಸಭೆಯಲ್ಲಿ ಉಪನಿರ್ದೇಶಕರು, ಕಾರ್ಯದರ್ಶಿ ಮತ್ತು ಖಜಾಂಚಿ ಇವರುಗಳು ಭಾಗವಹಿಸಿ ತಮ್ಮ ವಾದವನ್ನು ಮಂಡಿಸಿದರು.

2) ದಿನಾಂಕ: 10.10.2024ರಂದು ವಿದ್ಯಾರ್ಥಿನಿಲಯಗಳಲ್ಲಿ ಆಯುಧಪೂಜಾ ಕಾರ್ಯಕ್ರಮವನ್ನು ನೆರವೇರಿಸಲಾಯಿತು.

3) ದಿನಾಂಕ: 20.10.2024 ರಂದು ಭಾನುವಾರ ತುರುವೇಕೆರೆಯಲ್ಲಿರುವ ಶ್ರೀ ಗುರು ಸಿದ್ಧರಾಮೇಶ್ವರ ಸಮುದಾಯ ಭವನದಲ್ಲಿ ಹೆಚ್ಚುವರಿಯಾಗಿ 2ನೇ ಮಹಡಿಯಲ್ಲಿ ನಿರ್ಮಿಸಿರುವ ಕೊಠಡಿಗಳನ್ನು ನೊಳಂಬ ಸಂಘದ ಅಧ್ಯಕ್ಷರಾದ ಶ್ರೀ ಬಿ.ಕೆ.ಚಂದ್ರಶೇಖರ್‌ರವರ ಅಧ್ಯಕ್ಷತೆಯಲ್ಲಿ ಉದ್ಘಾಟನೆ ಮಾಡಲಾಯಿತು. ಸಂಘದ ಮಾಜಿ ಅಧ್ಯಕ್ಷರಾದ ಶರಣ ಎಸ್.ಆರ್. ಪಾಟೀಲ್‌ರವರು ಕೊಠಡಿಗಳ ಸಂಕೀರ್ಣ ಉದ್ಘಾಟನೆ, ಶರಣ ಎಂ.ಬಿ. ಕೃಷ್ಣಪ್ಪನವರು, ಶಾಸಕರು ತುರುವೇಕೆರೆ ವಿಧಾನಸಭಾ ಕ್ಷೇತ್ರ ಇವರು ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿದರು. ಸಂಘದ ಕಾರ್ಯದರ್ಶಿಗಳಾದ ಶರಣ ಕೆ.ಬಿ.ಶಶಿಧರ್‌ರವರು ಪ್ರಾಸ್ತಾವಿಕ ನುಡಿ ನುಡಿದರು. ಈ ಸಂದರ್ಭದಲ್ಲಿ ದಾನಿಗಳಾದ ಶರಣ ಮಸಾಲ ಜಯರಾಂರವರು ಹಾಗೂ ಶರಣ ಎಸ್. ಬಸವರಾಜುರವರು (ದುಂಡ) ಇವರನ್ನು ಸನ್ಮಾನಿಸಲಾಯಿತು. ಸಂಘದ ಪದಾಧಿಕಾರಿಗಳು, ನಿರ್ದೇಶಕರು ಹಾಗೂ ಉಪಸಮಿತಿಯ ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ಸದಸ್ಯರು ಗಳು ಸಕ್ರಿಯವಾಗಿ ಭಾಗವಹಿಸಿ ಕಾರ್ಯಕ್ರಮದ ಯಶಸ್ವಿಗೆ ಕಾರಣರಾದರು.

4) 852ನೇ ಶ್ರೀ ಗುರು ಸಿದ್ಧರಾಮೇಶ್ವರ ಜಯಂತಿಯನ್ನು ಬೆಂಗಳೂರು, ತ್ರಿಪುರವಾಸಿನಿ ಅರಮನೆ ಮೈದಾನದಲ್ಲಿ ಜನವರಿ 14 ಮತ್ತು 15, 2025 ರಂದು ಆಚರಿಸಲು ಸಕಲ ಪೂರ್ವಭಾವಿ ಸಿದ್ಧತೆಗಳು ನಿವೃತ್ತ ಶ್ರೀ ಎಸ್.ಎನ್. ಸಿದ್ಧರಾಮಪ್ಪ ಐ.ಪಿ.ಎಸ್. ಇವರ ಸಮ್ಮುಖದಲ್ಲಿ ಭರದಿಂದ ಸಾಗುತ್ತಿವೆ.

5) ಕಡೂರಿನಲ್ಲಿ ಹೊಸದಾಗಿ ನಿರ್ಮಿಸುತ್ತಿರುವ ಸಮುದಾಯಭವನದ ಕಾಮಗಾರಿ ಪ್ರಗತಿಯಲ್ಲಿದೆ.

6) ಬೆಂಗಳೂರು ರಾಜಾಜಿನಗರದಲ್ಲಿ ನಿರ್ಮಿಸುತ್ತಿರುವ ವಾಣಿಜ್ಯ ಸಂಕೀರ್ಣದ ಕಾಮಗಾರಿ ಮುಕ್ತಾಯದ ಹಂತದಲ್ಲಿದೆ.

7) ಪದಾಧಿಕಾರಿಗಳು, ನಿರ್ದೇಶಕರು ಮತ್ತು ಇಂಜಿನಿಯರ್‌ಗಳು ಉಪಸಮಿತಿಗಳಿಗೆ ಆಗಿಂದಾಗ್ಗೆ ಭೇಟಿ ಮಾಡಿ ಕಾಮಗಾರಿಗಳನ್ನು ವೀಕ್ಷಿಸುತ್ತಿದ್ದಾರೆ.

8) ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸಂಘದ ಹೆಸರಿನಲ್ಲಿ ನಿವೇಶನ ಪಡೆಯಲು ಅರ್ಜಿ ಸಲ್ಲಿಸಲಾಗಿದೆ.

9) 2024-25ನೇ ಸಾಲಿಗೆ ವಿದ್ಯಾರ್ಥಿವೇತನಕ್ಕೆ ತಾಂತ್ರಿಕ, ವೈದ್ಯಕೀಯ, ಕೃಷಿ ವಿಜ್ಞಾನ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರುಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15.12.2024

10) ಸಂಘದ ಅಭಿವೃದ್ಧಿ ಕಾರ್ಯಗಳು ಸುಲಲಿತವಾಗಿ ನಡೆಯಲು ಮಾಸಿಕ, ದ್ವೈಮಾಸಿಕ ಸಭೆ ಹಾಗೂ ಕಾಮಗಾರಿ ಸಭೆಗಳನ್ನು ಸಂಘದ ಅಧ್ಯಕ್ಷರಾದ ಶ್ರೀ ಬಿ.ಕೆ.ಚಂದ್ರಶೇಖರ್ ರವರ ಸಮ್ಮುಖದಲ್ಲಿ ನಡೆಸಲಾಗುತ್ತಿದೆ.



**ಕೆ.ಬಿ.ಶಶಿಧರ್ ಕಾಮನಕೆರೆ**
ಗೌರವ ಕಾರ್ಯದರ್ಶಿ
ನೊಳಂಬ ಲಿಂಗಾಯತ ಸಂಘ (ರಿ)
ಬೆಂಗಳೂರು.

**ನಮ್ಮ ಬ್ಯಾಂಕ್ : ತುಮಕೂರು ವೀರಶೈವ ಕೋ-ಆಪರೇಟೀವ್ ಬ್ಯಾಂಕ್ (ಲಿ)**
**ನೊಳಂಬವಾಣಿ**
**ಖಾತೆ ಸಂಖ್ಯೆ : 00063090000189**
**ಶಾಖೆ : ಬಸವೇಶ್ವರನಗರ, ಬೆಂಗಳೂರು.**
**ಐ.ಎಫ್.ಎಸ್.ಸಿ. : IBKL0362TVC**
**ಬ್ಯಾಂಕ್ : IDBI BANK LTD**

# ಲಿಂಗಾಯತ ಧರ್ಮ: ಐದು ಟಿಪ್ಪಣಿಗಳು

**ಪ್ರಸ್ತಾವನೆ :** ಇಲ್ಲಿನ ಐದು ಟಿಪ್ಪಣಿಗಳಲ್ಲಿ ಲಿಂಗಾಯತ ಧರ್ಮವು ಹೇಗೆ ಬಸವ ಸಂವಿಧಾನದ ಮೌಲ್ಯಗಳನ್ನು ಕಟ್ಟಿಕೊಂಡಿದೆ ಮತ್ತು ಅದನ್ನು ಎಲ್ಲ ಇತಿಮಿತಿಗಳಲ್ಲಿ ಲಿಂಗಾಯತರು ಅನುಸರಿಸಿಕೊಂಡು ಬರುತ್ತಿದ್ದಾರೆ ಎಂಬುದನ್ನು ಗುರುತಿಸಲು–ವಿವರಿಸಲು ಪ್ರಯತ್ನಿಸಲಾಗಿದೆ. ಅದರ ಲಿಂಗ ಸಮಾನತೆ ತತ್ವ, ಸಮಾನತೆಯ ವಿವಿಧ ಮುಖಗಳು, ಕಾಯಕ, ಕರ್ಮ ಫಲಭೋಗ, ವಿಪ್ರಕರ್ಮದಿಂದ ಬಿಡುಗಡೆ, ನಮ್ಮ ಸಮಾಜದ ಬೃಹತ್ ಬೃಹತ್ವದ ಆಯಾಮಗಳು ಮುಂತಾದ ಸಂಗತಿಗಳನ್ನು ಇಲ್ಲಿ ವಚನಗಳನ್ನು ಮೂಲವಾಗಿಟ್ಟುಕೊಂಡು ವಿಶ್ಲೇಷಣೆ ಮಾಡಲಾಗಿದೆ. ಲಿಂಗಾಯತ ಧರ್ಮದ ಒಂದು ಸ್ಥೂಲ ಚಿತ್ರವನ್ನು ಇಲ್ಲಿ ಟಿಪ್ಪಣಿಗಳು ಮತ್ತು ವಚನಗಳು ನೀಡುತ್ತದೆ.

**(1) ಲಿಂಗ ಸಮಾನತೆಯ ತತ್ವ :**

ಜಗತ್ತಿನ ಧರ್ಮಗಳಲ್ಲಿ ಮಹಿಳೆಯರಿಗೆ ಸ್ವಾತಂತ್ರ್ಯಕ್ಕಿಂತ ಸಂಕೋಲೆಗಳನ್ನು ತೊಡಿಸಿದ್ದೇ ಬಹಳ. ಸಂಪ್ರದಾಯದ ಹೆಸರಿನಲ್ಲಿ ಅವರನ್ನು ಮನೆಯ ಒಳಗೆ ಕೂಡಿಹಾಕಲಾಗಿತ್ತು. ಈಗಲೂ ಅನೇಕ ಧರ್ಮಗಳಲ್ಲಿ ಮಹಿಳೆಯರ ಜಗತ್ತೇನಿದ್ದರೂ ಮನೆ, ಗಂಡ. ಕುಟುಂಬ ಮಕ್ಕಳು ಎಂದು ನಿರ್ಬಂಧಗಳನ್ನು ಹೇರಲಾಗಿದೆ. ಮಹಿಳೆಯರು ಗುಡಿಯೊಳಗೆ ಪ್ರವೇಶಿಸಬಾರದು ಎನ್ನುವ ಧರ್ಮಗಳು ನಮ್ಮಲ್ಲಿವೆ. ಅದಕ್ಕಾಗಿ ಹೋರಾಟ ಮಾಡುವ ಧಾರ್ಮಿಕರೂ ನಮಲ್ಲಿದ್ದಾರೆ. ಉದಾ: ಶಬರಿಮಲೆಯ ಅಯ್ಯಪ್ಪ ದೇವಸ್ಥಾನ, ಕೊಲ್ಹಾಪುರದ ಮಹಾಲಕ್ಷ್ಮಿ ದೇವಸ್ಥಾನ, ನಾಸಿಕರ ಹತ್ತಿರದ ತ್ರೆಯಂಬಕೇಶ್ವರ ದೇವಸ್ಥಾನ ಮುಂತಾದವುಗಳಲ್ಲಿ ಮಹಿಳೆಯರ ಪ್ರವೇಶವನ್ನು ನಿಷೇಧಿಸಲಾಗಿದೆ. (ಹೋರಾಟದ ನಂತರ ಕೆಲವು ಮಹಿಳೆಯರಿಗೆ ದೇವಾಲಯ ಪ್ರವೇಶ ನೀಡುತ್ತಿವೆ.)

ಈ ಎಲ್ಲ ಧರ್ಮಗಳಿಗೆ ಭಿನ್ನವಾಗಿ ಲಿಂಗಾಯತ ಧರ್ಮವು 850 ವರ್ಷಗಳ ಹಿಂದೆಯೇ ಮಹಿಳೆಯರಿಗೆ ಎಲ್ಲ ರೀತಿಯ ಸ್ವಾತಂತ್ರ್ಯವನ್ನು ಹಾಗೂ ಸಮಾನ ಹಕ್ಕುಗಳನು ನೀಡಿತ್ತು. ಶೂದ್ರರಿಗೆ, ದಲಿತರಿಗೆ ಮತ್ತು ಮಹಿಳೆಯರಿಗೆ ಅಕ್ಷರದ ಸಂಸ್ಕೃತಿಯನ್ನು ವೈದಿಕವು ನಿರಾಕರಿಸಿತ್ತು. ಬಸವಣ್ಣ, ಸಿದ್ದರಾಮಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ ಮುಂತಾದ ಶರಣರು–ಶರಣೆಯರ ಸಾಂಸ್ಕೃತಿಕ ಹೋರಾಟದ ಕಾರಣವಾಗಿ ಲಿಂಗಾಯತದಲ್ಲಿ ಮಹಿಳೆಯರಿಗೆ ಸಮಾನತೆಯ ಮೌಲ್ಯ ದೊರೆಕಿತ್ತು.

ಸರಿಸುಮಾರು 36 ಮಹಿಳೆಯರಿಗೆ ವಚನಗಳನ್ನು ಅಂದು ಬರೆಯುವುದು ಸಾಧ್ಯವಾಯಿತು. ಲಿಂಗಾಯತ ನೀಡಿದ್ದ ಸ್ವಾತಂತ್ರ್ಯದ ಫಲ ಅದಾಗಿತ್ತು. ಲಿಂಗಾಯತ ಧರ್ಮದ ಆಧಾರ ಸ್ತಂಭ ಸಮಾನತೆ. ಅಸಮಾನತೆ, ತಾರತಮ್ಯ, ಮೇಲು–ಕೀಳು, ಕನಿಷ್ಟ–ಶ್ರೇಷ್ಠ ಮುಂತಾದ ತರತಮದ ಆಚರಣೆಗಳನ್ನು ಶರಣರು–ಶರಣೆಯರು ತಿರಸ್ಕರಿಸಿದರು. ಕಾಶ್ಮೀರದಿಂದ ಬಂದವರು ಎನ್ನಲಾದ ಯುವರಾಣಿ ಬೊಂತಾದೇವಿ ಎನ್ನುವ ಶರಣೆಯು ತಾರತಮ್ಯರಹಿತ ಸಮಾಜದ ಕಲ್ಪನೆಯನ್ನು ಒಂದು ವಚನದಲ್ಲಿ ಹೀಗೆ ಸೆರೆ ಹಿಡಿದಿದ್ದಾಳೆ.

**ಊರ ಒಳಗಣ ಬಯಲು, ಊರ ಹೊರಗಣ ಬಯಲೆಂದುಂಟೆ?**
**ಊರೊಳಗೆ ಬ್ರಾಹ್ಮಣ ಬಯಲು,**
**ಊರ ಹೊರಗೆ ಹೊಲೆಬಯಲೆದುಂಟೆ?**
**ಎಲ್ಲ ನೋಡಿದರೂ ಬಯಲೊಂದೆ**
**ಭಿತ್ತಿಯಿಂದ ಒಳಹೊರಗೆಂಬ ನಾಮವೈಸೆ**
**ಎಲ್ಲಿ ನೋಡಿದಡೆ ಕರೆದಡೆ ಓ ಎಂಬಾತನೆ ಬಿಡಾಡಿ**

ವೈದಿಕ ಸಂಸ್ಕೃತಿಯು ಹೆಣ್ಣನನ್ನು ಒಡವೆ, ಆಸ್ತಿ, ಸರಕು ಎಂಬಂತೆ ಪರಿಭಾವಿಸಿಕೊಂಡಿತ್ತು. ಸೂತಕ ಎಂಬ ಶಾಪಕ್ಕೆ ಅವಳನ್ನು ದೂಡಿತ್ತು. ಆದರೆ ಶರಣ–ಶರಣೆಯರಿಗೆ ಹೆಣ್ಣು ಒಡವೆಯಲ್ಲ ಸೂತಕವೂ ಅಲ್ಲ. .
ಸಿದ್ಧರಾಮಣ್ಣ ಅವರು ಹೇಳಿದಂತೆ :

'ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ, ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ'. ಒಂದು ವಚನದಲ್ಲಿ ಅಕ್ಕಮಹಾದೇವಿಯವರು 'ಎನ್ನ ದೇವ ಚನ್ನಮಲ್ಲಿಕಾರ್ಜುನನೆಂಬ ಗರುವಂಗೆ ಜಗವೆಲ್ಲ ಹೆಣ್ಣು ನೋಡಾ' ಎನ್ನುತ್ತಾರೆ. ಮಹಿಳಾ ಜಗತ್ತನ್ನು ಸೂತಕದ ಶಾಪದಿಂದ ಲಿಂಗಾಯತವು ಬಿಡುಗಡೆಗೊಳಿಸಿತು. ಲಿಂಗಾಯತದಲ್ಲಿ ಮಹಿಳೆಯು ಒಡವೆಯಲ್ಲ.

ಗೊಗ್ಗವ್ವೆ ಎಂಬ ಶರಣೆಯು ಸಮಾಜದಲ್ಲಿ ಅಂದು ವ್ಯಾಪಕವಾಗಿದ್ದ ಹೆಣ್ಣನ್ನು ಆಸ್ತಿಯೆಂದು, ಒಡವೆಯೆಂದು ಪರಿಗಣಿಸುತ್ತಿದ್ದ ನಂಬಿಕೆಯನ್ನು ತೊಡೆದು ಹಾಕಿ ಸಮಾನತೆಯ ಮೌಲ್ಯವನ್ನು



**ಪ್ರೊ. ಟಿ.ಆರ್.ಚಂದ್ರಶೇಖರ**
ವಿಶ್ರಾಂತ ಪ್ರಾಧ್ಯಾಪಕ, 2ನೆಯ ಮೇನ್, 4ನೆಯ ಕ್ರಾಸ್, ಬೇಗೂರು ಮುಖ್ಯ ರಸ್ತೆ. ಹೊಂಗಸಂದ್ರ–560 068, ಬೆಂಗಳೂರು.

ಪ್ರತಿಪಾದಿಸಿದಳು. ಅವಳ ವಚನ ಇಲ್ಲಿದೆ:

**ಗಂಡು ಮೋಹಿಸಿ ಹೆಣ್ಣ ಹಿಡಿದಡೆ,**
**ಅದು ಒಬ್ಬರ ಒಡವೆ ಎಂದು ಅರಿಯಬೇಕು**
**ಹೆಣ್ಣು ಮೋಹಿಸಿ ಗಂಡ ಹಿಡಿದಡೆ ಉತ್ತರವಾವುದೆಂದರಿಯಬೇಕು?**
**ಈ ಎರಡರ ಉಭಯವ ಕಳೆದು ಸುಖ ತಾನಾಗ ಬಲ್ಲಡೆ**
**ನಾಸ್ತಿನಾಥ ಪರಿಪೂರ್ಣನೆಂಬೆ**

ಈ ವಚನದಲ್ಲಿ ಗೊಗ್ಗವ್ವೆ ಅವರು ಯಾರಿಗೆ ಯಾರು ಒಡವೆಯಲ್ಲ. ಗಂಡು–ಹೆಣ್ಣು ಎಂಬ ಉಭಯ ತನವನ್ನು ಮೀರಿ ಎಲ್ಲರನ್ನು ಸಮಾನವಾಗಿ ನೊಡಿದರೆ ಮಾತ್ರ ಬದಕು ಸಾರ್ಥಕವಾಗುತ್ತದೆ ಎಂಬ ಸಾರ್ವತ್ರಿಕ ಮೌಲ್ಯವನ್ನು ಅಲ್ಲಿ ಅವರು ಪ್ರತಿಪಾದಿಸಿದ್ದಾರೆ.

ಅಲ್ಲಮಪ್ರಭುಗಳು ಒಂದು ವಚನದಲ್ಲಿ ದಾಂಪತ್ಯ ಹೇಗಿರಬೇಕು ಎಂಬುದನ್ನು ಅತ್ಯಂತ ಅರ್ಥಪೂರ್ಣವಾಗಿ ಹೇಳಿದ್ದಾರೆ.

**ಉಭಯ ದೃಷ್ಟಿ ಏಕದೃಷ್ಟಿಯಲ್ಲಿ ಕಾಬಂತೆ**
**ದಂಪತಿ ಏಕೋಭಾವದಲ್ಲಿ ನಿಂದಲ್ಲಿ**
**ಗುಹೇಶ್ವರನಿಗೆ ಅರ್ಪಿತವಾಗಿತ್ತು**

ಇಂತಹ ಅಮೋಘವಾದ ಲಿಂಗ ಸಮಾನತೆ ಸತ್ಯವನ್ನು ಪ್ರತಿಪಾಸಿದ ಲಿಂಗಾಯತ ಧರ್ಮಕ್ಕೆ ನಾವೆಲ್ಲ ಸೇರಿದ್ದೇವೆ ಎಂಬುದು ನಮ್ಮೆಲ್ಲರ ಪುಣ್ಯ. ವೈದಿಕತೆಯ ಗೊಡ್ಡು ಆಚರಣೆಗಳನ್ನು ಬಿಟ್ಟು ಲಿಂಗಾಯತ ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡು ನಾವೆಲ್ಲ ಸಿದ್ಧರಾಮಣ್ಣನವರ ಆಶೀರ್ವಾದಕ್ಕೆ ಪಾತ್ರರಾಗೋಣ.

### (2) ಜೇಡರ ದಾಸಿಮಯ್ಯಗಳ ಲಿಂಗ ಸಮಾನತೆ ತತ್ವ

ಜೇಡರ ದಾಸಿಮಯ್ಯಗಳು ಹಿರಿಯ ಶರಣರು. ಬಸವಣ್ಣನವರಿಗಿಂತ ಹಿರಿಯ ವಚನಕಾರರು ಮತ್ತು ಅವರ ಹಿರಿಯ ಸಮಕಾಲೀನರು. ಇವರು ಜನನ ಸರಿಸುಮಾರು ಕ್ರಿ. ಶ. 1140 ಎಂದು ಇತಿಹಾಸಕಾರರು ಹೇಳುತ್ತಾರೆ. ಇವರ ಪತ್ನಿ ದುಗ್ಗಳೆ. ಈ ದಂಪತಿಯ ಕಾಯಕ ನೇಕಾರಿಕೆ.– ಬಟ್ಟೆ ನೇಯುವುದು. ಇವರು ನೇಕಾರ ಸಮುದಾಯಕ್ಕೆ ಸೇರಿದ ಶರಣರು. ಶಿವನಿಂದ 'ತವನಿಧಿ'ಯನ್ನು ಪಡೆದ ಶರಣರು. ಇಂದಿನ ಕಲಬುರಗಿ ಪ್ರದೇಶದ ಸುರಪುರ ತಾಲ್ಲೂಕಿನ ಮುದನೂರು ಇವರು ಮೂಲ ಸ್ಥಳ. ಇವರೊಬ್ಬ ಐತಿಹಾಸಿಕ ಪುರುಷರು. ಏಕೆಂದರೆ ಇವರ ಬಗ್ಗೆ ಅನೇಕ ಶಾಸನಗಳು ದೊರೆತಿವೆ. ಬಸವಣ್ಣನವರು ತಮ್ಮ ಅನೇಕ ವಚನಗಳಲ್ಲಿ ದಾಸಿಮಯ್ಯಗಳನ್ನು ಸ್ಮರಿಸಿದ್ದಾರೆ.

ಇವರ ವಚನಗಳ ಮೂಲ ಸಂದೇಶವೆಂದರೆ ಸಮಾನತೆ. ಎಲ್ಲ ಬಗೆಯ ಅಸಮಾನತೆಯನ್ನು ಇವರ ವಚನಗಳು ವಿರೋಧಿಸುತ್ತವೆ. ಮುಖ್ಯವಾಗಿ ಹೆಣ್ಣು–ಗಂಡುಗಳ ನಡುವಿನ ಸಮಾನತೆಯನ್ನು ವಿವಿಧ ರೀತಿಯಲ್ಲಿ ಇವರು ವಚನಗಳಲ್ಲಿ ಮಂಡಿಸಿದ್ದಾರೆ. ಉದಾ:

**'ಮೊಲೆ ಮುಡಿ ಬಂದಡೆ ಹೆಣ್ಣೆಂಬರು,**
**ಗಡ್ಡ ಮೀಸೆ ಬಂದರೆ ಗಂಡೆಂಬರು.**
**ನಡುವೆ ಸುಳಿವಾತ್ಮ**
**ಗಂಡು ಅಲ್ಲ ಹೆಣ್ಣು ಅಲ್ಲ ಕಾಣಾ ರಾಮನಾಥ'**

**'ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ'**
**'ಗಂಡವುಳ್ಳಮ್ಮನ ಗೌರಿಯೆಂದು ಕಂಡಡೆ ಭೂಮಂಡಳಕ್ಕೆ**
**ಅರಸನಾಗಿ ಹುಟ್ಟುವನಾತನು'**

ಜೇಡರ ದಾಸಿಮಯ್ಯಗಳು ಸಮಾನತೆಯ ವಿವಿಧ ಮುಖಗಳ ಬಗ್ಗೆ ಮಾತನಾಡುತ್ತಾರೆ. ಆ ವಚನದ ಪಾಠ ಹೀಗಿದೆ:

**ಮಡದಿಯ ಪ್ರಾಣಕ್ಕೆ ಮೊಲೆ ಮುಡಿಯಿದ್ದೀತೆ?**
**ಒಡೆಯರ ಪ್ರಾಣಕ್ಕೆ ಇದ್ದೀತೆ ಯಜ್ಞೋಪವೀತ?**
**ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದನೆ ಹಿಡಿಗೋಲ?**
**ನೀ ತೊಡಕ್ಕಿಂದ ತೊಡಕ ನೀ ಲೋಕದ**
**ಜನರೆತ್ತ ಬಲ್ಲರೈ? ರಾಮನಾಥ**

ಈ ವಚನದ ನಾಲ್ಕು ಸಾಲುಗಳು ಪ್ರಶ್ನೆಗಳ ರೂಪದಲ್ಲಿವೆ. ಮುಡಿಯಿದ್ದೀತೆ, ಇದ್ದೀತೆ ಯಜ್ಞೋಪವೀತ, ಹಿಡಿದಿದ್ದನೆ ಹಿಡಿಗೋಲ, ಜನರೆತ್ತ ಬಲ್ಲರೈ ಇವೆಲ್ಲವೂ ಪ್ರಶ್ನೆಗಳು. ಈ ನಾಲ್ಕು ಸಾಲುಗಳು ಅಸಮಾನತೆಯ ವಿವಿಧ ರೂಪಗಳನ್ನು ಪ್ರತಿನಿಧಿಸುತ್ತವೆ,

(1) 'ಮಡದಿಯ ಪ್ರಾಣಕ್ಕೆ ಮೊಲೆಮುಡಿಯಿದ್ದೀತೆ' ಎಂಬ ಸಾಲು ಗಂಡು – ಹೆಣ್ಣಿನ ನಡುವಿನ ಅಸಮಾನತೆ ಬಗ್ಗೆ ಬೆಳಕು ಚೆಲ್ಲುತ್ತದೆ. ದಾಸಿಮಯ್ಯಗಳ ಮೂಲ ಸಿದ್ಧಾಂತವಾದ ಗಂಡು ಮತ್ತು ಹೆಣ್ಣುಗಳ ಪ್ರಾಣಕ್ಕೆ – ಆತ್ಮಕ್ಕೆ ಲಿಂಗಭೇದವಿಲ್ಲ. ಇದು ಹೆಣ್ಣಿನ ಆತ್ಮ – ಇದು ಗಂಡಿನ ಆತ್ಮ, ಇದು ಹೆಣ್ಣಿನ ಪ್ರಾಣ – ಇದು ಗಂಡಿನ ಪ್ರಾಣ ಎಂದು ವಿಂಗಡಿಸುವುದಕ್ಕೆ ಬರುವುದಿಲ್ಲ. ಮೊಲೆ – ಮುಡಿ ಮತ್ತು ಗಡ್ಡ–ಮೀಸೆಗಳು ಜೈವಿಕ ಉಪಾದಿಗಳು. ಅಂದರೆ ಜೈವಿಕವಾಗಿ ಇವುಗಳ ನಡುವೆ ಮೇಲು–ಕೀಳುಗಳಿಲ್ಲ – ಅಸಮಾನತೆಯಿಲ್ಲ. ಆದರೆ ಸಾಮಾಜಿಕವಾಗಿ ನಾವು ಲಿಂಗ ಅಸಮಾನತೆಯನ್ನು ಕಟ್ಟಿಕೊಂಡಿದ್ದೇವೆ.

ಹೆಣ್ಣು – ಗಂಡುಗಳ ನಡುವಿನ ಅಸಮಾನತೆಯು ಸಾಮಾಜಿಕವಾದುದೇ ವಿನಾ ಜೈವಿಕವಾದುದಲ್ಲ. ಹೆಣ್ಣು ಈ ಕೆಲಸ ಮಾಡಬೇಕು, ಗಂಡು ಈ ಕೆಲಸಗಳನ್ನು ಮಾಡಬೇಕು ಎಂಬ ಲೈಂಗಿಕ ಶ್ರಮ ವಿಭಜನೆಯು – ಸೆಕ್ಸುಯಲ್ ಡಿವಿಜನ್ ಆಫ್ ಲೇಬರ್ ಜೈವಿಕವಾದುದಲ್ಲ. ಇದನ್ನು ನಾವು ಸಾಮಾಜಿಕವಾಗಿ ಕಟ್ಟಿಕೊಂಡಿದ್ದೇವೆ.

ಮಕ್ಕಳನ್ನು ಹಡೆಯುವುದನ್ನು ಬಿಟ್ಟು ಗಂಡಸರು-ಹೆಂಗಸರು ಎಲ್ಲರೂ ಎಲ್ಲ ಕೆಲಸಗಳನ್ನೂ ಮಾಡಬಹುದು. ಕಸ ಗುಡಿಸುವುದು, ಅಡುಗೆ ಮಾಡುವುದು ಹೆಣ್ಣಿನ ಕೆಲಸ, ಉಳುಮೆ ಮಾಡುವುದು, ಮಾರುಕಟ್ಟೆಗೆ ಹೋಗುವುದು, ಆಫೀಸಿಗೆ ಹೋಗುವುದು ಗಂಡಿನ ಕೆಲಸ ಎಂಬುದಿಲ್ಲ. ಹೆಣ್ಣೂ ಆಫೀಸಿಗೆ ಹೋಗಬಹುದು, ಮಾರುಕಟ್ಟೆಯಲ್ಲಿ ವ್ಯಾಪಾರ ಮಾಡಬಹುದು. ಕೃಷಿಯ ಬೆನ್ನೆಲುಬೇ ಮಹಿಳೆಯರ ಶ್ರಮ.

ಗಂಡು-ಹೆಣ್ಣುಗಳ ನಡುವಿನ ಸಂಬಂಧವು ಸಾಮಾಜಿಕವಾಗಿ ರೂಪಿಸಿಕೊಂಡಿರುವ ವ್ಯವಸ್ಥೆ ಎಂಬುದನ್ನು ಅಕ್ಕಮ್ಮ ಹೀಗೆ ಹೇಳಿದ್ದಾಳೆ.

**'ಮೊಲೆ ಮುಡಿಯಿದ್ದುದೇ ಹೆಣ್ಣೆಂದು ಪ್ರಮಾಣಿಸಲಿಲ್ಲ,**
**ಕಾಸೆ ಮೀಸೆ ಕಠಾರವಿದ್ದುದೇ ಗಂಡೆಂದು ಪ್ರಮಾಣಿಸಲಿಲ್ಲ,**
**ಅದು ಜಗದ ಹಾಹೆ, ಬಲ್ಲವರ ನೀತಿಯಲ್ಲ'**

ಬಸವಣ್ಣನ ಸಂತತಿಗೆ, – ಬಸವಾದಿ ಶರಣರ ಕೂಡುಕುಟುಂಬಕ್ಕೆ ಲಿಂಗ ಭೇದವಿಲ್ಲ. ಜೆಂಡರ್ ಇನೀಕ್ವಾಲಿಟಿ ಇಲ್ಲ. ಇದು ದಾಸಿಮಯ್ಯಗಳ ಮುಖ್ಯ ಸಂದೇಶ.

(2) 'ಒಡೆಯರ ಪ್ರಾಣಕ್ಕೆ ಇದ್ದೀತೆ ಯಜ್ಞಾಪವೀತ' ಎಂಬುವಲ್ಲಿ ಜಾತಿ ಅಸಮಾನತೆಯ ಬಗ್ಗೆ ದಾಸಿಮಯ್ಯಗಳು ಮಾತನಾಡುತ್ತಿದ್ದಾರೆ.ಯಜ್ಞೋಪವೀತ ಧರಿಸಿಕೊಂಡೇ ಯಾರು ಹುಟ್ಟುವುದಿಲ್ಲ. ಅಂದರೆ ಬ್ರಾಹ್ಮಣರು- ಉನ್ನತ ಜಾತಿಗಳವರು ಹುಟ್ಟುತ್ತಲೇ ಯಜ್ಞೋಪವೀತವನ್ನು ಕಟ್ಟಿಕೊಂಡು ಹುಟ್ಟುವುದಿಲ್ಲ.ಯಜ್ಞೋಪವೀತ ಧರಿಸಿದವರೆಲ್ಲ ಶ್ರೇಷ್ಟರು-ಮಡಿವಂತರು ಪೂಜ್ಯರು ಎಂಬುದು ಸಾಮಾಜಿಕವಾದುದೇ ವಿನಾ ದೇವರ ಸೃಷ್ಟಿಯಲ್ಲ. ಇದು ಮನುಷ್ಯ ಮಾಡಿಕೊಂಡಿರುವ ಒಂದು ವ್ಯವಸ್ಥೆ.

(3). ಮೂರನೆಯ ಸಾಲಿನಲ್ಲಿಯ 'ಕಡೆಯವರು – ಅಂತ್ಯಜರು' ಎಂಬ ನುಡಿಗಳನ್ನು ವಿಶೇಷವಾಗಿ ನಾವು ಅರ್ಥ ಮಾಡಿಕೊಳ್ಳಬೇಕು.

ಕಡೆಯವರು ಎಂದರೆ ಸಾಮಾಜಿಕವಾಗಿ ಕೆಳಸ್ತರಕ್ಕೆ ಸೇರಿದವರು – ಆರ್ಥಿಕವಾಗಿ ದುರ್ಬಲರು ಎಂದು ಅಂತ್ಯಜರು ಎಂಬುದನ್ನು ಸಾಮಾಜಿಕವಾಗಿ ಕೀಳಾದವರು- ಅಸ್ಪೃಶ್ಯರು. ಇದೂ ಕೂಡ ಸಾಮಾಜಿಕವಾಗಿ ರೂಪಿಸಿಕೊಂಡಿರುವ ಒಂದು ವ್ಯವಸ್ಥೆ. ಹುಟ್ಟುತ್ತಲೇ ಯಾರೂ ಕೀಳು ಅಥವಾ ಹುಟ್ಟುತ್ತಲೇ ಯಾರೂ ಶ್ರೇಷ್ಟ ಎಂದು ಹುಟ್ಟುವುದಿಲ್ಲ.

'ಹುಟ್ಟಿನಿಂದ ಜಾತಿ ಬರುವುದಿಲ್ಲ' ಎಂಬುದು ದಾಸಿಮಯ್ಯಗಳ ಸಂದೇಶವಾಗಿದೆ.

ಇವೆಲ್ಲ ಸಾಮಾಜಿಕವಾದ ತೊಡಕುಗಳು, ಇವು ದೇವರು ಮಾಡಿದವುಗಳಲ್ಲ. ಈ ತೊಡಕನ್ನು ಜನರು ಅರ್ಥ ಮಾಡಿಕೊಳ್ಳುತ್ತಿಲ್ಲ – ತಿಳಿದುಕೊಳ್ಳುತ್ತಿಲ್ಲ. ಈ ತೊಡಕುಗಳು ಮನುಷ್ಯ ನಿರ್ಮಿತವೇ!

ಇದು ಜೇಡರ ದಾಸಿಮಯ್ಯಗಳ ವಚನದ ಪ್ರಮುಖ ಸಂದೇಶವಾಗಿದೆ.

ಈ ವಚನದಲ್ಲಿ ದಾಸಿಮಯ್ಯಗಳು ಗಂಡು-ಹೆಣ್ಣುಗಳ ನಡುವಿನ ಅಸಮಾನತೆಯನ್ನು ಸಾಮಾಜಿಕವಾದುದೇ ವಿನಾ ಜೈವಿಕಾದುದಲ್ಲ ಎಂಬುದನ್ನು ತೋರಿಸಿದ್ದಾರೆ.

ಯಜ್ಞೋಪವೀತ ಶ್ರೇಷ್ಠ, ಹಿಡಿಗೋಲು ಮೈಲಿಗೆ ಎಂಬ ಭಿನ್ನತೆಯನ್ನು ದಾಸಿಮಯ್ಯಗಳು ತಿರಸ್ಕರಿಸುತ್ತಾರೆ.

ಒಡೆಯರು-ಕಡೆಯವರು ಎಂಬ ಭಿನ್ನತೆಯನ್ನು ದಾಸಿಮಯ್ಯಗಳು ಒಪ್ಪುವುದಿಲ್ಲ. ಲಿಂಗ ಅಸಮಾನತೆಯನ್ನು, ಜಾತಿ ಅಸಮಾನತೆಯನ್ನು, ಆರ್ಥಿಕ ಅಸಮಾನತೆಯನ್ನು, ಶ್ರೇಷ್ಟ-ಕನಿಷ್ಟ ಎಂಬ ಭ್ರಮೆಯನ್ನು ತೊಡೆದು ಹಾಕುತ್ತಿದ್ದಾರೆ.

ಈ ಅಸಮಾನತೆಯ ತೊಡಕುಗಳು ಸಾಮಾಜಿಕವಾಗಿ ಕಟ್ಟಿರುವ ತೊಡಕುಗಳು. ಇವು ದೇವರು ನಿರ್ಮಿಸಿರುವ ತೊಡಕುಗಳಲ್ಲ. ಇವು ನಾವು ಮಾಡಿಕೊಂಡಿರುವ ತೊಡಕುಗಳಾಗಿರುವುದರಿಂದ ಅವುಗಳನ್ನು ನಾನು ತೊಡೆದು ಹಾಕಬಹುದು.

ದಾಸಿಮಯ್ಯಗಳನ್ನು ಸೇರಿಸಿಕೊಂಡು ಶರಣರಿಗೆ ಮಹಿಳೆಯರ ಬಗ್ಗೆ ಎಂತಹ ಗೌರವವಿತ್ತು ಎಂಬುದಕ್ಕೆ ಇವರ ಈ ವಚನ ಸಾಕ್ಷಿಯಾಗಿದೆ.

**ಬಂದುದನರಿದು ಬಳಸುವಳು,**
**ಬಂದುದ ಪರಿಣಮಿಸುವಳು,**
**ಬಂಧು-ಬಳಗವ ಮರಸುವಳು**
**ದುಗ್ಗಳೆಯ ತಂದು ಬದುಕಿದೆನು ಕಾಣಾ ರಾಮನಾಥ.**

ಹೆಣ್ಣಿನ ನಿರ್ವಹಣೆಯ ಗುಣವನ್ನು ಇಲ್ಲಿ ದಾಸಿಮಯ್ಯಗಳು ಗುರುತಿಸಿದ್ದಾರೆ. ದುಗ್ಗಳೆಯಿಂದ ಬದುಕಿದೆನು ಎನ್ನುವ ಮಾತಿನ ಮೂಲಕ ಹೆಣ್ಣಿನ ಗೌರವವನ್ನು ಮತ್ತು ಅವಳ ನಿರ್ವಹಣಾ ಜ್ಞಾನವನ್ನು ದಾಸಿಮಯ್ಯಗಳು ಮೆಚ್ಚಿಕೊಂಡು ಅವಳಿಗೆ ತಾನು 'ಋಣಿ' ಎನ್ನುವುದನ್ನು ಇಲ್ಲಿ ವಿವರಿಸುತ್ತಿದ್ದಾರೆ. ಇಂದಿಗೂ ಈ ಸಂದೇಶವು ಪ್ರಸ್ತುತವಾಗಿದೆ ಮತ್ತು ಅನುಕರಣೀಯವಾಗಿದೆ. ಇದು ವಚನಗಳ ಸಮಕಾಲೀನ ಗುಣವಾಗಿದೆ.

(3) ವಿಪ್ರಕರ್ಮದ ಬಲೆಯಿಂದ ಸಮಾಜದ ಬಿಡುಗಡೆ

ಇದಕ್ಕೆ ಸಂಬಂಧಿಸಿದ ಬಸವಣ್ಣನವರ ವಚನ:

**ಹೊನ್ನು ಹೆಣ್ಣು ಮಣ್ಣೆಂಬ ಕರ್ಮದ ಬಲೆಯಲ್ಲಿ ಸಿಲುಕಿ**
**ವೃಥಾಯ ಬರುದೊರೆ ಹೋಹ ಕೆಡುಕ ಹಾರವ ನಾನಲ್ಲ**
**ಹಾರುವೆನಯ್ಯಾ ಭಕ್ತರ ಬರವ ಗುಡಿಕಟ್ಟಿ**
**ಹಾರುವೆನಯ್ಯಾ ಶರಣರ ಬರವ ಗುಡಿಕಟ್ಟಿ**
**ಕೂಡಲಸಂಗಮದೇವನು ವಿಪ್ರಕರ್ಮವ ಬಿಡಿಸಿ**
**ಆಶುದ್ಧನ ಶುದ್ಧನ ಮಾಡಿದನಾಗಿ.**

(ಬಸವಯುಗದ ವಚನ ಮಹಾಸಂಪುಟ. 1. ಬಸವಣ್ಣನವರ ವಚನ ಸಂಪುಟ: ವಚನ ಸಂಖ್ಯೆ 716). ಬಸವಾದಿ ಶರಣರು 12ನೆಯ ಶತಮಾನದಲ್ಲಿ ಈ 'ವಿಪ್ರಕರ್ಮ'ದ ಬಿಡುಗಡೆಗಾಗಿ ಹೋರಾಟ ಮಾಡಿದರು. ಚಾತುರ್ವರ್ಣದ ಸಂಕೋಲೆಯಿಂದ ಸಮಾಜದ ವಿಮೋಚನೆಗಾಗಿ ಚಳುವಳಿ ನಡೆಸಿದರು. ಅಂದು ಸಮಾಜ ವಿಪ್ರಕರ್ಮದ ಶೋಷಣೆಗೆ ಒಳಗಾಗಿತ್ತು. 'ವಿಪ್ರ' ಎನ್ನುವುದು ಬ್ರಾಹ್ಮಣರಿಗೆ ಮಾತ್ರ ಎಂದಿದ್ದರೂ ಅದು ತ್ರೈವರ್ಣಿಕರಿಗೆ (ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ) ಅನ್ವಯವಾಗುತ್ತದೆ. ಈ ವಿಪ್ರಕರ್ಮದ ಬಲೆಯಲ್ಲಿ ಸಿಲುಕಿದ್ದು ದರಿಂದ ಜನರು 'ಅಶುದ್ಧ'ರಾಗಿದ್ದರು. ಈ ವಿಪ್ರಕರ್ಮದ ಬಂಧನದಿಂದ ಜನರನ್ನು ಬಿಡಿಸಿ ಬಸವಣ್ಣನವರು ಜನರನ್ನು 'ಶುದ್ಧ'ರನ್ನಾಗಿ ಮಾಡಿದರು. ಬಸವಣ್ಣನವರು ಬಳಸಿರುವ ನುಡಿ ವಿಪ್ರಕರ್ಮ ಎಂದರೇನು? ವಿಪ್ರ ಎಂದರೆ ಬ್ರಾಹ್ಮಣ. ಕರ್ಮ ಎಂದರೆ ಕ್ರಿಯೆ. ಬ್ರಾಹ್ಮಣರು ಆಚರಿಸುವ ಸಂಪ್ರದಾಯ, ವಿಧಿ-ವಿಧಾನಗಳು, ಯಜ್ಞ-ಯಾಗಾದಿಗಳು, ಹೋಮ-ಹವನಾದಿಗಳು, ದಾನ-ದಕ್ಷಿಣೆ ಉಂಬಳಿ, ರೂಢಿಗಳು ಮುಂತಾದವು. ವಿಪ್ರರು ತಮ್ಮನ್ನು ತಾವು ಶುದ್ಧರು ಎಂದು ಭಾವಿಸುತ್ತಾರೆ. ಇತರರೆಲ್ಲರೂ ಅಶುದ್ಧರು. ವಿಪ್ರರು ಜ್ಞಾನಿಗಳು. ಇತರರಿಗೆ ಜ್ಞಾನದ ಹಕ್ಕಿಲ್ಲ. ಅವರು ವೇದ-ಶಾಸ್ತ್ರ-ಆಗಮ-ತರ್ಕ-ಪುರಾಣಗಳ ವಿದ್ವಾಂಸರು. ಇತರರು ಅವುಗಳನ್ನು ಅಧ್ಯಯನ ಮಾಡುವಂತಿಲ್ಲ. ವೇದ-ಆಗಮ, ಸಂಪ್ರದಾಯ, ಷಟ್‌ಕರ್ಮಗಳು ಮುಂತಾದವು ಬ್ರಾಹ್ಮಣರಿಗೆ ಮೀಸಲಾಗಿದ್ದವು. ಅವರು ಮಾತ್ರ ಶುದ್ಧರು-ಸ್ಪೃಶ್ಯರು. ವಿಪ್ರಕರ್ಮದಲ್ಲಿ ದುಡಿಮೆಯ ಅಂಶ ಒಂದೂ ಇಲ್ಲ. ಏಕೆಂದರೆ ಚಾತುರ್ವರ್ಣದಲ್ಲಿ ಶ್ರಮವನ್ನು ಶೂದ್ರರಿಗೆ ವಿಧಿಸಲಾಗಿದೆ. ದೈಹಿಕ ದುಡಿಮೆ ಮತ್ತು ಬೌದ್ಧಿಕ ದುಡಿಮೆ ಎಂಬ ವಿಭಜನೆಯನ್ನು ವಿಪ್ರಕರ್ಮ ಮಾಡಿತ್ತು. ವಿಪ್ರಕರ್ಮಶಾಸ್ತ್ರದಲ್ಲಿ ತ್ರೈವರ್ಣಿಕರು ಮಾತ್ರ ಶುದ್ಧರು. ಏಕೆಂದರೆ ಅವರು ಮಾತ್ರ 'ದ್ವಿಜರು'. ದ್ವಿಜರಿಗೆ ಮಾತ್ರ ಅಕ್ಷರ ಸಂಸ್ಕೃತಿ. ಚಾತುರ್ವರ್ಣದ ಶೂದ್ರರಿಗೆ 'ದ್ವಿಜತ್ವ'ವಿಲ್ಲ. ಆದ್ದರಿಂದ ಅವರು 'ಅಶುದ್ಧರು'. ಈ ಬಗೆಯ ಅಸಮಾನತೆಯನ್ನು ಹಾಸಿಕೊಂಡು ಹೊದ್ದುಕೊಂಡಿದ್ದ ವಿಪ್ರಕರ್ಮ ಪ್ರಣಾಳಿಕೆಯನ್ನು ತೊಡೆದು ಹಾಕುವುದು ಬಸವಾದಿ ಶರಣರ ಮುಂದಿದ್ದ ಸವಾಲಾಗಿತ್ತು. ಈ ಅಸಮಾನತೆ ಪ್ರಣಾಳಿಕೆಯ 'ವಿಪ್ರಕರ್ಮ'ವನ್ನು ಬಸವಣ್ಣನವರು ತಲೆಕೆಳಗು ಮಾಡಿದರು. ಬಸವಣ್ಣನವರ ಪ್ರಕಾರ ವಿಪ್ರಕರ್ಮದ ಬಲೆಯಲ್ಲಿರುವವರು 'ಅಶುದ್ಧ'ರು. ವಿಪ್ರಕರ್ಮದದಿಂದ ಬಿಡುಗಡೆ ಪಡೆದವರೆಲ್ಲರೂ ಶುದ್ಧರು. ಬಸವಣ್ಣನವರ ಹೋರಾಟವು ಈ ಅಶುದ್ಧತೆಯನ್ನು ತೊಡದು ಹಾಕುವುದನ್ನು ಗುರಿಯಾಗಿಸಿಕೊಂಡಿತ್ತು.

ವಿಪ್ರಕರ್ಮದ ಮತ್ತೊಂದು ಪ್ರಮುಖ ಅಸಮಾನತೆಯ ನೆಲೆಯೆಂದರೆ ಇದು 'ಪುರುಷ'ರಿಗೆ ಮಾತ್ರ ಸಲ್ಲುವ ಪ್ರಣಾಳಿಕೆಯಾಗಿತ್ತು. ಚಾತುರ್ವರ್ಣದಲ್ಲಿ ಮಹಿಳೆಯರು ಖಾಯಮಾಗಿ ಅಶುದ್ಧರು. ಅವರಿಗೆ ದ್ವಿಜತ್ವವಿಲ್ಲ. ಆದ್ದರಿಂದ ತ್ರೈವರ್ಣಿಕದ ಎಲ್ಲ ಮಹಿಳೆಯರೂ 'ಶೂದ್ರ'ರು. ಅವರಿಗೆ ಅಕ್ಷರ ಸಂಸ್ಕೃತಿಯಿಲ್ಲ, ಸ್ವಾತಂತ್ರ್ಯವಿಲ್ಲ, ಮೋಕ್ಷವಿಲ್ಲ, ಉದ್ಯೋಗವಿಲ್ಲ. ವಿಪ್ರಕರ್ಮದ ಬಂದನಕ್ಕೆ ಸಿಲುಕಿದ್ದ ಮಹಿಳೆಯರನ್ನು ಬಸವಾದಿ ಶರಣರು ಬಿಡುಗಡೆಗೊಳಿಸಿದರು. ವಿಪ್ರಕರ್ಮ ಎಂಬುದೊಂದು 'ವ್ಯರ್ಥ' ಕಸರತ್ತು. ವಿಪ್ರರಿಗೆ ಬದಲಾಗಿ ಬಸವಣ್ಣನವರ ಜಗತ್ತಿನಲ್ಲಿ ಇರುವವರು 'ಭಕ್ತರು' ಮತ್ತು 'ಶರಣರು'. ಇವರನ್ನು ಮಾತ್ರ ನಾನು 'ಸ್ವಾಗತಿಸುತ್ತೇನೆ, ಮೆರೆಯುತ್ತೇನೆ' ಎನ್ನುತ್ತಾರೆ ಬಸವಣ್ಣನವರು.

ಬಸವಣ್ಣನವರ ಪ್ರಕಾರ ವಿಪ್ರಕರ್ಮದ ಬಲೆಗಳು ಮೂರು: ಹೊನ್ನು, ಹೆಣ್ಣು ಮತ್ತು ಮಣ್ಣು. ಆದರೆ ಬಸವ ಸಂವಿಧಾನದಲ್ಲಿ ಇವು ಬಲೆಗಳಲ್ಲ. ಅಲ್ಲಮಪ್ರಭುಗಳು ಹೇಳುವ ಹಾಗೆ 'ಹೊನ್ನು, ಹೆಣ್ಣು ಮತ್ತು ಮಣ್ಣು ಮಾಯೆಯಲ್ಲ. ಮನದ ಮುಂದಣ ಆಸೆಯೇ ಮಾಯೆ'. 'ಹಾರುವರಿಗೆ' ಮಾತ್ರ ಇವು ಬಲೆಗಳು. ಬಸವ ಸಂವಿಧಾನದಲ್ಲಿ ವಿಪ್ರಕರ್ಮಕ್ಕೆ ಬದಲಾಗಿ 'ಕಾಯಕ - ದಾಸೋಹ' ಪ್ರಣಾಳಿಕೆಯನ್ನು ರೂಪಿಸಲಾಯಿತು. ಯಜ್ಞ-ಯಾಗಗಳಿಗೆ ಬದಲಾಗಿ ಬಸವಾದಿ ಶರಣರು ರೂಪಿಸಿದ್ದು ಕಾಯಕ ಪ್ರಣಾಳಿಕೆ. ದಾನಕ್ಕೆ ಪ್ರತಿಯಾಗಿ ದಾಸೋಹ ಪದ್ಧತಿಯನ್ನು ರೂಪಿಸಿದರು. ದಾನ-ದಕ್ಷಿಣೆಗಳು ವಿಪ್ರಕರ್ಮದಲ್ಲಿ ವರಮಾನದ ಮೂಲವಾಗಿದ್ದರೆ ಬಸವ ಸಂವಿಧಾನದಲ್ಲಿ ದಾಸೋಹ - ಹಂಚಿಕೊಳ್ಳುವ ಪ್ರಣಾಳಿಕೆಯು ಸಾಮಾಜಿಕ ವ್ಯವಸ್ಥೆಯಾಗಿತ್ತು. ಪರಾವಲಂಬಿತನಕ್ಕೆ ಪ್ರತಿಯಾಗಿ ಲಿಂಗಾಯತ ಧರ್ಮದಲ್ಲಿ ಕಾಯಕವು ಅಭಿವೃದ್ಧಿಯ ಪ್ರಣಾಳಿಕೆಯಾಯಿತು.

ಇಂದು ಮತ್ತೆ ಲಿಂಗಾಯತ ಸಮಾಜವನ್ನು 'ವಿಪ್ರಕರ್ಮ' ಆವರಿಸಿಕೊಳ್ಳುತ್ತಿದೆ. ಯಜ್ಞ-ಯಾಗಗಳ, ಹೋಮ-ಹವನಗಳ ಪುನರುತ್ಥಾನದ ಪ್ರಯತ್ನಗಳು ನಡೆಯುತ್ತಿವೆ. ಸತ್ಯನಾರಾಯಣ ಪೂಜೆಯನ್ನು ಲಿಂಗಾಯತರು ಆಚರಿಸುವುದು ಹಾಸ್ಯಾಸ್ಪದ. ಲಿಂಗಾಯತರಿಗೆ ಇವುಗಳು ಸಲ್ಲ. 'ಲಿಂಗ ಪ್ರತಿಷ್ಠೆಯ ಮಾಡಿದವರಿಗೆ ನಾಯಕ ನರಕ' ಎಂದು ಅಲ್ಲಮಪ್ರಭುಗಳು ಆದೇಶ ನೀಡಿದ್ದರೆ ಇಂದು ದೇವಾಲಯಗಳ ನಿರ್ಮಾಣಕ್ಕೆ, ಪ್ರತಿಮೆಗಳ ಸ್ಥಾಪನೆಗೆ ಲಿಂಗಾಯತರು ಮುಂದಾಗಿದ್ದಾರೆ. ಇವು ಯಾವುವೂ ಬಸವ ಸಂವಿಧಾನದ ಭಾಗವಲ್ಲ. ಆದ್ದರಿಂದ 'ಸಮತಾ ಪ್ರಣಾಳಿಕೆ'ಯ ಸೂತ್ರದಾರರಾದ ಗುರುಸಿದ್ಧರಾಮಣ್ಣನವರ ಅನುಯಾಯಿಗಳಾದ ನಾವು ಇಂದು ನಮ್ಮನ್ನು

ಆವರಿಸಿಕೊಳ್ಳುತ್ತಿಯುಖ ಖಪ್ರಕರ್ಯು ಖಂದ ಬಿಡುಗಡೆಗೆ ಪ್ರಯತ್ನಿಸಬೇಕಾಗಿದೆ

**(4). ನಮ್ಮ ಸಂಸ್ಕೃತಿಯು ಏಕೀಕೃತ–ಏಕಾಕಾರ ಸಂಸ್ಕೃತಿಯಲ್ಲ!**

ನಮ್ಮ ದೇಶದಲ್ಲಿ ಆರ್ಥಿಕತೆಯಾಗಲಿ, ಸಮಾಜವಾಗಲಿ ಅಥವಾ ಸಾಂಸ್ಕೃತಿಕ ರಂಗವಾಗಲಿ ಅಥವಾ ಭಾಷಾ ಸಮುಚ್ಚಯವಾಗಲಿ, ಕೃಷಿ, ಕರಕುಶಲ ಕಲೆಗಳು ಮುಂತಾದವು ಏಕಘನಶಿಲಾರೂಪದವಲ್ಲ. ಅದರ ಮೂಲ ಗುಣವೇ ಬಹುತ್ವ. ನಮ್ಮದು ಮೂಲತಃ ಬಹುವಚನ ಸಂಸ್ಕೃತಿ. ಇಲ್ಲಿ ಶತಶತಮಾನಗಳಿಂದ ಅನೇಕ ಸಂಸ್ಕೃತಿಗಳು, ಅನೇಕ ಬಗೆಯ ಕೃಷಿ ವ್ಯವಸ್ಥೆಗಳು, ಅನೇಕ ಭಾಷೆಗಳು, ಅನೇಕ ಆಹಾರ ಪದ್ಧತಿಗಳು, ಅನೇಕ ಭೌಗೋಳಿಕ ಸ್ವರೂಪಗಳು ಒಟ್ಟಾಗಿ ಸೌಹಾರ್ದತೆಯಿಂದ ಬದುಕುತ್ತಿವೆ. ಇವೆಲ್ಲವನ್ನು ಏಕಘನಶೀಲಾ ರೂಪದಲ್ಲಿ 'ದುಂಡ'ಗೆ ಮಾಡುವುದು ಅಸಾಧ್ಯ. ನಮ್ಮ ದೇಶದ ಏಕತೆ, ಸಮಗ್ರತೆ, ಘನತೆ – ಎಲ್ಲವೂ ಅದರ ಬಹತ್ವದಲ್ಲಿ ಅಡಗಿದೆ. ಈ ಎಲ್ಲ ಮಾತು ಧರ್ಮಗಳಿಗೂ ಸಲ್ಲುತ್ತದೆ. ಭಾರತದಲ್ಲಿರುವುದು ಒಂದು ಧರ್ಮವಲ್ಲ. ಒಂದು ಭಾಷೆ, ಒಂದು ಕೃಷಿ, ಒಂದು ಮಳೆಮಾರುತ ಮುಂತಾದವು ಹೇಗೆ ಇಲ್ಲವೋ ಅದೇ ರೀತಿಯಲ್ಲಿ ಒಂದು ಧರ್ಮ ಎನ್ನುವುದು ಇಲ್ಲಿ ಇಲ್ಲ. ಭಾರತವು ಅನೇಕ ಧರ್ಮಗಳ ಆಡೋಂಬಲವಾಗಿದೆ. ಎಲ್ಲ ಧರ್ಮಗಳು ಶತಶತಮಾನಗಳಿಂದ ಇಲ್ಲಿ ಒಟ್ಟಿಗೆ ಸೌಹಾರ್ದಯುತವಾಗಿ, ಸಮರಸದಿಂದ ಬದುಕುತ್ತಿವೆ. ಇದೇ ರೀತಿಯಲ್ಲಿ ಕನ್ನಡ, ತಮಿಳು, ಬಂಗಾಳಿ, ಪಂಜಾಬ, ಮರಾಠಿ, ಕಾಶ್ಮೀರಿ ಮುಂತಾದ ಭಾಷೆಗಳು ಭಾರತೀಯ ಸಾಹಿತ್ಯವನ್ನು ಶ್ರೀಮಂತಗೊಳಿಸುತ್ತಿವೆ. ಮತ್ತೆ ಮತ್ತೆ ಮನದಟ್ಟು ಮಾಡಿಕೊಟ್ಟಿರುವಂತೆ ಕನ್ನಡದಂತೆ, ಮರಾಠಿಯಂತೆ, ಕಾಶ್ಮೀರಿಯಂತೆ ಹಿಂದಿಯು ಒಂದು ರಾಷ್ಟ್ರೀಯ ಭಾಷೆ. ಅದೊಂದೆ ರಾಷ್ಟ್ರೀಯ ಭಾಷೆಯಲ್ಲ. ಭಾರತದ ಎಲ್ಲ ಭಾಷೆಗಳು ರಾಷ್ಟ್ರೀಯ ಭಾಷೆಗಳೇ.

ಭಾರತದಲ್ಲಿನ ಅನೇಕ ಧರ್ಮಗಳಂತೆ ಲಿಂಗಾಯತವೂ ಒಂದು ಸರ್ವತಂತ್ರಸ್ವತಂತ್ರ ಧರ್ಮ. ಸಿಖ್, ಜೈನ, ಬೌದ್ಧ ಅಲ್ಪಸಂಖ್ಯಾತ ಧರ್ಮಗಳಂತೆ ಲಿಂಗಾಯತವು ಒಂದು ಜಾಗತಿಕ ಸರ್ವತಂತ್ರಸ್ವತಂತ್ರ ಧರ್ಮ. ಇದು 12ನೆಯ ಶತಮಾನದಲ್ಲಿ ಬಸವಣ್ಣ, ಸಿದ್ಧರಾಮಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ ಮುಂತಾದ ವಚನಕಾರರ–ಶರಣರ ಒಟ್ಟು ವಿಶ್ವಗುರುಯತ್ನದ ಫಲವಾಗಿ ಹುಟ್ಟಿದ ಧರ್ಮ. ನಮ್ಮ ಧರ್ಮಗುರು ಬಸವಣ್ಣ. ನಮ್ಮ ಧರ್ಮ ಲಾಂಛನ ಇಷ್ಟಲಿಂಗ. ನಮ್ಮ ಧರ್ಮ ಭಾಷೆ ಕನ್ನಡ. ನಮ್ಮ ಧರ್ಮ ಕ್ಷೇತ್ರ ಕೂಡಲಸಂಗಮ. ನಮ್ಮ ಧರ್ಮಗ್ರಂಥ ವಚನ ಕಟ್ಟುಗಳು. ಈ ಪವಿತ್ರ ಜಾಗತಿಕ ಲಿಂಗಾಯತದ ಅಂಗ ನೊಳಂಬ ಲಿಂಗಾಯತ. ಲಿಂಗಾಯತಕ್ಕೆ ಒಂದು ಚರಿತ್ರೆಯಿದೆ. ಒಂದು ಪರಂಪರೆಯಿದೆ, ಒಂದು ಸಿದ್ಧಾಂತವಿದೆ, ಅದರೇ ಆದ ಒಂದು 'ದರ್ಶನ'ವಿದೆ. ನಮ್ಮದು 850 ವರ್ಷಗಳ ಇತಿಹಾಸವಿರುವ ಧರ್ಮ. ಲಿಂಗಾಯತ ಮತ್ತಾವುದೋ ಧರ್ಮದ ಬಾಲಂಗೋಚಿಯಲ್ಲ. ನಮ್ಮ ದೇಶದಲ್ಲಿ ಸ್ಥಾಪಕರಿಲ್ಲದ ಧರ್ಮವಿದೆ. ಇದು ಸನಾತನ ಧರ್ಮವಲ್ಲ. ಇದು ವೇದಾಗಮಪ್ರಣೀತ ಧರ್ಮವಲ್ಲ.

ಲಿಂಗಾಯತವು ಜಾಗತಿಕ ಧರ್ಮ ಎನ್ನುವುದನ್ನು 12ನೆಯ ಶತಮಾನದಲ್ಲಿಯೇ ಬಸವಣ್ಣನವರು ಘೋಷಿಸಿದ್ದಾರೆ.

**ಜಗದಗಲ ಮುಗಿಲಗಲ, ಮಿಗೆಯಗಲ ನಿಮ್ಮಗಲ**<br>
**ಪಾತಾಳದಿಂದವೆ ಅತ್ತತ್ತ ನಿಮ್ಮ ಶ್ರೀಚರಣ**<br>
**ಬ್ರಹ್ಮಾಂಡದಿಂದವೆ ಅತ್ತತ್ತ ನಿಮ್ಮ ಶ್ರೀ ಮಕುಟ**<br>
**ಅಗಮ್ಯ, ಅಗೋಚರ, ಅಪ್ರತಿಮ ಲಿಂಗವೇ**<br>
**ಕೂಡಲಸಂಗಮದೇವಾ ಎನ್ನ ಕರಸ್ಥಳಕ್ಕೆ ಬಂದು ಚುಳುಕಾದಿರಲ್ಲ**

(ಬಸವಯುಗದ ವಚನ ಮಹಾಸಂಪುಟ, ಬಸವಣ್ಣನವರ ವಚನಸಂಪುಟ. ಪುಟ: 68)

ಲಿಂಗಾಯತವು ಜಾಗತಿಕ ಧರ್ಮ ಎನ್ನುವುದಕ್ಕೆ ಮೇಲಿನ ಬಸವತಂದೆಯ ಆದೇಶಕ್ಕಿಂತ ಮತ್ತೇನು ಸಾಕ್ಷಿ ಬೇಕು?. ಮೇಲಿನ ವಚನವು ಲಿಂಗಾಯತದ ಸೈದ್ಧಾಂತಿಕ ವಚನವಾಗಿದೆ. ವಚನದಲ್ಲಿನ ಪಾತಾಳ, ಬ್ರಹ್ಮಾಂಡ, ಅಗಮ್ಯ, ಅಗೋಚರ ಮತ್ತು ಅಪ್ರತಿಮ ನುಡಿಗಳು ಲಿಂಗಾಯತದ ಜಾಗತಿಕ ಸ್ವರೂಪವನ್ನು ಅರುಹುತ್ತಿದೆ.

ಬಸವ ಪ್ರಣೀತ ಲಿಂಗಾಯತವು ಸಮಾನತೆ ಪ್ರಣಾಳಿಕೆಯ ಧರ್ಮವಾಗಿದೆ. ಇದು ಸಕಲರನ್ನು 'ಒಳಗೊಳ್ಳುವ'(ಇನ್ ಕ್ಲೂಸಿವ್)ಧರ್ಮವಾಗಿದೆ. ಸಕಲರಿಗೆ ಲೇಸನ್ನು ಬಯಸುವ ಧರ್ಮ ಲಿಂಗಾಯತ. ಮಹಿಳೆಯರಿಗೆ ಧಾರ್ಮಿಕ ಹಕ್ಕನ್ನು, ಸಾಮಾಜಿಕವಾಗಿ ಪುರುಷರಿಗೆ ಸಮಾನವಾದ ಸ್ಥಾನಮಾನವನ್ನು ನೀಡಿದ ಧರ್ಮ ಲಿಂಗಾಯತ. ಇಂದು ನಾವು ಯಾವುದನ್ನು ಅಭಿವೃದ್ಧಿ ಮೀಮಾಂಸೆ ಎನ್ನುತ್ತೇವೆಯೋ ಅದರ ಪ್ರತಿರೂಪವೇ ಲಿಂಗಾಯತದ ಕಾಯಕ ಸಿದ್ಧಾಂತ. ಇದಕ್ಕೆ ಅಂಟಿಕೊಂಡಿರುವುದೇ ದಾಸೋಹ ಪ್ರಣಾಳಿಕೆ. ಗುರುಸಿದ್ಧರಾಮಣ್ಣನವರು ಹೇಳಿರುವಂತೆ 'ಕ್ರೀ' ಅಥವಾ ಕಾಯಕವು ಸುಖದ ಮೂಲವಾಗಿದೆ. ವೈದಿಕವು ಸುಖಕ್ಕೆ ದೈವಾರಾಧನೆ, ಅಭಿಷೇಕಗಳು, ದಾನ–ದತ್ತಿ–ದಕ್ಷಿಣೆಗಳು ಮುಖ್ಯವೆಂದರೆ ಲಿಂಗಾಯತವು ಕಾಯಕವು ಸುಖದ ಮೂಲ ಎಂದು ಹೇಳಿತು. ಕಾಯಕದ ಉದ್ದೇಶವೇ ದಾಸೋಹ. ದಾಸೋಹವು 'ಹಂಚಿಕೊಂಡು' ಉಣ್ಣುವ ವ್ಯವಸ್ಥೆಯಾಗಿದೆ. ಆದ್ದರಿಂದಲೇ ಕಾಯಕ ಸಿದ್ಧಾಂತವು ಇಂದಿನ ಅಭಿವೃದ್ಧಿ ಮೀಮಾಂಸೆಯ

ರೂಪವಾಗಿದೆ. ಈ ವಿಷಯ ಕುರಿತಂತೆ ಲದ್ದೆಯ ಸೋಮಣ್ಣನವರ ವಚನವು ಅನುಕರಣೀಯವಾಗಿದೆ.

**ಆವ ಕಾಯಕವಾದಡೂ ಸ್ವಕಾಯಕವ ಮಾಡಿ**
**ಗುರು ಲಿಂಗ ಜಂಗಮದ ಮುಂದಿಟ್ಟು**
**ಒಕ್ಕುದ ಹಾರೈಸಿ ಮಿಕ್ಕುದ ಕೈಗೊಂಡು, ವ್ಯಾಧಿ ಬಂದಡೆ ನರಳು, ಬೇನೆ ಬಂದಡೆ ಒರಲು**
**ಜೀವ ಹೋದಡೆ ಸಾಯಿ, ಇದಕ್ಕಾ ದೇವರ ಹಂಗೇಕೆ**
**ಭಾಪು ಲದ್ದೆಯ ಸೋಮ**

ಬಸವಣ್ಣನವರು ಒಂದು ವಚನದಲ್ಲಿ 'ಬಂದ ಬರವ ಅರಿದು ಮಾಡಿದೆಡೆ ಕೂಡಿಕೊಂಡಿಪ್ಪ ನಮ್ಮ ಕೂಡಲಸಂಗಮದೇವಾ' ಎನ್ನುತ್ತಾರೆ. ಎಲ್ಲರಿಗೂ ಕಷ್ಟಗಳು ಬರುತ್ತವೆ. ಅವನ್ನು ಅರ್ಥ ಮಾಡಿಕೊಂಡು, ಅವುಗಳ ಕಾರಣಗಳನ್ನು ಕಂಡುಕೊಂಡು ಕ್ರಮ ತೆಗೆದುಕೊಂಡರೆ ಅವು ಪರಿಹಾರವಾಗುತ್ತವೆ. ಇದಕ್ಕೆ ಬದಲಾಗಿ ಹರಕೆ ಕಟ್ಟಿಕೊಂಡರೆ, ದಾನ ಮಾಡಿದರೆ, ಅಭಿಷೇಕ ಮಾಡಿಸಿದರೆ ಕಷ್ಟಗಳು ಪರಿಹಾರವಾಗುವುದಲ್ಲ. ಲಿಂಗಾಯತ ಸಂಸ್ಕೃತಿಯು ಹಕ್ಕಿನ ಸಂಸ್ಕೃತಿಯೇ ವಿನಾ ಹಂಗಿನ ಸಂಸ್ಕೃತಿಯಲ್ಲ. ಲಿಂಗಾಯತವು ವೈಚಾರಿಕ–ವೈಜ್ಞಾನಿಕ ಧರ್ಮವೇ ವಿನಾ ಮೂಢನಂಬಕೆಯ–ಅಂಧಶ್ರದ್ಧೆಯ ಧರ್ಮವಲ್ಲ. ಈ ಹಿನ್ನೆಲೆಯಲ್ಲಿ ಲಿಂಗಾಯತವನ್ನು ಸರ್ವತಂತ್ರಸ್ವತಂತ್ರ ಧರ್ಮವೆಂದು ಮನ್ನಣೆ ಒಕ್ಕೂಟ ಸರ್ಕಾರ ನೀಡಬೇಕು. ಲಿಂಗಾಯತವು ಮತ್ತಾವುದೋ ಧರ್ಮದ ಅಂಗಸಂಸ್ಥೆಯಲ್ಲ.

**(5) ಬಸವಣ್ಣನವರ 'ಕರ್ಮಫಲಭೋಗ' ಸಿದ್ಧಾಂತ**

ಬಸವ ಪ್ರಣಾಳಿಕೆಯ ಕರ್ಮಫಲಭೊಗ ಸಿದ್ಧಾಂತ ಮತ್ತು ಚಾತುರ್ವರ್ಣ(ಭಗವದ್ಗೀತೆ)ದ ಕರ್ಮಫಲತ್ಯಾಗ ಸಿದ್ಧಾಂತಗಳ ನಡುವಿನ ಹಿಮಾಲಯ ಸದೃಶ ಭಿನ್ನತೆಯನ್ನು ಮತ್ತು ಬಸವ ಪ್ರಣಾಳಿಕೆಯ ಕರ್ಮಫಲಭೋಗವು ಚಾತುರ್ವರ್ಣದ ಕರ್ಮಫಲತ್ಯಾಗ ಸಿದ್ಧಾಂತಕ್ಕಿಂತ ಏಕೆ ಪ್ರಸ್ತುತವಾದುದು – ಮಹತ್ವವಾದುದು ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ. ಏಕೆಂದರೆ ಮೊದಲನೆಯದು ಅಭಿವೃದ್ಧಿ–ಸ್ಪಂದಿ ಪ್ರಣಾಳಿಕೆಯಾಗಿದ್ದರೆ ಎರಡನೆಯದು ಯಥಾಸ್ಥಿತಿವಾದಿ ಪ್ರಣಾಳಿಕೆಯಾಗಿದೆ.

ಬಸವಣ್ಣನವರ ಕಾಯಕ ಸಿದ್ಧಾಂತದ ಮುಖ್ಯವಾದ ಆಯಾಮವೆಂದರೆ ಅದು ಕರ್ಮಫಲಭೋಗವವನ್ನು ಒಳಗೊಂಡ ಒಂದು ಪ್ರಕ್ರಿಯೆಯಾಗಿದೆ. ಬಸವ ಪ್ರಣಾಳಿಕೆ ಯಲ್ಲಿ ಕರ್ಮಕ್ಕೆ – ಕಾಯಕಕ್ಕೆ ಫಲ ಬೇಕು. ಆದ್ದರಿಂದ ಕಾಯಕವು ಪಲಾಪೇಕ್ಷೆಯನ್ನು ಒಳಗೊಂಡ ಪ್ರಕ್ರಿಯೆಯಾಗಿದೆ. ಏಕೆಂದರೆ ಕಾಯಕದ ಒಂದು ಉದ್ದೇಶ ದಾಸೋಹ. ಸಮೃದ್ಧವಾಗಿ ದಾಸೋಹ ಸಮಾಜದಲ್ಲಿ ನಡೆಯಬೇಕೆಂದರೆ ಕಾಯಕ ಮತ್ತು ಅದರ ಪ್ರತಿಫಲ ಸಮೃದ್ಧವಾಗಿರಬೇಕು. ಇದನ್ನು ಅನೇಕ ವಚನಕಾರರು ತಮ್ಮ ವಚನಗಳಲ್ಲಿ ಪ್ರತಿಪಾದಿಸಿದ್ದಾರೆ. ಆಯ್ದಕ್ಕಿ ಮಾರಯ್ಯವರ ವಚನವನ್ನು ಇದಕ್ಕೆ ಪುರಾವೆಯಾಗಿ ನೋಡಬಹುದು.

**ಹಾಗದ ಕಾಯಕವ ಮಾಡಿ ಹಣ ಅಡ್ಡವ ತಾ ಎಂಬಲ್ಲಿ**
**ಸತ್ಯದ ಕಾಯಕವುಂಟೆ?**
**ಭಕ್ತರಲ್ಲಿ ಕಾಯಕಕ್ಕೆ ಕಡಿಮೆಯಾಗಿ ತಾ ಎಂಬುದು**
**ಅಮರೇಶ್ವರಲಿಂಗಕ್ಕೆ ಚಿತ್ತಶುದ್ಧದ ಕಾಯಕ**

ಇಲ್ಲಿ ಮಾರಯ್ಯನವರು ಸತ್ಯದ ಕಾಯಕದ ಬಗ್ಗೆ ಮಾತನಾಡುತ್ತಿದ್ದಾರೆ. ಯಾವ ಕಾಯಕಕ್ಕೆ ಸಮನಾದ ಪ್ರತಿಫಲವಿದೆಯೋ(ಹಣ/ಕೂಲಿ) ಅದು ಸತ್ಯದ ಕಾಯಕ. ಹಾಗದ(ಸಣ್ಣ ನಾಣ್ಯ) ಕಾಯಕ ಮಾಡಿ ಅಡ್ಡದ ಹಣವನ್ನು(ದೊಡ್ಡ ನಾಣ್ಯ) ಬಯಸುವುದು ಸತ್ಯದ ಕಾಯಕವಲ್ಲ. ಕಾಯಕಕ್ಕೆ 'ಕಡಿಮೆ'ಯಾದ ಪರಿಹಾರವನ್ನು ಕೇಳುವುದು ಸತ್ಯದ ಕಾಯಕ. ಅದೇನೆ ಇರಲಿ. ಇಲ್ಲಿನ ಮುಖ್ಯ ಸಂದೇಶವೆಂದರೆ ಕಾಯಕಕ್ಕೆ ಪ್ರತಿಫಲ ಬೇಕು ಎಂಬುದಾಗಿದೆ. ಕಾಯಕಕ್ಕೆ ಸಮನಾದ ಹಣ ಬೇಕು. ಇದನ್ನೇ ನುಲಿಯ ಚಂದಯ್ಯನವರು 'ನೇಮದ ಕೂಲಿ' ಎನ್ನುತ್ತಾರೆ. ಬಸವಣ್ಣನವರು ಇದಕ್ಕೆ ಒಂದು ಸೈದ್ಧಾಂತಿಕ ನೆಲೆಯನ್ನು ತಮ್ಮ ಒಂದು ವಚನದಲ್ಲಿ ನೀಡಿದ್ದಾರೆ.

**ನಾನು ಆರಂಬವ ಮಾಡುವೆನಯ್ಯಾ ಗುರುಪೂಜೆಗೆಂದು**
**ನಾನು ಬೆವಹಾರವ ಮಾಡುವೆನಯ್ಯಾ ಲಿಂಗಾರ್ಚನೆಗೆಂದು**
**ನಾನು ಪರಸೇವೆಯ ಮಾಡುವೆನಯ್ಯಾ ಜಂಗನ ದಾಸೋಹಕ್ಕೆಂದು**
**ನಾನಾವಾವ ಕರ್ಮಂಗಳ ಮಾಡಿದಡೆಯು**
**ಆ ಕರ್ಮಫಲಭೋಗವ ನೀ ಕೂಡುವೆ ಎಂಬುದ ನಾನು ಬಲ್ಲೆ**
**ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದಕ್ಕೆ ಮಾಡೆನು**
**ನಿಮ್ಮ ಸೊಮ್ಮಿಂಗೆ ಸಲಿಸುವೆನು ನಿಮ್ಮಾಣೆ ಕೂಡಲಸಂಗಮದೇವಾ**

ಆರಂಬ (ವ್ಯವಸಾಯು) ಮಾಡಿ ಅದಕ್ಕೆ ಫಲವಿಲ್ಲದಿದ್ದರೆ ಗುರು ಪೂಜೆ ಹೇಗೆ ಸಾಧ್ಯ? ವ್ಯವಹಾರ/ವ್ಯಾಪಾರ ಮಾಡಿ ಅದಕ್ಕೆ ಲಾಭ ಬರದಿದ್ದರೆ ದಾಸೋಹವನ್ನು ಹೇಗೆ ಮಾಡುವುದು? ಆದ್ದರಿಂದ ಬಸವ ಸಂವಿಧಾನದಲ್ಲಿ ಯಾರು ಯಾವ ಕಾಯಕ ಮಾಡಿದರು ಅದಕ್ಕೆ ಫಲವನ್ನು ಕೂಡಲಸಂಗಮ ದೇವರು ನೀಡುತ್ತಾರೆ. ಅದನ್ನು ಭೋಗಿಸುದೇ ಆಚಾರ. ಇದನ್ನೇ ಬಸವಣ್ಣನವರು "ಕರ್ಮಫಲಭೋಗ" ಎಂದು ಕರೆದಿದ್ದಾರೆ. ಇಲ್ಲಿ "ಕರ್ಮ' ಎಂದರೆ ಕೆಲಸ/ಕಾಯಕ, 'ಫಲ' ಎಂದರೆ ಕಾಯಕಕ್ಕೆ ತಕ್ಕ ಪರಿಹಾರ, ಭೋಗ ಎಂದರೆ ಕಾಯಕದಿಂದ ಬಂದ ಫಲವನ್ನು ಅನುಭೋಗಿಸುವುದು. ಈ ಕರ್ಮಫಲಭೋಗ ಸಿದ್ಧಾಂತದ ಮಹತ್ವವನ್ನು ಲಿಂಗಾಯತರಾದ ನಾವು ಅರ್ಥ ಮಾಡಿಕೊಳ್ಳಬೇಕು. ಇದೇ ಆಶಯವನ್ನು ಅಲ್ಲಮಪ್ರಭು ದೇವರು ತನ್ನ ಒಂದು ವಚನದಲ್ಲಿ ಮತ್ತೊಂದು ರೀತಿಯಲ್ಲಿ

ಪ್ರತಿಪಾದಿಸಿದ್ದಾರೆ. ಅದರ ಪಾಠ ಇಲ್ಲಿದೆ.

**ಬೆವಸಾಯವ ಮಾಡಿ ಮನೆಯ ಬೀಯಕ್ಕೆ ಬತ್ತವಿಲ್ಲದಿರ್ದಡೆ**
**ಆ ಬೆವಸಾಯದ ಘೋರವೇತಕ್ಕಯ್ಯಾ?**
**ಕ್ರಯವಿಕ್ರಯವ ಮಾಡಿ ಮನೆಯ ಸಂಚ ನಡೆಯದನ್ನಕ್ಕ**
**ಆ ಕ್ರಯವಿಕ್ರಯದ ಘೋರವೇತಕಕ್ಕಯ್ಯಾ?**
**ಒಡೆಯನನೋಲೈಸಿ ತನುವಿಂಗೆ ಅಷ್ಟಭೋಗವ ಪಡೆಯದಿರ್ದಡೆ**
**ಓ ಓಲಗದ ಘೋರವೇತಕ್ಕಯ್ಯಾ?**
**ಭಕ್ತನಾಗಿ ಭವಂ ನಾಸ್ತಿಯಾಗದಿರ್ದಡೆ ಆ ಉಪದೇಶವ**
**ಕೊಟ್ಟ ಗುರು ಪಡೆದ ಶಿಷ್ಯ**
**ಇವರಿಬ್ಬರ ಮನೆಯಲ್ಲಿ ಮಾರಿ ಹೊಗಲಿ**
**ಗುಹೇಶ್ವರನೆಂಬವನತ್ತಲೆ ಹೋಗಲಿ**

ಈ ವಚನದ ಮೊದಲ ಮೂರು ಸಾಲುಗಳು ಬಸವಣ್ಣನ ವಚನದ ಮೂರು ಸಾಲುಗಳಿಗೆ ಸಂವಾದಿಯಾಗಿವೆ. ಅಲ್ಲಮಪ್ರಭುಗಳು ಇಲ್ಲಿ ಭವ ನಾಸ್ತಿಯಾಗುವುದನ್ನು ಭಕ್ತಿಯ ಪ್ರತಿಫಲ ಎಂದು ಹೇಳುತ್ತಿದ್ದಾರೆ. ಭಕ್ತಿಗೂ ಪ್ರತಿಫಲ ಬೇಕು ಎಂಬುದು ಇಲ್ಲಿನ ನಿಯಮವಾಗಿದೆ. ವಚನಕಾರರು ಅನ್ಯಾನ್ಯ ರೀತಿಯಲ್ಲಿ ಕರ್ಮಫಲಭೋಗ ಸಿದ್ಧಾಂತವನ್ನು ಮಂಡಿಸಿದ್ದಾರೆ.

ಇದು ನೇರವಾಗಿ ಭಗವದ್ಗೀತೆ ಬೋಧಿಸುವ "ಕರ್ಮಫಲತ್ಯಾಗ" ಸಿದ್ಧಾಂತಕ್ಕೆ ವಿರುದ್ಧವಾದುದು. ಬಸವ ಸಂವಿಧಾನದ ಕರ್ಮ/ಕಾಯಕವು ನಿಷ್ಕಾಮ ಕರ್ಮವಲ್ಲ ಅಥವಾ ಇದು ಕರ್ಮದ ಫಲವನ್ನು ತ್ಯಾಗ ಮಾಡುವ ಸಿದ್ಧಾಂತವಲ್ಲ. ಈ ವಿಷಯವನ್ನು ಬಸವಣ್ಣನವರು ಮತ್ತೊಂದು ವಚನದಲ್ಲಿ "ಒಲ್ಲೆನೆಂಬುದು ವೈರಾಗ್ಯ, ಒಲಿವೆನೆಂಬುದು ಕಾಯಗುಣ ಆವ ಪದಾರ್ಥವಾದಡೇನು? ತಾನಿದ್ದೆಡೆಗೆ ಬಂದುದ ಭೋಗಿಸುವುದೇ ಆಚಾರ. ಕೂಡಲಸಂಗಮದೇವರನೊಲಿಸಬಂದ ಪ್ರಸಾದ ಕಾಯವ ಕೆಡಿಸಲಾಗದು" ಎನ್ನುತ್ತಾರೆ. ಮಗದೊಂದು ವಚನದಲ್ಲಿ "ಹೊಯ್ದಡೆ ಹೊಯ್ಗಳು ಕೈಯ ಮೇಲೆ, ಬೈದಡೆ ಬೈಗಳು ಕೈಮೇಲೆ, ಹಿಂದಣ ಜನನವೇನಾದಡಾಗಲಿ ಇಂದಿನ ಭೋಗವು ಕೈಯ ಮೇಲೆ, ಕೂಡಲಸಂಗಮದೇವಯ್ಯಾ, ನಿಮ್ಮ ಪೂಜಿಸಿದ ಫಲ ಕೈಯ ಮೇಲೆ' ಎನ್ನುತ್ತಾರೆ. ಫಲದ ಬಗ್ಗೆ ಬಸವ ಪ್ರಣಾಳಿಕೆಯು ಜಾಗೃತವಾಗಿದೆ.

ಈ ಭಗವದ್ಗೀತೆಯು ಕರ್ಮಫಲತ್ಯಾಗ ಸಿದ್ಧಾಂತವನ್ನು ಪ್ರಸಿದ್ಧ ತತ್ವಶಾಸ್ತ್ರಜ್ಞ ಎಂ. ಹಿರಿಯಣ್ಣನವರು ಹೀಗೆ ಹೇಳಿದ್ದಾರೆ.

"We may conclude that the central point of teaching is activism or to use the expression of GITA, Karma Yoga. … The idea of result (ಫಲ) which is to ensure from the action (ಕರ್ಮ/ಕಾಯಕ) must be dismissed altogether form the mind before as well as during the act"(ಪುಟ: 118–119).

ಭಗವದ್ಗೀತೆಯ ಪ್ರಕಾರ ಕರ್ಮಕ್ಕೆ(ಕಾಯಕ/ಅಕ್ಷನ್)ಫಲವನ್ನು(ರಿಸಲ್ಟ್) ಅಪೇಕ್ಷಿಸಬಾರದು. ಫಲಾಪೇಕ್ಷೆಯನ್ನು ಮನಸ್ಸಿನಿಂದ ತೊಡೆದು ಹಾಕಬೇಕು. ಹೀಗೆ ಕಾಯಕ ಅಥವಾ ಕರ್ಮದ ಫಲವನ್ನು 'ತ್ಯಾಗ' ಮಾಡುವುದಾದರೆ ಅಲ್ಲಿ ಬದುಕು ಹೇಗೆ ಸಾಧ್ಯ? ಅಭಿವೃದ್ಧಿ ಬೇಗೆ ಸಾಧ್ಯ?. ಈ ಕಾರಣದಿಂದ ಭಗವದ್ಗೀತೆಯ 'ಕರ್ಮಫಲತ್ಯಾಗ' ಸಿದ್ಧಾಂತವು ಅಭಿವೃದ್ಧಿಯನ್ನು – ಜನಕಲ್ಯಾಣವನ್ನು ವಿರೋಧಿಸುವ ಸಿದ್ಧಾಂತವಾಗಿದೆ. ಈ ವ್ಯವಸ್ಥೆಯಲ್ಲಿ ಯಾರು ಯಾವ ಜಾತಿಯಲ್ಲಿ ಹುಟ್ಟಿರುತ್ತಾರೋ ಮತ್ತು ಯಾವ ವೃತ್ತಿಯನ್ನು ಮಾಡುತ್ತಿರುತ್ತಾರೋ ಅದರಲ್ಲಿಯೇ ಬದುಕನ್ನು ಕಳೆಯಬೇಕು. ಇದನ್ನು ವೈದಿಕ ಪರಿಭಾಷೆಯಲ್ಲಿ 'ಸ್ವಭಾವಜ' ಎನ್ನುತ್ತಾರೆ. ಈ ಸ್ವಭಾವಜ ಕರ್ಮವು ಅನುಲ್ಲಂಘನೀಯ ಈ ಸಿದ್ಧಾತದ ಪ್ರಕಾರ ಚಪ್ಪಲಿ ಹೊಲಿಯು ಕಾಯಕದಲ್ಲಿರುವವರು ಅದರಲ್ಲಿಯೇ ಬದುಕನ್ನು ಸಾಗಿಸಬೇಕು. ಯಾವುದೇ ಕಾರಣಕ್ಕೂ ಅದನ್ನು ಬದಲಾಯಿಸಬಾರದು. ಇದನ್ನು 'ಸ್ವಧರ್ಮ ನಿಧನಃ ಶ್ರೇಯಃ' ಎನ್ನುತ್ತದೆ ವೇದ'. ವೈದಿಕ ವ್ಯವಸ್ಥೆಯಲ್ಲಿ ಜಾತಿ–ವೃತ್ತಿಯನ್ನು ಬದಲಾಯಿಸುವಂತಿಲ್ಲ. ಪ್ರಸಿದ್ಧ ತತ್ವಶಾಸ್ತ್ರಜ್ಞ ಎಂ. ಹಿರಿಯಣ್ಣನವರು ತಮ್ಮ ಕೃತಿ "ಔಟ್‌ಲೈನ್ ಆಫ್ ಇಂಡಿಯನ್ ಫಿಲಾಸಫಿ"ಯಲ್ಲಿ ಭಗವದ್ಗೀತೆಯ ಸ್ವಭಾವಜ ಅಥವಾ ಸ್ವಧರ್ಮ ಎಂಬುದನ್ನು ಹೀಗೆ ನಿರ್ವಚಿಸಿದ್ದಾರೆ.

"Gita enjoins on all the performance of their respective duties. One should never abandon one`s specific work, whether it be high or low. It attaches little or no value to the intrinsic worth of the deed that is done by any person so long as it is his own dharma(sva-dharma)" (p: 123-124). Further 'The word sva-dharma means chiefly the duties incumbent upon the main classes into which society is divided'.

ಇದೊಂದು ಯಥಾಸ್ಥಿತಿವಾದಿ ಸಿದ್ಧಾಂತವಾಗಿದೆ. ಇಲ್ಲಿ ಸ್ವಧರ್ಮ ಎಂಬುದು ವರ್ಣ ನಿರ್ದಿಷ್ಟವಾದುದಾಗಿದೆ. ಆದರೆ ಬಸವ ಸಂವಿಧಾನದಲ್ಲಿ ಕಾಯಕಕ್ಕೆ ವರ್ಣ ಅಥವಾ ಜಾತಿಯ ಸಂಬಂಧವಿಲ್ಲ. ಬಸವ ಸಂವಿಧಾನದ ಕರ್ಮಫಲ ಭೋಗ ಸಿದ್ಧಾಂತವು ಗತಿಶೀಲವಾದುದು ಮತ್ತು ವೃತ್ತಿಯು ಜಾತಿಗೆ ಸಂಬಂಧಿಸಿದುದಲ್ಲ. ಬಸವಣ್ಣನವರೇ ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ್ದರೂ ಅವರು ಮಂತ್ರಿ ವೃತ್ತಿಯನ್ನು ನಿರ್ವಹಿಸಿದರು. ಆದ್ದರಿಂದ ಇಂದು ನಮ್ಮ ಸಮಾಜಕ್ಕೆ, ಆರ್ಥಿಕತೆಗೆ ಅಗತ್ಯವಾಗಿರುವುದು ಕರ್ಮಫಲಭೋಗ ಸಿದ್ಧಾಂತವೇ ವಿನಾ ಕರ್ಮಫಲತ್ಯಾಗ ಸಿದ್ಧಾಂತವಲ್ಲ.

# ಶೂದ್ರ ಕುಲದ, ಕುಡು ವಕ್ಕಲಿಗ ಜಾತಿಯಲ್ಲಿ ಹುಟ್ಟಿದ ಸಿದ್ಧರಾಮ ಶೈವ ಧರ್ಮದ 'ಗುರು' ಆದ ಲಿಂಗಾಯತ ಧರ್ಮದ ಜಗದ್ಗುರುವೂ ಆದ – ಅದು ಹೇಗೆ!

[ಸಿದ್ಧರಾಮೇಶ್ವರ ಜಯಂತಿಪ್ರಯುಕ್ತ ವಿಶೇಷ ಲೇಖನ]

ಯಾವುದೇ ಒಂದು ಸಮುದಾಯ, ತಾನು ಅಂಗೀಕರಿಸಿರುವ ಧರ್ಮದ ನೀತಿ, ನಿಯಮ, ನ್ಯಾಯಗಳಿಗೆ ಬದ್ಧರಾಗಿ ಅಧರ್ಮದ ತತ್ವ ಸಿದ್ಧಾಂತಗಳನ್ವಯ ಧಾರ್ಮಿಕ ವಿಧಿ–ವಿಧಾನಗಳನ್ನು ತನ್ನ ದೈನಂದಿನ ಆಚಾರ, ವಿಚಾರ, ನಡೆ ನುಡಿಗಳಲ್ಲಿ ತಪ್ಪದೆ ಪಾಲಿಸಿಕೊಂಡು ಬರುತ್ತಿದೆ ಎಂದಾದಲ್ಲಿ, ಅದರ ಪೂರ್ಣ ಶ್ರೇಯಸ್ಸು ಆ ಸಮುದಾಯದ ಧಾರ್ಮಿಕ ಹೊಣೆ ಹೊತ್ತ ಧರ್ಮದ ನಿರೂಪಕ, ನಿಯಂತ್ರಕ, ಮಾರ್ಗದರ್ಶಕರೂ ಆದ ಧರ್ಮ ಪೀಠದ ಧರ್ಮಾಧಿಕಾರಿ ಮಠಾಧೀಶರಿಗೆ ಸಲ್ಲುತ್ತದೆ.

ಶಕ 11ನೇ ಶತಮಾನಕ್ಕೂ ಪೂರ್ವದಲ್ಲಿ, ನೊಳಂಬ ಸಮುದಾಯ ಶೈವ ಧರ್ಮಾವಲಂಬಿಗಳಾಗಿ, ಕ್ಷತ್ರಿಯ ಧರ್ಮಪಾಲಕರಾಗಿದ್ದರು. ಎಂಬ ಸತ್ಯವನ್ನು ಶಾಸನಗಳು ಹೇಳುತ್ತವೆ. ಸಾಮಾಜಿಕವಾಗಿ ಹಾಗು ಧಾರ್ಮಿಕವಾಗಿ ನೊಳಂಬ ಸಮುದಾಯ ಉನ್ನತಮಟ್ಟದ ಸಮಾಜ ಎನಿಸಿಕೊಂಡಿತ್ತು. ಶಕ 1055ರಲ್ಲಿ ರಾಜಕೀಯದಳ್ಳುರಿಗೆ ಸಿಕ್ಕಿ ಈ ಸಮುದಾಯ ಎಲ್ಲವನ್ನು ಕಳೆದುಕೊಂಡು ನಿರಾಶ್ರಿತರಾಗಿ ನಿಯಂತ್ರಕ ಮಾರ್ಗದರ್ಶಕರಿಲ್ಲದೆ, ಸಾಮಾಜಿಕವಾಗಿ ಹಾಗು ಧಾರ್ಮಿಕವಾಗಿ ಹೀನ ಸ್ಥಿತಿಗಿಳಿದರು.

ಶಕ 1196 ರಲ್ಲಿ ಬಸವ ಪ್ರಣೀತ ಲಿಂಗಾಯತ ಧರ್ಮದ ಜಗದ್ಗುರು, 'ಶೂನ್ಯ' ಪೀಠಾಧೀಪತಿ ಶ್ರೀ ಗುರು ಸಿದ್ಧರಾಮೇಶ್ವರರ ಕೃಪಾದೃಷ್ಟಿಗೆ ಬಿದ್ದ ನೊಳಂಬ ಸಮುದಾಯ, ಲಿಂಗಾಯತ ಧರ್ಮವನ್ನು ಸ್ವೀಕರಿಸಿತು. ಸಿದ್ದರಾಮೇಶ್ವರರಿಂದ 'ಇಷ್ಟಲಿಂಗದೀಕ್ಷೆ' ಹೊಂದಿ ತಮ್ಮ 'ಭವಿ' (ಕರ್ಮವನ್ನು ಮಾಡ ಮತ್ತೆ ಮತ್ತೆ ಹುಟ್ಟು ಬರುವವನು) ಸಂಸ್ಕೃತಿಯಿಂದ ಮುಕ್ತರಾದರು.

ಜಗದ್ಗುರು ಶ್ರೀ ಸಿದ್ಧರಾಮೇಶ್ವರರಿಂದಾದ ಈ ಮಹೋಪಕಾರ ನೆನೆದು, ಅವರ ಜನ್ಮ ದಿನಾಚರಣೆಯನ್ನು ಭಕ್ತಿ ಶ್ರದ್ಧಾಪೂರ್ವಕವಾಗಿಒ ಆಚರಿಸಿಕೊಂಡು ಬರುತ್ತಿರುವ ಈ ಸಮುದಾಯ, ಅವರ ಮಹೋನ್ನತ ಜೀವನ ಚರಿತ್ರೆಯನ್ನು ತಿಳಿದುಕೊಂಡಿರುವುದಕ್ಕಿಂತಾ ತಿಳಿದುಕೊಂಡಿಲ್ಲದಿರುವುದೇ ಹೆಚ್ಚು.

ಶಕ ಹನ್ನೆರಡನೆ ಶತಮಾನದ ಸಾಮಾಜಿಕ ಪದ್ಧತಿಯಂತೆ ಜನಾಂಗವನ್ನು ನಾಲ್ಕು ವರ್ಗಗಳಾಗಿ ವಿಂಗಡಣೆಗೊಳಿಸಲಾಗಿತ್ತು. ಜನರ ಗುಣ–ಧರ್ಮಗಳಿಗೆ ಅನುಗುಣವಾಗಿ 'ಬ್ರಾಹ್ಮಣ' ಮೇಲುವರ್ಗವಾಗಿ 'ಶೂದ್ರ' ಅತ್ಯಂತ ಕೆಳವರ್ಗವಾಗಿ 'ಕ್ಷತ್ರಿಯ' ಮತ್ತು 'ವೈಶ್ಯ ಮಧ್ಯಮ ವರ್ಗವಾಗಿ ವಿಂಗಡಣೆಗೊಂಡಿತ್ತು. 'ಧರ್ಮ ಮತ್ತು ದೇವರು' ಬ್ರಾಹ್ಮಣ್ಯದ ಸ್ವತ್ತಾಗಿತ್ತು. ಇಂತಹ ಕಾಲದಲ್ಲಿ ಅತ್ಯಂತ ಕೆಳವರ್ಗದ 'ಶೂದ್ರ' ಕುಲದ, ಕುಡು ವಕ್ಕಲಿಗ ಜಾತಿಯಲ್ಲಿ ಹುಟ್ಟಿ ಬಂದ ಸಿದ್ಧರಾಮ ಶೈವ ಧರ್ಮದ 'ಗುರು'ವಾದದ ದ್ದಾರೂ ಹೇಗೆ! 'ಗುರು'ವಾಗುವ ಅರ್ಹತೆ ವದಗಿ ಬಂದಿದ್ದಾದರೂ ಹೇಗೆ! ಆ ಅರ್ಹತೆ ಗಳಿಸಲು ಸಾಮಾನ್ಯ ವಿದ್ಯಾಭ್ಯಾಸದ ಜೊತೆಗೆ ವಿಶೇಷವಾದ ಶೈವ ಧರ್ಮ ಶಿಕ್ಷಣ ದೊರೆತಿದ್ದಾದರೂ ಹೇಗೆ, ಸನ್ಯಾಸಿ ದೀಕ್ಷೆ ಮತ್ತು ಶೈವ ಧರ್ಮ ಗುರು ದೀಕ್ಷೆ ಕೊಟ್ಟು ಸೊನ್ನಲಾಪುರದ ಆಗಮೋಕ್ತ ಶೈವಧರ್ಮ ಸಂಸ್ಥಾನದ ಪೀಠಕ್ಕೆ ಗುರುವಾಗಿ ನಿಯಮಿಸಿದವರಾರು? ಈ ಎಲ್ಲಾ ಪ್ರಶ್ನೆಗಳಿಗೆ ಇಲ್ಲಲಿಯವರೆಗೆ ಯಾರೂ ಉತ್ತರ ಕಂಡುಕೊಂಡಂತೆ ಕಾಣುತ್ತಿಲ್ಲ ಅಲ್ಲವೇ?

ನಾನು, ನೀವು, ಮತ್ತು ಬೇರೆ ಎಲ್ಲರೂ ತಿಳಿದಿರುವಂತೆ ಮುಗ್ಧ, ಮೌನಿ, ಮೂಕ ಸಿದ್ಧರಾಮ, ಸೊನ್ನಲಾಪುರದ ಹೊರವಲಯದ ತನ್ನ ಹೊಲದ ಬದಿಯ ಮರದ ಕೆಳಗೆ ಕುಳಿತು ಕಣ್ಣು ಮುಚ್ಚಿ ಧ್ಯಾನಾಸಕ್ತನಾಗಿದ್ದಾಗ, ಶ್ರೀಶೈಲಕ್ಷೇತ್ರದ ಮಲ್ಲಯ್ಯನೆಂಬ ಜಂಗಮ ಬಂದು, ಹಸಿವಾಗಿದೆ ಮನೆಗೆ ಹೋಗಿ ಮೊಸರಂಬಲಿ ತಾ ಎಂದು ಕಳುಹಿಸಿ, ಸಿದ್ದರಾಮ ಬರುವುದರೊಳಗಾಗಿ ಅಲ್ಲಿರದಿರುವುದು, ಮಲ್ಲಯ್ಯನನ್ನು ಹುಡುಕಿಕೊಂಡು ಸಿದ್ಧರಾಮ ಶೀಶೈಲಕ್ಕೆ ಬರುವುದು, ಮಲ್ಲಯ್ಯ ಗುಡಿಯೊಳಗಿದ್ದಾನೆ ಎಂದು ಹೇಳಿ ತಿಳಿದದ್ದು ತಾನು ಕಂಡ ಮಲ್ಲಯ್ಯ



**ಚಂದ್ರಶೇಖರ ತಿ. ಚಿಂದಾಳ**
ಅಧ್ಯಕ್ಷರು, ಶ್ರೀಗುರು ಸಿದ್ಧರಾಮೇಶ್ವರ
ಜ್ಞಾನಪ್ರಸಾರ ಕೇಂದ್ರ, "ಬಸವ ಚೇತನ",
ತೋಟದ ಮನೆ, ಸಿದ್ಧರಾಮನಹಳ್ಳಿ, ಕಡೂರು
ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
ಮೊ : 6366052331, 9449115995

ಅಲ್ಲಿ ಇರದಿರುವುದು, ಮಲ್ಲಯ್ಯನನ್ನು ಹುಡುಕಿಕೊಂಡು ಕಾಡು–ಮೇಡು, ಹಳ್ಳ–ಕೊಳ್ಳ, ಗುಡ್ಡ–ಬೆಟ್ಟ, ಗವಿ–ಗವ್ವರ ಅಲೆದಿದ್ದು, ಪ್ರಾಣಾರ್ಪಣೆ ಮಾಡಲು ಶ್ರೀಶೈಲ ಶೀಖರದ ತುಟ್ಟ ತುದಿಯಿಂದ ರುದ್ರಗಮ್ಮರಿಗೆ ಹಾರಿದ್ದು, ನೆಲಕ್ಕಪ್ಪಳಿಸಿ ಸಾಯುವ ಮುಂಚೆ 'ಶಿವ' ಪಾರ್ವತಿ ಸಮೇತ ಪ್ರತ್ಯಕ್ಷನಾಗಿ ಸಿದ್ಧರಾಮನನ್ನು ಆತು ಹಿಡಿದು ಅಪ್ಪಿಕೊಂಡದ್ದು, ಶಿವ 'ಅಡಿಲಿಂಗ' ಸಿದ್ಧರಾಮನ ಕೈಲಿತ್ತು ಸೊನ್ನಲಿಗೆಯನ್ನು ಶ್ರೀಶೈಲದಂತೆ ಅಭಿವೃದ್ಧಿಪಡಿಸಲು ಆದೇಶವಿತ್ತು ಅಂತರ್ಧಾನ ನಾಗುವುದು. ಇಲ್ಲಿಗೆ ಸಿದ್ಧರಾಮನ ಬಾಲ್ಯ ಮುಗಿದಿದ್ದನ್ನು ತಿಳಿದಿದ್ದೇವೆ. ಮುಂದೆ ಅವನ 21ನೇ ವಯಸ್ಸಿನವರೆಗಿನ 14 ವರ್ಷಗಳನ್ನು ಎಲ್ಲಿ ಕಳೆದ ಯಾವ ರೀತಿಯಲ್ಲಿ ಕಳೆದ ಎಂಬುದಕ್ಕೆ ಪುರಾವೆ ದೊರಕದು. ಅದೂ ಅಲ್ಲದೆ, ಸಿದ್ಧರಾಮ ಶ್ರೀಶೈಲ ಶಿಖರದ ತುತ್ತ ತುದಿಯಿಂದ ರುದ್ರಗಮ್ಮರಿಗೆಯಲ್ಲಿ ಬಿದ್ದು ಪ್ರಾಣಾರ್ಪಣೆ ಮಾಡಿಕೊಳ್ಳುವ ಸಮಯಕ್ಕೆ ಸರಿಯಾಗಿ, ಶೀವ–ಪಾರ್ವತಿಯರು ಪ್ರತ್ಯಕ್ಷರಾಗಿ ಸಿದ್ಧರಾಮನನ್ನು ರಕ್ಷಿಸಿದರು ಎಂಬುದನ್ನು ಕಲಿಯುಗದಲ್ಲಿ ಒಪ್ಪತಕ್ಕ ಮಾತಲ್ಲ. ಕೃತ, ತ್ರೇತಾ, ದ್ವಾಪರ ಯುಗದಲ್ಲಿಯಾಗಿದ್ದರೆ ಒಪ್ಪಬಹು ದಾಗಿತ್ತು ಎಂಬುದು ಈ ಕಾಲದ ಪ್ರಗತಿಪರ ಚಿಂತಕರ ಬುದ್ಧಿಜೀವಿಗಳ, ಚಿಕಿತ್ಸಕ ಮನೋಭಾವದವರ ತರ್ಕಬದ್ಧ ಮಾತುಗಳೂ ಒಪ್ಪತಕ್ಕವುಗಳೇ ಅಲ್ಲವೇ! ಹಾಗಾದರೆ ಪ್ರಾಣಾರ್ಪಣೆ ಮಾಡಿಕೊಳ್ಳಲು ಹೊರಟ ಸಿದ್ಧರಾಮನನ್ನು ರಕ್ಷಿಸಿದವರು ಯಾರು? ಶಿವನಲ್ಲದಿದ್ದರೆ ಯಾರಾದರೂ ಒಬ್ಬರು ಬಂದು ರಕ್ಷಿಸಿರಬೇಕಲ್ಲವೇ!

ನನ್ನ ತೋಟದ ಮನೆಯ ಪುಸ್ತಕಗಳ ಸಂಗ್ರಹ ಕಪಾಟಿನಲ್ಲಿ ಪುಸ್ತಕ ಒಂದರ ಹುಡುಕಾಟದ ಸಮಯದಲ್ಲಿ; 'ಬಸವಪಥ' ಮಾಸಪತ್ರಿಕೆ ಕಣ್ಣಿಗೆಬಿದ್ದು ಅದನ್ನು ಎತ್ತಿಕೊಂಡೆ. ಬಸವ ಸಮಿತಿ ಬೆಂಗಳೂರು ಇವರಿಂದ ಪ್ರಕಟವಾದ ಜುಲೈ 2015ರ ಮಾಸಪತ್ರಿಕೆಯನ್ನು ಈ ಹಿಂದೆಯೇ ಓದಿ, ಸಿದ್ಧರಾಮನ ಬಾಲ್ಯದ ಒಂದು ಮಹತ್ವಪೂರ್ಣ ಮಾಹಿತಿ ಅದರಲ್ಲಿದ್ದುದರಿಂದ ಅಚಾನಕವಾಗಿ ಕೈಗೆ ಸಿಕ್ಕ ಈ ಮಾಸಪತ್ರಿಕೆಯಲ್ಲಿಯ ಸಿದ್ಧರಾಮನ ಬಾಲ್ಯದ ಮಹತ್ವಪೂರ್ಣ ವಿಷಯವಾಗಿ ಬೆಂಗಳೂರಿನ ಬೇಲೀಮಠಸಂಸ್ಥಾನದ ಅಧ್ಯಕ್ಷರಾದ ಪೂಜ್ಯ ಶ್ರೀ ಶಿವರುದ್ರಮಹಾಸ್ವಾಮಿಗಳ ಲೇಖನ ಒಂದರ ಪ್ಯಾರಾವನ್ನು ಯಥಾವತ್ತಾಗಿ ಕೊಡುತ್ತಿದ್ದೇನೆ.

"ಸೊನ್ನಲಿಗೆಯ ಸಿದ್ಧರಾಮ ಮಲ್ಲಿನಾಥನ ಕೃಪೆಗಾಗಿ ಶ್ರೀಶೈಲಕ್ಕೆ ಬಂದು ಗುಡಿಯೊಳಗಣ ಲಿಂಗದ ದರ್ಶನದಿಂದ ತೃಪ್ತನಾಗದೆ ಆತ್ಮಾರ್ಪಣೆಗೆ ಸಿದ್ಧನಾದ. ಶ್ರೀ ಶಿವಯೋಗಿ ಮಲ್ಲರಸರು (ಅವರನ್ನು ಪ್ರತ್ಯಕ್ಷ ಮಲ್ಲಿಕಾರ್ಜುನ ಎಂದು ಭಕ್ತರು ಭಾವಿಸಿದ್ದರು.) ಸಮಾಧಾನಗೊಳಿಸಿ ಸಾಕಾರ ನಿಷ್ಠೆ, ಭೂತಂಗಳೊಳು ಅನುಕಂಪೆ, ತಾನೇ ಪರ ಬೊಮ್ಮ ನೆಂಬ ನಿಶ್ಚಯ ಜ್ಞಾನಿಯನ್ನಾಗಿಸಿ ಮತ್ತೆ ಸೊಲ್ಲಾಪುರ ಕಲ್ಯಾಣಕ್ಕೆ ಹಿಂದಿರುಗುವಂತೆ ಮಾಡಿದ ಸಂಗತಿ ಲೋಕೋತ್ತರಗೊಂಡಿದೆ" ಎಂದಿದ್ದಾರೆ.

ಒಬ್ಬ ಸಾಮಾನ್ಯ, ಶೂದ್ರ ವರ್ಗದ, ಕುಡುವಕ್ಕಲಿಗ ಜಾತಿಯಲ್ಲಿ ಹುಟ್ಟಿದ ಮುಗ್ಧ, ಮೌನಿ, ಮೂಕ, ಏಳೆಂಟು ವರ್ಷ ವಯಸ್ಸಿನ ಬಾಲಕ ಸಿದ್ಧರಾಮನನ್ನು ರಕ್ಷಿಸಿ, ಸಹಕಾರ ನಿಷ್ಠೆ, ಭೂತಂಗಳೊಳು ಅನುಕಂಪೆ, ತಾನೇ ಪರಬೊಮ್ಮ ನೆಂಬ ನಿಶ್ಚಯ ಜ್ಞಾನಿಯನ್ನಾಗಿ ಪರಿವರ್ತಿಸುವುದೆಂದರೆ ಸಾಮಾನ್ಯ ವಿಷಯವೇನಲ್ಲ. ಇಂತಹ ಪರಿವರ್ತನೆಗೆ ತೆಗೆದುಕೊಂಡ ಕಾಲ ಸುಮಾರು 13 ವರ್ಷಗಳು ಎಂಬುದು ನೆನಪಿರಲಿ. ಸಿದ್ಧರಾಮನ ಈ ಪರಿವರ್ತನೆಗೆ ಕಾರಣ ರಾದವರು ಶ್ರೀ ಶಿವಯೋಗಿ ಮಲ್ಲರವರು. ಹಾಗಾದರೆ ಈ ಮಲ್ಲರವರು ಯಾರು?

ನಾಡಿನ ಹೆಸರಾಂತ ಸಂಶೋಧಕರು, ಘನ ವಿದ್ವಾಂಸರು, ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳು, ಪ್ರಾಚಾರ್ಯರು, ವಚನ ಸಂಪುಟಗಳ ಪ್ರಧಾನ ಸಂಪಾದಕರು, 'ಮಾರ್ಗ' ಸಾಹಿತ್ಯ ಸಂಪುಟಗಳ ಲೇಖಕರು, ಸಾಹಿತಿಗಳು ಆಗಿದ್ದ, ಲಿಂಗೈಕ್ಯ ಡಾ. ಎಂ.ಎಂ. ಕಲ್ಬುರ್ಗಿಯವರ ಮಾರ್ಗ ಸಂಪುಟ ನಾಲ್ಕು ಗ್ರಂಥದಲ್ಲಿ ಶ್ರೀ ಶಿವಯೋಗಿ ಮಲ್ಲರವರನ್ನು ಕುರಿತು ಬಂದಿದ್ದ ವಿವರಣೆಗಳನ್ನು ದಾಖಲಿಸಿದ್ದಾರೆ. ಇತಿಹಾಸ ಗ್ರಂಥಗಳ ಅಧ್ಯಯನಶೀಲ ವ್ಯಕ್ತಿಗಳಿಗೆ 'ಕೆರೆಯ ಪದ್ಮರಸರ' ಹೆಸರು ಚಿರಪರಿಚಿತ. ಕ್ರಿ.ಶ. 13ನೇ ಶತಮಾನದಲ್ಲಿ ಹೊಯ್ಸಳ ಸಾಮ್ರಾಜ್ಯದ ಮಂತ್ರಿಯಾಗಿದ್ದ ಪದ್ಮರಸರು, ರಾಜಧಾನಿ ದೋರಸಮುದ್ರದ (ಈಗಿನ ಹಳೇಬೀಡು) ನಗರದ ಮುಂದಿನ ಕೆರೆಯನ್ನು ಕಟ್ಟಿಸಿದವವಾದುದರಿಂದ 'ಕೆರೆಯ ಪದ್ಮರಸ' ಎಂದು ಪ್ರಸಿದ್ಧನಾದ. ಲಿಂಗಾಯತ ಧರ್ಮಕ್ಕೆ ಸಂಸ್ಕಾರ ಮುಖಾಂತರ ಪ್ರವೇಶ ನೀಡುವ ಪಠ್ಯಗ್ರಂಥ 'ದೀಕ್ಷಾಭೋದೆ' ಎಂಬ ಗ್ರಂಥ ರಚಿಸಿದವರು ಈ ಕೆರೆಯ ಪದ್ಮರಸ. ಕೆರೆಯ ಪದ್ಮರಸನ ತಂದೆ ಸಕಲೇಶ ಮಾದರಸರು. (ಸಿದ್ಧರಾಮನ ಬಾಲ್ಯದ ಗೆಳೆಯ) ಬಸವಣ್ಣನವರ ಸಮಾಜೋ–ಧಾರ್ಮಿಕ ಪರಿವರ್ತನಾ ಆಂದೋಳನದಲ್ಲಿ ಸಕ್ರಿಯವಾಗಿ ಭಾಗವಹಿಸಿದವ ಮತ್ತು ವಚನಕಾರ. ಈ ಸಕಲೇಶ ಮಾದರಸರ ತಂದೆಯೇ ಶ್ರೀ ಶಿವಯೋಗಿ ಮಲ್ಲರಸರು. (ತಿಳಿಯಿತಲ್ಲಾ ಶ್ರೀ ಶಿವಯೋಗಿ ಮಲ್ಲರಸರು ಯಾರು ಎಂದು.)

ಶ್ರೀಶೈಲ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಶ್ರೀಶೈಲ ಶಿಖರದ ಬುಡದ ವಿಶಾಲ ಸಮತಟ್ಟಾದ ಭೂಮಿಯಲ್ಲಿ, ಆಶ್ರಮ ಒಂದರ ನಿವಾಸಿಯಾಗಿದ್ದರು. ಶ್ರೀ ಶಿವಯೋಗಿ ಮಲ್ಲರಸರು, ಮಹಾಜ್ಞಾನಿಯು, ಮಹಾತಪಸ್ವಿಗಳೂ, ಸದಾ 'ಶಿವ' ಚಿಂತನಾ ನಿರತರೂ ಆಗಿದ್ದ ಶ್ರೀ ಶಿವಯೋಗಿ ಮಲ್ಲರಸರು, ಶ್ರೀಶೈಲ

ಕ್ಷೇತ್ರದಲ್ಲಿದ್ದ ಮಲ್ಲಿನಾಥ ವಿಶ್ವವಿದ್ಯಾಲಯದ ಕುಲಪತಿಗಳು, ಶೈವ ಧರ್ಮ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯರೂ ಆಗಿದ್ದರು. ಪರಧರ್ಮಗಳ ಆಕ್ರಮಣಕ್ಕೆ ಗುರಿಯಾಗಿ, ಮತ್ತು ದಕ್ಷ, ಪ್ರಾಮಾಣಿಕ, ಧರ್ಮ ನಿಷ್ಠ ಕಾರ್ಯಕರ್ತರ ಕೊರತೆಯನ್ನು ಅನುಭವಿಸುತ್ತಾ, ಶಕ್ತಿಗುಂದುತ್ತಿದ್ದ ಆಗಮೋಕ್ತ ಶೈವ ಧರ್ಮವನ್ನು ರಕ್ಷಿಸಲು, ನಾಡಿನಾದ್ಯಂತ ಸಂಚರಿಸುತ್ತಾ, ಬಾಲ ಪ್ರತಿಭೆಗಳನ್ನು ಹುಡುಕಿ ಕರೆತಂದು ಆಶ್ರಯ ನೀಡಿ ಪ್ರಾಥಮಿಕ ಹಂತದಿಂದ ಪದವಿಯೋತ್ತರ ಉನ್ನತ ಶಿಕ್ಷಣ ನೀಡಿ, ಅವರವರ ಯೋಗ್ಯತಾನುಸಾರ ಶೈವ ಧರ್ಮದ ವಿವಿಧ ಕಾರ್ಯಕ್ಷೇತ್ರಗಳಿಗೆ ನಿಯೋಜಿಸುವ ಬಹುದೊಡ್ಡ ಹೊರೆಯೂ ಅವರದಾಗಿತ್ತು. ಇಂತಹ ಮಹಾಮಹಿಮರಾದ ಶ್ರೀ ಶಿವಯೋಗಿ ಮಲ್ಲರಸರನ್ನು ಅಂದಿನ ಜನರು ಪ್ರತ್ಯಕ್ಷ ಮಲ್ಲಿಕಾರ್ಜುನ ಎಂದು ಭಾವಿಸಿ ಆರಾಧಿಸುತ್ತಿದ್ದರು. ಅದೊಂದು ದಿನ ಮುಂಜಾನೆ ನಸುಕಿನಲ್ಲಿ ತನ್ನ ಆಶ್ರಮದ ತಪೋವನದಲ್ಲಿ ಆಳವಾದ ಧ್ಯಾನದಲ್ಲಿ ಮುಳುಗಿದ್ದಾಗ ಒಂದು ದೃಶ್ಯ ಅವರ ಸ್ಮೃತಿಪಟಲದಲ್ಲಿ ಬಂದು ನಿಂತಂತಾಗಿ, ಥಟ್ಟನೆ ಎಚ್ಚರಗೊಂಡು ಎದ್ದು ಲಗುಬಗೆಯಿಂದ ಕಾವಿ ನಿಲುವಂಗಿ ತೊಟ್ಟು, ಕಾವಿರುಮಾಲು ತಲೆಗೆ ಸುತ್ತಿ, ಬಗಲಿಗೆ ಕಾವಿ ಜೋಳಿಗೆ ಸಿಗಿಸಿ, ಕಾಲಲ್ಲಿ ಹವುಗೆ ತೊಟ್ಟು, ಕೈಯಲ್ಲಿ ಬೆತ್ತದಕೋಲು ಹಿಡಿದು, ಆಶ್ರಮದಿಂದ ನಿರ್ಗಮಿಸಿ, ಬೆಟ್ಟದಿಂದ ಘಟ್ಟ ಇಳಿದು, ಸೊನ್ನಲಿಗೆಯ ದಾರಿ ಹಿಡಿದು ನಡೆಯತೊಡಗಿದರು. ಮಟ ಮಟ ಮಧ್ಯಾಹ್ನ ಸೊನ್ನಲಿಗೆ ಸಮೀಪಿಸುತ್ತಿದ್ದಂತೆ ದಾರಿಯ ಪಕ್ಕ ಮೈದಾನದಲ್ಲಿ ಎಂಟು ಹತ್ತು ಬಾಲಕರು ಗದ್ದಲ ಗೈಯುತ್ತಾ ಆಟವಾಡುತ್ತಿದ್ದುದನ್ನು ಗಮನಿಸಿದ ಶ್ರೀ ಶಿವಯೋಗಿ ಮಲ್ಲರಸರು, ತಾನು ಧ್ಯಾನಾವಸ್ಥೆಯಲ್ಲಿದ್ದಾಗ ಕಂಡ ದೃಶ್ಯ ಇದೇ ಇರಬಹುದೇ, ಈ ಹತ್ತು ಹುಡುಗರಲ್ಲಿ ತಾನು ಕಂಡ ಆ ಮುಖದ ಬಾಲಕ ಇರಬಹುದೇ, ಎಂದು ಯೋಚಿಸುತ್ತಾ ಆ ಕಡೆ ನಡೆದರು. ಯಾರೋ ಜಂಗಮಯ್ಯ ಬರುತ್ತಿರುವುದನ್ನು ನೋಡಿದ ಹುಡುಗರು ಆಟವಾಡುವುದನ್ನು ನಿಲ್ಲಿಸಿ, ಬಂದ ಜಂಗಮಯ್ಯನ ಸುತ್ತಾ ನಿಂತರು. ಶ್ರೀ ಶಿವಯೋಗಿ ಮಲ್ಲರಸರು ತಮ್ಮ ಜೋಳಿಗೆಯೊಳಗೆ ಕೈಹಾಕಿ ತಮ್ಮ ಸುತ್ತ ನಿಂತಿದ್ದ ಹುಡುಗರೆಲ್ಲರಿಗೂ ಹುಡಿ ಕಡಲೆ ಬೆಲ್ಲ ಹಂಚುತ್ತ ಒಬ್ಬೊಬ್ಬರ ಮುಖವನ್ನೂ ಪರಿಶೀಲಿಸ ತೊಡಗಿದರು. ಆದರೆ, ಆ ಮುಖದ ಬಾಲಕನಿಲ್ಲದಿರುವುದು ಅವರಿಗೆ ನಿರಾಶೆಯಾಯ್ತು. ದೃತಿಗೆಡದೆ ಮಕ್ಕಳೆ ನನಗೆ ಕೀಚುಗಾಳು ನವಣೆ ತಿನ್ನಬೇಕೆನಿಸಿದೆ, ಹೊಹೊತ್ತು ನವಣೆ ತೆನೆ ಹರಿದು ತರುವಿರ ಎನಲು, ಹೊಲ ನಮ್ಮದಲ್ಲ, ಓ.. ಅಲ್ಲಿ ಮರದಡಿ ನೆರಳಿನಲ್ಲಿ ಕಣ್ಣು ಮುಚ್ಚಿ ಕುಳಿತಿದ್ದಾನಲ್ಲ ಅವನದು. ಕೇಳೀದರೆ ನವಣೆ ತೆನೆ ಏನು, ನವಣೆ ಹೊಲವನ್ನೆ ಕೊಟ್ಟುಬಿಡುತ್ತಾನೆ, ಹೋಗಿ ಕೇಳಿ ಎಂದರು. ಮಲ್ಲರಸರ ಆಸೆ ಚಿಗುರೊಡೆಯಿತು. ಆ ಮುಖದ ಹುಡುಗ ಅವನಾಗಿರಬಹುದೇ ಎಂದು ಯೋಚಿಸುತ್ತಾ ಅವನೆಡೆಗೆ ನಡೆದರು. ಹೋಗಿ ನೋಡುತ್ತಾರೆ! ಏನಾಶ್ಚರ್ಯ 'ಅವನೇ ಇವನು' ಎಂದು ಮನಸ್ಸಿನಲ್ಲಿಯೇ ಉದ್ಗರಿಸಿದರು. ಬಾಲಕನ ಮುಂದೆ ನಿಂತು ನೋಡಿದರು. ನೋಡಿಯೇ ನೋಡುತ್ತಾ ನಿಂತೇಬಿಟ್ಟರು. ಶಿವಯೋಗಿಗಳು, ಎಷ್ಟೊತ್ತಾದರೂ ಎಚ್ಚರಗೊಳ್ಳಲೇ ಇಲ್ಲ. ಬಾಲಕ ತಾನೇ ಎಚ್ಚರಗೊಳಿಸಲು ಮುಂದಾಗಿ 'ಮಗೂ' ಎಂದು ಕರೆದರು. ಎಚ್ಚರಗೊಳ್ಳದಾದಾಗ ಅವನ ಮೈಮುಟ್ಟಿ ಅಲುಗಾಡಿಸಿ ಎಚ್ಚರಗೊಳ್ಳುವಂತೆ ಮಾಡಿದರು ಎಚ್ಚರಗೊಂಡು ಕಣ್ತೆರೆದ, ಬಾಲಕ, ಮುಂದೆ ನಿಂತಿದ್ದ ಜಂಗಮಯ್ಯನನ್ನು ನೋಡಿ ಅವಕ್ಕಾಗಿ ಎದ್ದು ನಿಂತು ಕಾಲಿಗೆರಗಿ 'ತಾವು ಯಾರು', ಹುಟ್ಟಿದಾರಭ್ಯ ಮಾತನಾಡದ ಸಿದ್ಧರಾಮನ ಮೊದಲ ಮಾತು ಇದು, ನಿನಗೆ ಮಾತು ಬರಲ್ಲ ಮೂಕ ಎಂದರಲ್ಲಾ ಆ ಹುಡುಗರು, ಎಂದರು ಮಲ್ಲರಸರು. ಅವರು ನನ್ನನ್ನು 'ದೂಳೀ ಮಾಕಾಳ' ಎಂದು ಕರೆಯುತ್ತಾರೆ. ಅದಕ್ಕೆ ಮಾತನಾಡಲ್ಲ ಎಂದ ಸಿದ್ಧರಾಮ. ಹಾಗಾದರೆ ನಿನ್ನ ಹೆಸರೇನು ಕೇಳಿದರು ಮಲ್ಲರಸರು. ನನ್ನ ಹೆಸರು ಸಿದ್ಧರಾಮ, ನಿಮ್ಮ ಹೆಸರು, ಊರು ಯಾವುದು, ನನ್ನನ್ನು ಮಲ್ಲಯ್ಯ ಎಂದು ಜನ ಪ್ರೀತಿಯಿಂದ ಕರೆಯುತ್ತಾರೆ. ನಾವಿರುವುದು ಶ್ರೀಶೈಲದಲ್ಲಿ ಎಂದರು ಮಲ್ಲರಸರು. ಮಗು ನೀನು ಕಣ್ಣು ಮುಚ್ಚಿ ಕುಳಿತು ಏನು ಮಾಡುತ್ತಿದ್ದೆ ಕೇಳಿದರು ಮಲ್ಲರಸರು. ದೇವರ ಧ್ಯಾನ ಮಾಡುತ್ತಿದ್ದೆ ಎಂದ ಸಿದ್ಧರಾಮ. ಮುಂದುವರಿದು ಮಲ್ಲಯ್ಯನವರೆ ನೀವು ದೇವರನ್ನು ನೋಡಿದ್ದೀರಾ. ಓ. ನೋಡಿದ್ದೀನಲ್ಲ ಎಂದರು ಮಲ್ಲರಸರು. ನನಗೂ ದೇವರನ್ನು ನೋಡಬೇಕೆಂಬಾಸೆ ತೋರಿಸುತ್ತೀರ, ಹೇಳಿದ ಸಿದ್ಧರಾಮ. ನಮ್ಮೂರಿಗೆ ಬಂದರೆ ತೋರಿಸುತ್ತೇನೆ ಬರುವೆಯಾ ಎಂದರು. ಮಲ್ಲರಸರು ಏನನ್ನೂ ಹೇಳದೆ ಸಿದ್ಧರಾಮ ಮೌನಿಯಾದ. ವತ್ತಡ ಹೇರಿದರೆ ಕೆಲಸ ಕೆಡುತ್ತದೆ, ಅವನಾಗಿಯೇ ಬರಬೇಕು ಎಂದಾದರೆ ಅವನಿಗೆ ಅರಿಯದೆ ನಾನಿಲ್ಲಿಂದ ಹೋಗಬೇಕು ಎಂದುಕೊಂಡ ಮಲ್ಲರಸರು, ಮಗೂ ನನಗೆ ಹಸಿವಾಗಿದೆ ಮನೆಗೆ ಹೋಗಿ ಮೊಸರಂಬಲಿ ತರುವೆಯಾ ಎಂದು ಕೇಳಿದರು. ಸಿದ್ಧರಾಮ ಅತ್ತ ಹೋಗಲು ಇತ್ತ ಶಿವಯೋಗಿ ಮಲ್ಲರಸರು ಶ್ರೀಶೈಲದ ತಮ್ಮ ಆಶ್ರಮದತ್ತ ನಡೆದರು. ಸಿದ್ಧರಾಮ ಆತ್ಮಾರ್ಪಣೆ ಮಾಡಲು ಶ್ರೀಶೈಲ ಶಿಖರದ ತುತ್ತ ತುದಿಯಲ್ಲಿ ನಿಲ್ಲುವವರೆಗಿನ ಕಥೆ ನೀವು ತಿಳಿದಿರುವಂತದ್ದೆ, ವ್ಯತ್ಯಾಸವೇನಿಲ್ಲ.

ಎಲ್ಲೆಲ್ಲಿ ಹುಡುಕಿದರೂ ಮಲ್ಲಯ್ಯ ಸಿಗದೆ ಇದ್ದಾಗ ಬೇಸತ್ತ ಸಿದ್ಧರಾಮ ತನ್ನ ಪ್ರಾಣ ತ್ಯಾಗ ಮಾಡಲು ಸಿದ್ಧನಾದ.

ದುಃಖ ಉಮ್ಮಳಿಸಿ ಬಂತು, ತಡೆಯಲಾಗದೆ ಕೂಗಿ ಹೇಳಿದ "ಏ... ಮಲ್ಲಯ್ಯ ನೀನು ಎಲ್ಲಿದ್ದರೂ ಸಂಜೆ ಸೂರ್ಯ ಮುಳುಗುವದೊರಳಗಾಗಿ ಬಾರದಿದ್ದರೆ, ಶ್ರೀಶೈಲ ಶೀಖರವೇರಿ ರುದ್ರಗಮ್ಮರಿಯೊಳಗೆ ಬಿದ್ದು ಸಾಯುವೆ" ಎಂದು ಶಪಥ ಗೈದ. ಸಿದ್ಧರಾಮ ಕೂಗಿ ಹೇಳಿದ ಈ ಮಾತುಗಳನ್ನು ಕೇಳಿಸಿಕೊಂಡವರಾರೋ ಸಮೀಪದ ಆಶ್ರಮದಲ್ಲಿದ್ದ ಶ್ರೀ ಶಿವಯೋಗಿ ಮಲ್ಲಯ್ಯನವರಿಗೆ ಸುದ್ದಿ ಮುಟ್ಟಿಸಿದರು. ಅವನು ಸಿದ್ಧರಾಮನೆಂದರಿತ ಶಿವಯೋಗಿ ಮಲ್ಲರಸರು ಅವಸರವಸರದಿಂದ ಓಡೋಡುತ್ತ ಶಿಖರದತ್ತ ಬಂದರು. ಸಿದ್ಧರಾಮ ಶಿಖರವೇರತೊಡಗಿದ್ದನ್ನು ನೋಡಿದ ಮಲ್ಲರಸರು, ಅವನನ್ನು ಹಿಂಬಾಲಿಸತೊಡಗಿದರು. ಸಿದ್ಧರಾಮ ಮುಂದೆ ಮಲ್ಲರಸರು ಹಿಂದೆ ಸಿದ್ಧರಾಮ ಶಿಖರದ ತುಟ್ಟ ತುದಿಯಲ್ಲಿ ನಿಂತು ಸೂರ್ಯ ಮುಳುಗುವುದನ್ನು ಕಾಯುಯತ್ತಿದ್ದ. ಅಷ್ಟರಲ್ಲಿ ಮಲ್ಲರಸರು ಅವನ ಹಿಂದೆ ಬಂದು ನಿಂತರು. ನೆಗೆಯುವ ಭಂಗಿಯಲ್ಲಿದ್ದ ಸಿದ್ಧರಾಮನ ತೋಳು ಹಿಡಿದು ತನ್ನತ್ತ ಎಳೆದುಕೊಂಡ ಶಿವಯೋಗಿ ಮಲ್ಲರಸರು 'ಸಿದ್ಧರಾಮ ಇದೋ ನಾನು ಬಂದಿದ್ದೇನೆ' ಎಂದುಹೇಳುತ್ತಾ ಎದೆಗಪ್ಪಿಕೊಂಡರು. ಕೋಪ, ದುಃಖದಲ್ಲಿದ್ದ ಸಿದ್ಧರಾಮನನ್ನು ಸಮಾಧಾನಪಡಿಸಿ,ತನ್ನ ಆಶ್ರಮಕ್ಕೆ ಕರೆದೊಯ್ದರು. ಎರಡು ದಿನಗಳಿಂದ ಊಟ, ನಿದ್ರೆ ಇಲ್ಲದೆ ಮಲ್ಲಯ್ಯನನ್ನು ಹುಡುಕುತ್ತಾ ಅಲೆದಾಡಿ ನಿತ್ರಾಣನಾಗಿದ್ದ ಸಿದ್ಧರಾಮನನ್ನು ನಿರಂತರ ಎಂಟಹತ್ತು ದಿನಗಳವರೆಗೆ ಹಾರೈಕೆ ಮಾಡಿ, ಮೊದಲಿನಂತಾದಾಗ ತನ್ನ ಮಗ 'ಸಕಲೇಶ ಮಾದರಸ' ಸಂಗಡ ಪ್ರಾಥಮಿಕ ಶಿಕ್ಷಣ ಶಾಲೆಗೆ ಕಲಿಯಲು ಕಳುಹಿಸಿದರು. ಶ್ರೀ ಶಿವಯೋಗಿ ಮಲ್ಲರಸರ ಮಗ ಸಕಲೇಶ ಮಾದರಸ ಮತ್ತು ಸಿದ್ಧರಾಮ ಇಬ್ಬರೂ ಸಮವಯಸ್ಕರು. ಅನ್ಯೋನ್ಯದಿಂದ ಇಬ್ಬರೂ ಜೊತೆಗೂಡಿ ಆಟಪಾಠದಲ್ಲಿ ಭಾಗವಹಿಸುತ್ತಾ, ಶ್ರೀ ಶಿವಯೋಗಿ ಮಲ್ಲರಸ ಕಣ್ಗಾವಲಿನಲ್ಲಿ ಮಲ್ಲಿನಾಥ ಮಹಾವಿದ್ಯಾಲಯದಲ್ಲಿ ಸಾಮಾನ್ಯ ಜ್ಞಾನ ವಿಷಯದಲ್ಲಿ ಪದವೀಧರರಾದರು. ಇವರಿಬ್ಬರೂ ಈಗ 18 ವರ್ಷ ವಯಸ್ಸಿನ ತರುಣರು. ಇದೇ ಸಮಯದಲ್ಲಿ ಚಾಲುಕ್ಯ ಸಾಮ್ರಾಜ್ಯದ ಅರ್ಥಮಂತ್ರಿಯಾಗಿದ್ದ ಬಸವಣ್ಣನವರ ನೇತೃತ್ವದಲ್ಲಿ ಸಮಾಜೋ-ಧಾರ್ಮಿಕ ಸುಧಾರಣೆ ಮತ್ತು 'ಪರಿವರ್ತನಾ ಚಳವಳಿ ಬಹಳ ಬಿರುಸಿನಿಂದ ನಡೆಯುತ್ತಿತ್ತು. ಸಾಮಾನ್ಯ ಜ್ಞಾನದ ವಿಷಯದಲ್ಲಿ ಪದವೀಧರನಾದ, ಶಿವಯೋಗಿ ಮಲ್ಲರಸರ ಮಗ, ಸಕಲೇಶ ಮಾದರಸ, ತನ್ನ ಮುಂದಿನ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿ ಬಸವಣ್ಣನವರ ನೇತೃತ್ವದ ಆಂದೋಲನದಲ್ಲಿ ಭಾಗವಹಿಸಲು ಕಲ್ಯಾಣನಗರದತ್ತ ಹೊರಟುಹೋದ. ಆಧ್ಯಾತ್ಮದ ಹಂಬಲದಿಂದ ಸಿದ್ಧರಾಮ ತನ್ನ ವಿದ್ಯಾಭ್ಯಾಸವನ್ನು ಮೂಂದುವರಿಸಿ, ಮಲ್ಲಿನಾಥ ವಿಶ್ವವಿದ್ಯಾಲಯದ, ಪದವಿಯೋತ್ತರ ಶೈವಧರ್ಮ ಮಹಾವಿದ್ಯಾಲಯದ, ಶೈವಧರ್ಮತತ್ವ ಸಿದ್ಧಾಂತದಲ್ಲಿ ಸ್ನಾತಕೋತ್ತರ, ಪದವೀಧರನಾದ. ಸಿದ್ಧರಾಮನಲ್ಲಿ ಹುದುಗಿದ್ದ ಅಪಾರ ಆಧ್ಯಾತ್ಮಿಕ ಶಕ್ತಿಯನನು ಗುರುತಿಸಿದ ಶಿವಯೋಗಿ ಮಲ್ಲರಸರು, ಸಿದ್ಧರಾಮನಿಗೆ 'ಸನ್ಯಾಸ' ದೀಕ್ಷೆ ಜೊತೆಗೆ ಶೈವ ಧರ್ಮ ಗುರು ದೀಕ್ಷೆ ಕರುಣಿಸಿ, ಸೊನ್ನಲಾಪುರದ ಶೈವ ಧರ್ಮ ಸಂಸ್ಥಾನದ ಪೀಠಾಧಿಪತಿಯನ್ನಾಗಿ ಮಾಡಿ ಆಶೀರ್ವದಿಸಿ ಕಳುಹಿಸಿಕೊಟ್ಟರು. ಇದಿಷ್ಟು ಸಿದ್ಧರಾಮನ ಬಾಲ್ಯದಿಂದ ತಾರುಣ್ಯದವರೆಗೆ ನಡೆದ ಸತ್ಯಸಂಗತಿ.

ಸಿದ್ಧರಾಮ ಶ್ರೀ ಶಿವಯೋಗಿ ಮಲ್ಲರಸರಿಂದ ರಕ್ಷಿಸಲ್ಪಟ್ಟು, ಅವರ ಆಶ್ರಯದಲ್ಲಿ ತನ್ನ ಶಿಕ್ಷಣ ಮುಗಿಸಿ, ಅವರಿಂದಲೇ ಶೈವ ಗುರುಈಕ್ಷೆ ಪಡೆದು ಸೊನ್ನಲಾಪುರದ ಆಗಮೋಕ್ತ ಶೈವ ಧರ್ಮ ಸಂಸ್ಥಾನದ ಗುರುವಾಗಿ ನಿಯುಕ್ತಿಗೊಂಡು ಧರ್ಮಾಧಿಕಾರಿಯಾಗಿ, ಧರ್ಮಕಾರ್ಯದಲ್ಲಿ ನಿರತನಾಗಿ, ಧರ್ಮಸಂಸ್ಥಾನದ ವ್ಯಾಪ್ತಿಯಲ್ಲಿ ಸಂಚಾರ ಕೈಗೊಂಡು ನಿರೀಕ್ಷಣೆಯಲ್ಲಿ ಅಲ್ಲಿಯ ಧಾರ್ಮಿಕ ಸ್ಥಿತಿಗತಿಯನ್ನು ಗಮನಿಸಿ ನೋಡಿದಾಗ, ಸ್ಥಳೀಯ ಕುಟಿಲ ಸಿದ್ಧರ, ಕಾಮುಕ ಕಾಪಾಲಿಕರ, ದುಷ್ಟಶಕ್ತಿ ದೇವತೆಗಳನ್ನು ಕೈವಶವಾಡಿಕೊಂಡಿದ್ದ ಮಾಂತ್ರಿಕರ ಆಟಾಟೋಪ ಎಲ್ಲೆಮೀರಿ, ಜನರು ನಲುಗಿ ಹೋಗಿದ್ದರು. ಪ್ರಕೃತಿ ವಿಕೋಪದಿಂದಾಗಿ ಕಾಲ ಕಾಲಕ್ಕೆ ಮಳೆ ಬೀಳದೆ ಬಿತ್ತಿದ ಬೆಳೆ ಕೈ ಸೇರದೆ ಜನ ತತ್ತರಿಸಿ ಹೋಗಿದ್ದರು. ಜನರ ಜೀವನ ಪರಿಸ್ಥಿತಿ ನೋಡಿ ಮರುಗಿದ ಶ್ರೀ ಗುರು ಸಿದ್ಧರಾಮೇಶ್ವರರು ತಾನು ಗಳಿಸಿದ್ದ ಜಲಾನ್ವೇಶಣ ಶಕ್ತಿಯಿಂದ ನಾಡಿನ ಜಲ ಮೂಲಗಳನ್ನು ಕಂಡುಹಿಡಿದು ಕೆರೆ, ಕಟ್ಟೆ, ಬಾವಿಗಳನ್ನು ಜನರ ಸಹಕಾರದಿಂದ ನಿರ್ಮಾಣ ಮಾಡಿ ನೀರಿನ ಕೊರತೆಯನ್ನು ನೀಗಿಸಿದರು. ಪ್ರಸನ್ನಗೊಂಡ ಪ್ರಕೃತಿಯೂ ಕಾಲ ಕಾಲಕ್ಕೆ ಮಳೆ ಸುರಿಯತೊಡಗಿ ನಾಡು ಸಮೃದ್ಧವಾಗತೊಡಗಿತು. ಧರ್ಮಾಧಿಕಾರ ಸ್ವೀಕರಿಸಿದ ಅಲ್ಪ ಸಮಯದಲ್ಲಿಯೇ ಸಿದ್ಧರಾಮೇಶ್ವರರು ನಾಡಿನಾದ್ಯಂತ ಚಿರಪರಿಚಿತರಾಗಿ ನಾಡಾಳುವ ರಾಜರುಗಳಿಂದ ಮಾನ್ಯರಾದರು. ಸಿದ್ಧರಾಮೇಶ್ವರರ ಪ್ರಭಾವ ಬೆಳೆದಂತೆ ಕುಟಿಲ ಸಿದ್ಧರು, ಕಾಮುಕ ಕಾಪಾಲಕರು, ಕ್ಷುದ್ರ ಶಕ್ತಿದೇವತೆಗಳ ಉಪಾಸಕರೆಲ್ಲರೂ ಸಿದ್ಧರಾಮೇಶ್ವರರಿಗೆ ಶರಣಾದರು. ಸಿದ್ಧರಾಮೇಶ್ವರರು ನಾಡಿನಾದ್ಯಂತ ಶಿವಲಿಂಗಗಳನ್ನು ಸ್ಥಾಪಿಸಿ, ಶೈವ ಧರ್ಮ ಪ್ರಭಾವಯುತವಾಗಿ ಬೆಳೆದು, ಜನರೆಲ್ಲರೂ ಶೈವ ಧರ್ಮದ ಅನುಯಾಯಿಗಳಾಗಿಹೋದರು. ಸೊನ್ನಲಿಗೆಯ ಸಿದ್ಧರಾಮ ಬಹುದೊಡ್ಡ ಶೈವ ಗುರುವಾಗಿ

ಮರೆಯತೊಡಗಿದ್ದ ಸಮಯದಲ್ಲಿ, ಸೊನ್ನಲಿಗೆಯ ಪೂರ್ವ ದಿಕ್ಕಿನ ಕೆಲವೇ ಕೆಲವು ಗಾವುದ ದೂರದಲ್ಲಿದ್ದ ಕಲ್ಯಾಣ ನಗರದ ಬಸವಣ್ಣನವರಿಂದ ಸ್ಥಾಪಿತವಾದ 'ಲಿಂಗಾಯತ' ವೆಂಬ ಹೊಸಧರ್ಮ ಬೆಳೆದು ನಾಡಿನಾದ್ಯಂತ ಪಸರಿಸಿತ್ತು. ಶೈವಧರ್ಮದ ಅನುಯಾಯಿಗಳೆಲ್ಲರೂ ಲಿಂಗಾಯತ ಧರ್ಮ ಸ್ವೀಕರಿಸಿ, ತಮ್ಮಂಗದ ಮೇಲೆ ಲಿಂಗ ಧರಿಸಿ, ಲಿಂಗಾಯತ ಧರ್ಮದ ಪ್ರಗತಿಪರ ನೀತಿಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಭಕ್ತರಾಗಿ ಹೋದರು. ಶೈವ ಧರ್ಮದ ನೂರಾರು ಗುರು ಪೀಠಗಳ ಶಿವಾಚಾರ್ಯರು, ಪುರೋಹಿತರು, ಅರ್ಚಕರು, ಲಿಂಗಾಯತ ಧರ್ಮ ಸ್ವೀಕರಿಸಿ, ಜನಿವಾರ ತ್ಯಜಿಸಿ ಲಿಂಗದೀಕ್ಷೆ ಪಡೆದು ಲಿಂಗಾಯತ ಧರ್ಮದೊಳಗೆ ಲೀನವಾಗಿ ಹೋದರು. ಆದರೆ ಸೊನ್ನಲಿಗೆಯ ಶೈವ ಗುರು ಸಿದ್ಧರಾಮ ಮಾತ್ರ ತನಗೇನೂ ಗೊತ್ತೆ ಇಲ್ಲವೇನೊ ಎಂಬಂಥೆ, ತನ್ನ ಪಾಡಿಗೆ ತಾನು ಶೈವ ಧರ್ಮ ಪರಿಪಾಲಕರಾಗಿ ಶೈವ ಭಕ್ತಿಯನ್ನು ಸೊನ್ನಲಾಪುರ ಮಂಡಲ ವ್ಯಾಪ್ತಿಯಾದ್ಯಂತ ಜನರಲ್ಲಿ ಮಾಡಲು ನಿರತರಾಗಿದ್ದರು. ಆಗಮೋಕ್ತ ಶೈವಧರ್ಮದ ಎಲ್ಲಾ ಮಠ, ಪೀಠಗಳ ಶಿವಾಚಾರ್ಯರು ಮತ್ತು ಅವರ ಅನುಯಾಯಿಗಳು ಬಸವಣ್ಣನವರ ಲಿಂಗಾಯತ ಧರ್ಮ ಸ್ವೀಕರಿಸಿ ಲಿಂಗಾಂಗಿಗಳಾದರೂ, ಶ್ರೀಗುರು ಸಿದ್ಧರಾಮೇಶ್ವರರು ಮಾತ್ರ ತನ್ನ ಸಾವಿರಾರು ಅನುಯಾಯಿಗಳೊಂದಿಗೆ ಹೊರಗೇ ಉಳಿದಿರುವುದನ್ನು ಅರಿತ ಬಸವಣ್ಣನವರು, ಲಿಂಗಾಯತ ಧರ್ಮದ ಪ್ರಮುಖ ಶರಣರಿಂದ ಕೂಡಿದ ನಿಯೋಗವನ್ನೂ ಸಿದ್ಧರಾಮೇಶ್ವರರಲ್ಲಿ ಕಳುಹಿಸಿ ಪ್ರಯತ್ನಸಿದರೂ ಸಿದ್ಧರಾಮರನ್ನು ಸೆಳೆಯಲು ಸಾಧ್ಯವಾಗದಿದ್ದುದು ಬಸವೇಶ್ವರರಿಗೆ ಯೋಚನೆಗಿಟ್ಟುಕೊಂಡಿತು. ಸಿದ್ಧರಾಮರು ಲಿಂಗಾಯತ ಧರ್ಮದೊಳಗೆ ಬಾರದಿದ್ದರೆ, ಧರ್ಮ ಪರಿಪೂರ್ಣವಾಗದೆಂದರಿತ ಬಸವಣ್ಣನವರು, ಅದೊಂದು ದಿವಸ ಯಾರಿಗೂ ತಿಳಿಯದೆ ಹಾಗೆ ಸಾಮಾನ್ಯ ವೇಶದಾರಿಯಾಗಿ ಕುದುರೆ ಏರಿ ಸೊನ್ನಲಿಗೆಯತ್ತ ದೌಡಾಯಿಸಿದರು. ಮರುದಿನ ಮುಂಜಾನೆ ಸಿದ್ಧರಾಮೇಶ್ವರರ ಮಠದ ಮುಂದೆ ಬಂದು ನಿಂತ ಬಸವಣ್ಣನವರು, ಒಬ್ಬ ಸಾಮಾನ್ಯ ಭಕ್ತನಂತೆ ಸಿದ್ಧರಾಮೇಶ್ವರರ ದರ್ಶನ ಪಡೆದಯಲು ಭಕ್ತರ ಸರತಿಯ ಸಾಲಿನಲ್ಲಿ ಕೊನೆಯವರಾಗಿ ನಿಂತರು. ತನ್ನ ಸರದಿ ಬಂದ ನಂತರ ಮಠದೊಳಗೆ ಹೋಗಿ ಸಿದ್ಧರಾಮೇಶ್ವರರಿಗೆ ದೀರ್ಘದಂಡವಾಗಿ ಕಾಲಿಗೆರಗಿ ನಮಸ್ಕರಿಸಿ, ನನ್ನದೊಂದು ಬಿನ್ನಹವಿದೆ. ಅರಿಕೆ ಮಾಡಿಕೊಳ್ಳಲು ಅವಕಾಶ ಮಾಡಿಕೊಡಬೇಕೆಂದು ಬಿನ್ನವಿಸಿದರು. ತನ್ನ ಮುಂದೆ ನಿಂತು ಬಿನ್ನವಿಸಿದವರು ಸಾಮಾನ್ಯರಲ್ಲವೆಂದು ಅರಿತ ಸಿದ್ಧರಾಮೇಶ್ವರರು ಕುಳಿತುಕೊಳ್ಳುವಂತೆ ಹೇಳಿ ಆಸನ ತೋರಿಸಿದರು. ಹೇಳಿ, ನೀವಾರು ಬಂದ ಕಾರಣವೇನು? ಕೇಳಿದರು. ನಾನು ಬಸವಣ್ಣ, ಕಲ್ಯಾಣ ಚಾಳುಕ್ಯ ಸಾಮ್ರಾಜ್ಯದ ಪ್ರಧಾನ ಮಂತ್ರಿ, ಆದರೆ ನಾನು ಪ್ರಧಾನಮಂತ್ರಿಯಾಗಿ ಇಲ್ಲಿಗೆ ಬಂದಿಲ್ಲ. ಲಿಂಗಾಯತ ಧರ್ಮದ ಕಾರ್ಯಕರ್ತನಾಗಿ ಬಂದಿದ್ದೇನೆ ಎಂದರು ಬಸವಣ್ಣ. ಏನು! ಸಾಮ್ರಾಜ್ಯದ ಪ್ರಧಾನಮಂತ್ರಿ ಬಸವಣ್ಣನವರೇ. ಲಿಂಗಾಯತ ಧರ್ಮಸ್ಥಾಪಕ ಬಸವಣ್ಣನವರೇ! ಎಂದು ಉದ್ಗರಿಸಿ ಸಿದ್ಧರಾಮೇಶ್ವರರು, ಹೀಗೆ ಸಾಮಾನ್ಯರಂತೆ ಭಕ್ತರ ಸರತಿ ಸಾಲಿನಲ್ಲಿ ನಿಂತು ನಮ್ಮನ್ನು ನೋಡ ಬಯಸಿದ್ದಾದರೂ ಏಕೆ. ನೀವು ಬರುವುದು ಮೊದಲೆ ತಿಳಿದಿದ್ದರೆ, ಸಾಮ್ರಾಜ್ಯದ ಪ್ರಧಾನ ಮಂತ್ರಿಗಳಿಗೆ ಸಲ್ಲಬೇಕಾದ ವಿಶಿಷ್ಟ ಗೌರವಾದರಗಳಿಂದ ಬರಮಾಡಿ ಕೊಳ್ಳುವ ಅವಕಾಶ ನಮಗೆ ತಪ್ಪಿದಂತಾಯ್ತು. ಹೀಗೆ ಸಾಮಾನ್ಯರಂತೆ ಬಂದು ನಮ್ಮನ್ನು ಕಾಣಲು ಭಲವಾದ ಕಾರಣವೇನಾದರೂ ಇರಬೇಕಲ್ಲದೆ. ಕೇಳಿದರು ಸಿದ್ಧರಾಮೇಶ್ವರರು. ಪೂಜ್ಯರು ಹೇಳುವುದು ಸರಿ ಇದೆ. ಒಂದು ಘನವಾದ ಉದ್ದೇಶವನ್ನು ತಮ್ಮ ಮುಂದಿಟ್ಟು ಒಪ್ಪಿಗೆ ಪಡೆಯಲು ಯಾಚಕನಾಗಿ ನಾನು ಬಂದಿದ್ದೇನೆ, ನನ್ನನ್ನು ಬರಿಗೈಯಲ್ಲಿ ಕಳುಹಿಸುವುದಿಲ್ಲ ಎಂಬ ಭರವಸೆ ನನಗಿದೆ ಎಂದರು ಬಸವಣ್ಣನವರು. ನೀವು ಬಂದ ಉದ್ದೇಶವನ್ನು ಈಡೇರಿಸುವ ಶಕ್ತಿ ನನ್ನಲ್ಲಿದ್ದರೆ ಖಂಡಿತ ನೆರವೇರಿಸುತ್ತೇನೆ, ಹೇಳಿ ಅದೇನು, ಎಂದರು ಸಿದ್ಧರಾಮೇಶ್ವರರು. ತಮಗೆ ತಿಳಿದಿರುವಂತೆ ಲಿಂಗಾಯತ ಧರ್ಮ ಸ್ಥಾಪನೆಯಾಗಿ ಐದಾರು ವರ್ಷಗಳೇ ಕಳೆದವು. ಸನಾತನ ಧರ್ಮದ ವ್ಯಾಪ್ತಿಯಲ್ಲಿ ಬರುವ ಆಗಮೋಕ್ತ ಶೈವಧರ್ಮದ ಶಾಕೋಪಶಾಖೆಗಳ ಮಠ–ಪೀಠಗಳ ಶಿವಾಚಾರ್ಯರೆಲ್ಲರೂ ತಮ್ಮ ತಮ್ಮ ಅನುಯಾಯಿಗಳೊಂದಿಗೆ ಲಿಂಗಾಯತ ಧರ್ಮ ಸ್ವೀಕರಿಸಿ ಲಿಂಗಾಂಗಿಗಳಾಗಿ ಹೋದರು. ಕನ್ನಡ ನಾಡಿನಲ್ಲಿ ಆಗಮೋಕ್ತ ಶೈವ ಧರ್ಮವೇ ಅಳಿಸಿಹೋಯ್ತು ಎಂದು ಹೇಳಬೇಕೆಂದರೆ ಉಳಿದಿರುವುದು ನಿಮ್ಮ ನೇತೃತ್ವದ ಶೈವಧರ್ಮ ಸಂಸ್ಥಾನ ಮಾತ್ರ. ಲಿಂಗಾಯತ ಧರ್ಮ ಪರಿಪೂರ್ಣವಾಗಬೇಕಿದ್ದಲ್ಲಿ, ನೀವು ಲಿಂಗಾಯತ ಧರ್ಮ ಸ್ವೀಕರಿಸಿದಾಗ ಮಾತ್ರ ಸಾಧ್ಯ. ನೀವು ಲಿಂಗಾಯತ ಧರ್ಮ ಸ್ವೀಕರಿಸಿ ಅದರ ಯಜಮಾನಿಕೆ ವಹಿಸಿಕೊಂಡು ಧರ್ಮದ ಜಗದ್ಗುರುವಾಗಿ, ಅತ್ಯುಚ್ಚ ಧರ್ಮಪೀಠವಾದ ಶೂನ್ಯಪೀಠದ ಅಧ್ಯಕ್ಷರಾಗಿ ಧರ್ಮವನ್ನು ಮುನ್ನಡೆಸಲು ಭಕ್ತಯಿಂದ ಬೇಡಿಕೊಳ್ಳುತ್ತೇನೆ ಎಂದು ತಲೆಬಾಗಿ ನಿಂತರು ಬಸವಣ್ಣನವರು. ಬಸವಣ್ಣನವರ ಬೇಡಿಕೆಯನ್ನು ಈಡೇರಿಸು ವುದು ಅಷ್ಟು ಸುಲಭವಲ್ಲ ಎಂಬ ಗ್ರಹಿಕೆ ಸಿದ್ಧರಾಮಣ್ಣ ನವರದಾಯ್ತು. ಬಸವಣ್ಣನವರೇ ಹೀಗೆ ದಿಢೀರನೆ ಯಾವ

ಮುನ್ಸೂಚನೆಯನ್ನು ಕೊಡದೆ ಇಂತಹ ಬಹುದೊಡ್ಡ ಹೊರೆಯನ್ನು ನನ್ನ ಮೇಲೆ ಹೊರಿಸಲು ಬಂದ ನಿಮಗೆ ನಾನು ತುಂಬಾ ಆಭಾರಿಯಾಗಿದ್ದೇನೆ. ಆದರೆ ನನ್ನ ಮೇಲೆ ನೀವು ಇಟ್ಟಿರುವ ಈ ಭರವಸೆಯನ್ನು ಈಡೇರಿಸಲು ನನ್ನಿಂದ ಅಸಾಧ್ಯ ಎಂದು ಹೇಳಲು ಹಿಂಜರಿಯಲಾರೆ. ನನಗೆ ನನ್ನವೇ ಆದ ಜವಾಬ್ದಾರಿಗಳಿವೆ. ಅವುಗಳನ್ನೆಲ್ಲಾ ನಿಭಾಯಿಸುಸುವು ನನ್ನ ಕರ್ತವ್ಯವಲ್ಲವೆ, ಇದರ ಅರ್ಥ ನಾನು ಲಿಂಗಾಯತ ಧರ್ಮ ಸ್ವೀಕರಿಸಲಾರೆ ಎಂದಲ್ಲ. ಕಾಲ ಕೂಡಿಬಂದಾಗ ನೀವು ಕರೆಯದೇ ಇದ್ದರೂ ನಾನು ಖಂಡಿತ ಲಿಂಗಾಯತ ಧರ್ಮ ಸ್ವೀಕರಿಸುತ್ತೇನೆ. ಈಗ ನಿಮ್ಮ ಇಚ್ಛೆಯನ್ನು ಈಡೇರಿಸಲು ಸಾಧ್ಯವಾಗದುದಕ್ಕೆ ಕ್ಷಮೆ ಇರಲಿ ಎಂದು ಹೇಳಿ ಬಸವಣ್ಣನವರನ್ನು ಸನ್ಮಾನಿಸಿ ಗೌರವಯುತವಾಗಿ ಬೀಳ್ಕೊಟ್ಟರು.

ಬಸವಣ್ಣ ಮತ್ತು ಸಿದ್ಧರಾಮಣ್ಣನವರ ಮಧ್ಯೆ ನಡೆದ ಈ ಸಂದಾನ ಫಲಪ್ರದವಾಗದೆ, ಹನ್ನೆರಡು ವರ್ಷಗಳು ಉರುಳಿದರೂ, ಲಿಂಗಾಯತ ಧರ್ಮದ ಅತ್ಯುಚ್ಛ ಧರ್ಮಪೀಠವಾದ ಶುನ್ಯಸಿಂಹಾಸನ ಜಗದ್ಗುರು ಪೀಠ ಮಹಾಜ್ಞಾನಿಯೊಬ್ಬರ ಬರುವಿಗಾಗಿ ಕಾಯುತ್ತಿತ್ತು ಮತ್ತು ಶೈವ ಗುರುಸಿದ್ಧರಾಮೇಶ್ವರರು ಲಿಂಗಾಯತ ಧರ್ಮ ಸ್ವೀಕರಿಸುವ ಕಾಲ ಕೂಡಿಬಂದಿತ್ತು. ಬನವಸೆ ನಾಡಿನಲ್ಲಿ ಗೊತ್ತು ಗುರಿ ಇಲ್ಲದೆ ಅಂಡಲೆಯುತ್ತಿದ್ದ ಮಹಾತಪಸ್ವಿ, ಮಹಾಜ್ಞಾನಿ ಮತ್ತು ಆಧ್ಯಾತ್ಮದ ಮೇರುವಾದ ಅಲ್ಲಮಪ್ರಭುದೇವರು, ಅನಿರೀಕ್ಷಿತವಾಗಿ ಕಾಡಿನಮಧ್ಯೆ ಕಾಣದ ಹಾಗಿದ್ದ ಗುಹಾಂತರ ದೇವಾಲಯದೊಳ ಹೊಕ್ಕು, ಅಲ್ಲಿ ಕೈಯಲ್ಲಿ ಲಿಂಗವಿಡಿದು ಅನುಸಂದಾನದಲ್ಲಿದ್ದ ಅನಿಮಿಷ ದೇವರಿಂದ ಲಿಂಗದೀಕ್ಷೆ ಹೊಂದಿ, ಕಲ್ಯಾಣದ ಬಸವಣ್ಣನನ್ನು ಕಾಣಲು ನಿರ್ದೇಶಿತನಾಗಿ ಹೊರಬಿದ್ದರು. ಕಲ್ಯಾಣದ ಹಾದಿ ಹಿಡಿದು ಹೊರಟ ಅಲ್ಲಮಪ್ರಭುದೇವರು ಸೊನ್ನಲಿಗೆ ಸಮೀಪಿಸುತಿದ್ದಂತೆ, ಸಿದ್ಧರಾಮೇಶ್ವರರ ಕರ್ಮಯೋಗದ ಸುದ್ದಿ ಕಿವಿಗೆ ಬಡಿಯಿತು. ವಿಶೇಷ ರೀತಿಯಲ್ಲಿ ಸಿದ್ಧರಾಮೇಶ್ವರರನ್ನು ಸಂದರ್ಶಿಸಿ, ಕರ್ಮಯೋಗದ ಹುಚ್ಚನ್ನು ಬಿಡಿಸಿ, ಶಿವಯೋಗದ ಮರ್ಮವನ್ನು ಅರುಹಿ ಕರ್ಮಯೋಗ ಮತ್ತು ಶಿವಯೋಗಗಳೆರಡರ ಸಮನ್ವಯ ವನ್ನು ಸಾಧಿಸಿದ ಕಲ್ಯಾಣದ ಬಸವಣ್ಣನಲ್ಲಿಗೆ ಸಿದ್ಧರಾಮೇಶ್ವರ ರನ್ನು ಕರೆದೊಯ್ಯುವಲ್ಲಿ ಪ್ರಭುದೇವರು ಯಶಸ್ವಿಯಾದರು. ಕಲ್ಯಾಣದ ಶಿವ ಶರಣರ ಒಡನಾಟದಿಂದ ಲಿಂಗಾಯತ ಧರ್ಮದ ಒಳ ಹೊರಗನ್ನು ಅರಿತ ಸಿದ್ಧರಾಮೇಶ್ವರರು, ಲಿಂಗಾಯತ ಧರ್ಮವನ್ನು ಸ್ವೀಕರಿಸಿ ಚಿನ್ಮಯ ಜ್ಞಾನಿ ಚನ್ನಬಸವಣ್ಣನವರಿಂದ ಲಿಂಗ ದೀಕ್ಷೆ ಪಡೆದರು. ಅಲ್ಲಮ ಪ್ರಭುದೇವರು ಲಿಂಗಾಯತ ಧರ್ಮದ ಮೊದಲ ಜಗದ್ಗುರುವಾಗಿ ಶೂನ್ಯಪೀಠದ ಅಧ್ಯಕ್ಷರಾದರು. ಅಲ್ಲಮಪ್ರಭುದೇವರು ಮತ್ತು ಸಿದ್ಧರಾಮೇಶ್ವರರು ಇಬ್ಬರೂ ಜೊತೆಗೂಡಿ, ಲಿಂಗಾಯತ ಧರ್ಮದ ನೀತಿ, ತತ್ವ, ಸಿದ್ಧಾಂತಗಳನ್ನು ಕಾರ್ಯರೂಪಕ್ಕೆ ತರಲು ಶ್ರಮಿಸತೊಡಗಿದರು. ಜಾತಿ ನಿರ್ಮೂಲನೆಯ ನೀತಿಯ ಅಂಗವಾಗಿ, ಬ್ರಾಹ್ಮಣ ಮತ್ತು ದಲಿತ ವರ್ಗಗಳ ಮಧ್ಯೆ ರಕ್ತಸಂಬಂಧ ಬೆಳೆಸಲು ಕಾರಣರಾದರು ಎಂಬ ಕಾರಣಕ್ಕೆ, ಧರ್ಮದೊಳಗಣ ಮೇಲ್ಜಾತಿಯವರ ನಿಂದನೆಗೆ ಗುರಿಯಾದ ಅಲ್ಲಮಪ್ರಭುದೇವರು ನೊಂದು ಜಗದ್ಗುರು ಪೀಠತ್ಯಾಗ ಮಾಡಿ ಹೊರಟುಹೋದರು. ಶ್ರೀ ಗುರು ಚನ್ನಬಸವಣ್ಣನವರನ್ನು ಲಿಂಗಾಯತ ಧರ್ಮದ ಎರಡನೆಯ ಜಗದ್ಗುರುವಾಗಿ ಪಟ್ಟಾಭಿಷಕ್ತರಾಗಿ ಶೂನ್ಯಪೀಠವನ್ನೇರಿದರು ಲಿಂಗಾಯತ ಧರ್ಮದ ಪ್ರಗತಿ ಪರ ನೀತಿ ತತ್ವ ಸಿದ್ಧಾಂತಗಳ ವಿರುದ್ಧ ಸಿಡಿದೆದ್ದ ಮೂಲಭುತವಾದಿಗಳು, ಪುರೋಹಿತ ಶಾಹಿಗಳು ಮತ್ತು ಬಸವಣ್ಣನವರ ರಾಜಕೀಯ ವಿರೋಧಿಗಳು ಎಲ್ಲರು ಒಟ್ಟುಗೂಡಿ ಲಿಂಗಾಯತ ಧರ್ಮದ ಸಂವಿಧಾನ ವೆಂದೆ ಕರೆಯಲಾಗುತ್ತಿದ್ದ ವಚನಗಳ ಕಟ್ಟುಗಳನ್ನು ಸುಡಲಾರಂಬಿಸಿ ಶರಣರನ್ನು ಕಂಡ ಕಂಡಲ್ಲಿ ಹತ್ಯೆ ಮಾಡಲಾರಂಭಿಸಿದರು. ಅಳಿದುಳಿದ ವಚನ ಸಾಹಿತ್ಯವನ್ನು ರಕ್ಷಿಸಲು ಮತ್ತು ಶರಣರ ಪ್ರಾಣ ಉಳಿಸಲು, ವಚನ ಸಾಹಿತ್ಯ ಹೊತ್ತು, ಶರಣರೊಡಗೂಡಿ ಉಳುವಿಯ ಕಾಡು ಸೇರಿದ ಜಗದ್ಗುರು ಶ್ರೀ ಚನ್ನಬಸವಣ್ಣನವರು ಶ್ರೀ ಗುರುಸಿದ್ಧರಾಮೇಶ್ವರರನ್ನು ಲಿಂಗಾಯತ ಧರ್ಮದ ಮೂರನೇ ಜಗದ್ಗುರುವಾಗಿ, ಶೂನ್ಯ ಸಿಂಹಾಸನದ ಅಧಿಪತಿಯನ್ನಾಗಿ ಪಟ್ಟಾಭಿಷೇಕ ಮಾಡಿದರು.

ಹೀಗೆ ಆಗಮೋಕ್ತ ಶೈವ ಧರ್ಮ ಸಂಸ್ಥಾನದ ಗುರುವಾಗಿದ್ದ ಶ್ರೀ ಗುರುಸಿದ್ಧರಾಮೇಶ್ವರರು, ಲಿಂಗಾಯತ ಧರ್ಮ ಸ್ವೀಕರಿಸಿ, ಆ ಧರ್ಮದ ಜಗದ್ಗುರುವೂ ಆದರು. ಒಂದು ಸಮಯ ಶ್ರೀ ಗುರು ಸಿದ್ಧರಾಮೇಶ್ವರರು, ಲಿಂಗಾಯತ ಧರ್ಮದ ಜಗದ್ಗುರುವಾಗದಿದ್ದಲ್ಲಿ, ಅವರು ನೊಳಂಬರ 'ಮಹಾನಾಡು' ರಾಜ್ಯಕ್ಕೆ ಬರುತ್ತಿರಲೂ ಇಲ್ಲ, ನೊಳಂಬ ಸಮುದಾಯ ಲಿಂಗಾಯತರೂ ಆಗದೆ, ನೊಣಬರಾಗಿ, ಒಂದು ಜಾತಿಗೆ ಸೀಮಿತರಾಗಿ, ಸನಾತನ ಧರ್ಮಿಯರಾಗಿ ಮುಂದುವರಿಯುತ್ತಿದ್ದರೋ ಏನೋ.

# “ಸಿದ್ಧರಾಮರ ವಚನಗಳಲ್ಲಿ ಮಾನವೀಯ ಮೌಲ್ಯಗಳು”

ಮೌಲ್ಯವೆಂದರೆ ಲೌಕಿಕಾರ್ಥದಲ್ಲಿ ಬೆಲೆ ಎಂದರ್ಥ. ಕೇವಲ ಇದು ವ್ಯವಹಾರಿಕ ದೃಷ್ಟಿಯನ್ನು ಹೊಂದಿರುವಂಥದ್ದು. ಮತ್ತೊಂದು ರೀತಿಯ ಆಂತರಿಕ ಮೌಲ್ಯಗಳಿವೆ. ಅವೆಂದರೆ ಮಾನವನಲ್ಲಿ ಹುದುಗಿರುವ ಉತ್ತಮ ಗುಣಗಳು. ಮಾನವ ಮಾನವತೆ ಹೊಂದಬೇಕಾದರೆ ಆತನಲ್ಲಿ ಸಕಾರಾತ್ಮಕ ಆಲೋಚನೆ, ಉತ್ತಮ ಸಂವಹನ, ರಚನಾತ್ಮಕ ಕ್ರಿಯೆಗಳನ್ನು ಮೈಗೂಡಿಸಿಕೊಳ್ಳಬೇಕು. ಸನ್ನಡತೆ, ಸದ್ಗುಣ, ಸದಾಚಾರ ಸತ್ಕ್ರಿಯೆ, ನಡೆನುಡಿ ಸಾಮರಸ್ಯ, ದಯೆ, ಅನುಕಂಪೆ, ಸಹಕಾರ, ಸಮಾನತೆ, ಪರೋಪಕಾರ ಮುಂತಾದ ನೈತಿಕ ಮೌಲ್ಯಗಳು ಮನುಕುಲದ ಏಳ್ಗೆಗೆ ಅತ್ಯಗತ್ಯವಾಗಿವೆ. ಇವುಗಳ ಪಾಲನೆ ಪೋಷಣೆ ಅನುಸರಣೆ ಮಾಡುವವರೇ ಮಾನವೀಯ ಮೌಲ್ಯವುಳ್ಳ ಮಹಾನ್ ವ್ಯಕ್ತಿಗಳು ಎನಿಸಿಕೊಳ್ಳುತ್ತಾರೆ.

ಪ್ರಸ್ತುತದಲ್ಲಿಯ ಸಾಮಾಜಿಕ ಅವ್ಯವಸ್ಥೆ, ಮಾನವರ ಅಪಹರಣ, ಕೊಲೆ ಸುಲಿಗೆ, ಸಂಬಂಧಗಳ ಸಡಿಲಿಕೆ, ಉಳ್ಳವರು ಬಲಹೀನರ ಮೇಲೆ ನಡೆಸುವ ದೌರ್ಜನ್ಯ, ಕೌಟುಂಬಿಕ ಕಲಹಗಳು, ವಿವಾಹ ವಿಚ್ಛೇದನಗಳು, ರಾಜಕೀಯ ಅರಾಜಕತೆ, ಪರಸ್ಪರರ ನಡುವಿನ ದ್ವೇಷ, ಮಾತ್ಸರ್ಯ, ಮೇಲುಕೀಳೆಂಬ ತರತಮಭಾವ, ನಂಬಿಕೆ ವಿಶ್ವಾಸದ ಕೊರತೆಗಳು, ಸ್ವಾರ್ಥತೆ, ಗುರುಹಿರಿಯರ ಮೇಲಿನ ನಿರ್ಲಕ್ಷ್ಯತನ, ಜಾತಿ ಧರ್ಮದ ಹೆಸರಲ್ಲಿ ಆಗುತ್ತಿರುವ ಅನಾಹುತಗಳು, ಸಾಮಾಜಿಕ ಸಮಸ್ಯೆಗಳು ಮಹಿಳಾ ಶೋಷಣೆ ಹೀಗೆ ಒಂದೇ ಎರಡೆ ನೂರಾರು ಸಮಸ್ಯೆಗಳು ಜನರನ್ನು ಕಂಗಾಲಾಗಿಸಿವೆ. ಇಂತಹ ಸಂದರ್ಭದಲ್ಲಿ ಸಾಧು ಸಂತರ, ದಾಸವರೇಣ್ಯರ, ಶರಣರ ಜೀವನ ಮೌಲ್ಯಗಳನ್ನು ನೆನೆಸಿಕೊಳ್ಳುತ್ತಿರುತ್ತೇವೆ. ಜನಪರ ನಿಲುವಿನ ಇಂಥವರ ಅನುಸರಣೀಯ ಮಾನವೀಯ ಮೌಲ್ಯಗಳು ಸಾರ್ವಕಾಲಿಕ ಸತ್ಯ ಸಾರುವಂಥವು.

12 ನೆಯ ಶತಮಾನದ ವಚನಯುಗದಲ್ಲಿ ಬರುವ ವಚನಕಾರರು ಮಾನವೀಯತೆಯನ್ನು ತಮ್ಮ ಬದುಕಿನ ಉಸಿರಾಗಿಸಿಕೊಂಡವರು. ಈ ಶತಮಾನದ ಶರಣ ಕ್ರಾಂತಿ ಜ್ಯೋತಿಯಲ್ಲಿ ಮೂಡಿ ಬಂದ ಹೊಂಗಿರಣಗಳೇ ವಚನಕಾರರ ಮಾನವೀಯ ಮೌಲ್ಯಗಳಾಗಿವೆ. ಶರಣರ ಜೀವಪರ ನಿಲುವುಗಳು ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ, ಆಧ್ಯಾತ್ಮಿಕವಾಗಿ ಸಮಾಜವನ್ನು ಹೊಸ ದಿಕ್ಕಿನೆಡೆ ಸಾಗಿಸುವ ಯತ್ನ ಮಾಡಿದವು. ಈ ಕಾಲದಲ್ಲಿ ಜನವಾಣಿ ದೇವವಾಣಿಯಾಯಿತು. ತಮ್ಮ ಜೀವನದ ಅನುಭವಗಳನ್ನು ಅನುಭಾವದ ನೆಲೆಗೇರಿಸಿದ ವಚನಕಾರರು ಅಚ್ಚಗನ್ನಡದ ಬೇಸಾಯಗಾರರು ಎನಿಸಿಕೊಂಡಿದ್ದಾರೆ. “ಸಾಹಿತ್ಯವೆಂದರೆ ಅನುಭವದ ಪ್ರಖರ ಭಾವನೆಗಳ ಸಹಜವಾದ ಅಭಿವ್ಯಕ್ತಿ” ಎಂಬ ವರ್ಡ್ಸ್‌ವರ್ತ್ ಮಾತಿಗೆ ಶರಣರು ನಿದರ್ಶನವಾಗಿದ್ದಾರೆ. ಏಕೆಂದರೆ ಸಾಹಿತ್ಯವೆಂದರೆ ಬದುಕು. ಬದುಕೆಂದರೆ ಸಾಹಿತ್ಯ. ವಚನಕಾರರಿಗೆ ತಾವು ಸಾಹಿತಿಗಳೆಂಬ ಅರಿವು ತಲೆದೋರಲಿಲ್ಲ. ತಾವು ಬಾಳಿದ ರೀತಿಯನ್ನೆ ಬರಹದಲ್ಲಿ ಪಡಿಮೂಡಿಸಿದರು. ಇವರ ಬದುಕು ಬೌದ್ಧಿಕ ಅಸ್ಮಿತೆಯಾದಂತೆ ಭೌತಿಕ ಅಸ್ಮಿತೆಯೂ ಆಗಿತ್ತು.

ಶರಣಯುಗದಲ್ಲಿ ವಚನಕಾರ ಸಿದ್ಧರಾಮರು ಶ್ರೇಷ್ಠ ವಚನಕಾರರಾಗಿದ್ದಾರೆ. ಯೋಗಿಗಳ ಯೋಗಿ ಶಿವಯೋಗಿಯಾದ ಸಿದ್ಧರಾಮರು ಕರ್ಮಯೋಗಿಯಾಗಿ ತಮ್ಮ ಅನುಭಾವದ ನುಡಿಗಳಿಂದ ಪ್ರಮುಖರೆನಿಸಿದ್ದಾರೆ. ಅವರ ಬದುಕಿನಲ್ಲಿ ನಡೆದ ಬಾಲ್ಯದ ಘಟನೆಗಳು, ಶ್ರೀಶೈಲದ ಘಟನೆ, ಸೊನ್ನಲಿಗೆಯನ್ನು ಸುರಪುರವನ್ನಾಗಿಸುವಲ್ಲಿ ಕೈಗೊಂಡ ಕಾರ್ಯಗಳು, ಮಣ್ಣಿನ ಮಹತ್ವ ಅರಿತ ಭಾವ, ಲಿಂಗದೀಕ್ಷಾ ಸಂದರ್ಭ, ಪ್ರಭುದೇವರೊಂದಿಗಿನ ಸಂವಹನ ಇವೆಲ್ಲವೂ ಸಿದ್ಧರಾಮನನ್ನು ಉನ್ನತ ಸ್ಥಾನಕ್ಕೆ ಏರಿಸಿವೆ. ಸಿದ್ಧರಾಮರು ಶರಣ ತತ್ವಗಳ ಸಾಧಕರಾಗಿದ್ದಾರೆ.

ಸಿದ್ಧರಾಮರ ವಚನಗಳಲ್ಲಿ ಮಾನವೀಯ ಮೌಲ್ಯಗಳ ದಟ್ಟಣೆಯನ್ನು ಕಾಣುತ್ತೇವೆ. ಅವರು ಪರಿಪಾಲಿಸಿದ ಸಹನಾ ತತ್ವ, ಸ್ತ್ರೀ ಸಮಾನತೆ ಸ್ವತಃ ಹಾರೆ ಗುದ್ದಲಿ ಹಿಡಿದು ಕಾಯಕದಲ್ಲಿ ದೈವ ದರ್ಶನ ಕಂಡ ಕಾಯಕ ಪ್ರಜ್ಞೆ, ಕೃಷಿಕ ಬದುಕನ್ನು ಒತ್ತಿ ಹೇಳಿದ ಕೃಷಿ ಪ್ರಜ್ಞೆ, ಮೂಢನಂಬಿಕೆಗಳ ವರ್ಜನೆ, ಮತ ಧರ್ಮದ ಬಗ್ಗೆ ಹೊಂದಿದ್ದ ತರತಮಭಾವ ಖಂಡನೆ, ಸರ್ವರ ಏಳ್ಗೆ, ಹೀಗೆ ತನ್ನ ತಾನರಿತು ಕಂಡುಕೊಂಡ ಸತ್ಯದ ಮಾತುಗಳನ್ನು ತನ್ನ ವಚನಗಳಲ್ಲಿ ನಿರೂಪಿಸಿದ್ದಾನೆ. ಸಿದ್ಧರಾಮರ ವಚನಗಳಲ್ಲಿ ನಿರ್ಭೀಡೆ ವಿಡಂಬನೆಗಳನ್ನು ಕಾಣಬಹುದು. ಜನಸಮುದಾಯದಲ್ಲಿ ಬೇರೆ



**ಸುಶೀಲ ಸೋಮಶೇಖರ್**
ಚೈತ್ರೋದಯ, ಪ್ರೆಸಿಡೆನ್ಸಿ ಕಾಲೇಜು
ಹಿಂಭಾಗ, ಸಾಲಗಾಮೆ ರಸ್ತೆ,
ಹಾಸನ–573201
ಮೊ : 9448997084

ಯುವ ಅವರನ್ನು ಕಂಡ ಅವರ ಸಮಕಾಲೀನರು ಸಿದ್ಧರಾಮರನ್ನು ಆದರ್ಶ ಪುರುಷನಾಗಿ ಕಂಡಿದ್ದಾರೆ.

**" ಕುಲವ್ಯಾಮೋಹದ ಖಂಡನೆ"**

ಕುಲವೆಂದು ಹೋರಾಡುವ ಅಣ್ಣಗಳಿರಾ ಕೇಳಿರೋ
**ಕುಲವೇ ಡೋಹರನ? ಕುಲವೇ ವಾಲ್ಮೀಕನ? ಕುಲವೇ ದೂರ್ವಾಸನ?**
**ಕುಲವೇ ವ್ಯಾಸನ? ಕುಲವೇ ಕೌಂಡಿಲ್ಯನ?**
**ಕುಲವ ನೋಳ್ಪಡೆ ಹುರುಳಿಲ್ಲ ಅವರ ನಡೆಯ ನೋಳ್ಪಡೆ**
**ನಡೆವವರು ತ್ರಿಲೋಕದಲಿಲ್ಲ,**
**ನೋಡಾ ಕಪಿಲ ಸಿದ್ಧ ಮಲ್ಲಿಕಾರ್ಜುನ**

ನಮ್ಮ ಪ್ರಾಚೀನ ಸಂಸ್ಕೃತಿಯನ್ನು ತಿಳಿದಾಗ ತಮ್ಮ ತಮ್ಮ ಹುಟ್ಟನ್ನೆ ಮೇಲ್ಮುಖವಾಗಿರಿಸಿ ಮೇಲಿನ ಕುಲದವರೆಂದು ತಮ್ಮನ್ನು ತಾವೇ ವೈಭವೀಕರಿಸಿಕೊಂಡ ವರ್ಗವೊಂದನ್ನು ಕಾಣುವಂತೆ ಮತ್ತೊಂದು ವರ್ಗವಿದೆ. ಅದು ಶ್ರಮಿಕ ವರ್ಗ. ಮೇಲ್ವರ್ಗದವರ ಕೈಕೆಳಗೆ ಬದುಕುವಂತಹ ವರ್ಗವೆಂದೆ ಗುರುತಿಸಲ್ಪಟ್ಟದ್ದು. ಸ್ಪೃಶ್ಯರಿಗೆ ಇವರನ್ನು ಕಂಡರೆ ಕೀಳರಿಮೆ. ಪ್ರೀತಿ ಅನ್ಯೋನ್ಯತೆ ಸಹಬಾಳ್ವೆ ವಿಶ್ವಾಸವೆಂಬ ಮಾನವೀಯ ಗುಣಗಳನ್ನು ತತ್ತರತರಿದೊತ್ತಿ ಈ ಬಡಜನತೆಯ ಬದುಕಿನಲ್ಲಿ ಪ್ರಭುತ್ವ ಸ್ಥಾಪಿಸಿದರು. ಮನುಷ್ಯ ಮನುಷ್ಯರ ನಡುವೆ ಅಡ್ಡಗೋಡೆ ನಿರ್ಮಿಸಿ ಸಮಾಜವನ್ನು ಹೋಳು ಹೋಳು ಮಾಡಿದರು. ಕಾರಣ ಅವರ ಕುಲದ ವ್ಯಾಮೋಹ. ಬಸವಾದಿ ಶರಣರು ಇದರಾಚೆ ನಿಂತು "ಇವನಾರವ ಇವನಾರವ ಎನ್ನದೆ ಇವ ನಮ್ಮವ ನಮ್ಮವ' ಎಂಬ ಲೋಕ ಪ್ರೀತಿ ತೋರಿದರು. ಈ ಮೇಲಿನ ವಚನ ತಿಳಿಸುವಂತೆ ಸಿದ್ಧರಾಮೇಶ್ವರರ ಚಿಂತನೆಯು ಬಹು ಮಹತ್ತರವಾದುದು. ಜಾತಿಕುಲ ಮತದ ಭ್ರಮೆಯುಳ್ಳವರನ್ನು ಖಂಡಿಸಿದ್ದಾರೆ. ಕೀಳು ಕುಲದವರೆಂದು ಸಮಾಜ ಕರೆಯುವವರೇ ಸಿದ್ಧಿ ಸಾಧನೆಗೈದಿರುವುದನ್ನು ನಿದರ್ಶನ ಸಹಿತ ಈ ವಚನದಲ್ಲಿ ಉಲ್ಲೇಖಿಸಿರುವುದನ್ನು ಕಾಣಬಹುದು. ಕುಲಮತದ ಹಿರಿಮೆಯನ್ನು ತೊರೆದು ಸಾಧನೆಯತ್ತ ಸಾಗಬೇಕೆಂಬ ಕರೆ ನೀಡಿ ಮಾನವತೆಯನ್ನು ಎತ್ತಿ ಹಿಡಿದಿದ್ದಾರೆ. ಶತಶತಮಾನಗಳಿಂದ ಧ್ವನಿ ಕಳೆದುಕೊಂಡವರ ನಡುವೆ ಕೆಳಸಮುದಾಯದವರ ಸಾಧನೆಗಳನ್ನು ಪ್ರಶಂಸೆ ಮಾಡಿದ್ದಾರೆ. ಆರಂಭಿಕ ಸಾಲಿನಲ್ಲಿ ಬರುವ 'ಎಲೆ ಅಣ್ಣಗಳಿರಾ' ಎಂಬ ಸಂವೇದನಾಶೀಲ ಭಾವನೆಯೆ ಮಾಧುರ್ಯದಿಂದ ಕೂಡಿದ್ದು ಸಿದ್ಧರಾಮರ ವಿನೀತ ಭಾವವನ್ನು ತೋರುತ್ತದೆ. ಮಾದಾರ ಚೆನ್ನಯ್ಯ ಡೋಹರ ಕಕ್ಕಯ್ಯ ಬಸವಣ್ಣನವರ ಬೆಂಬಲಿಗರು. ಅಂತೆಯೆ ಹಿರಿಯ ಶರಣರು. ಮಹಾಭಾರತ ಬರೆದ ವ್ಯಾಸರು ಪರಾಶರಮುನಿ ಮೀಂಗುಲಿಗ ವಂಶದ ಮತ್ಸ್ಯಗಂಧಿಯಾದ ಕಬ್ಬಲಗಿತ್ತಿಯ ಮಗ, ರಾಮಾಯಣ ಬರೆದ ವಾಲ್ಮೀಕಿ ಬೇಡರ ಕುಲದವನು. ಕೌಂಡಿಲ್ಯ ಕುಂಡಿನ( ಕೌಂಡಿಲ್ಯ) ಋಷಿಯ ಗೋತ್ರದಲ್ಲಿ ಹುಟ್ಟಿದವನು. ದೂರ್ವಾಸರಿಗೆ ದೇವಾನುದೇವತೆಗಳೆ ಹೆದರುತ್ತಿದ್ದರು. ದೂರ್ವಾಸರು ಶಿವನ ಅವತಾರದವರು. ಹಿಂದುಳಿದ ವರ್ಗದವರೆಂದು ಕರೆಸಿಕೊಳ್ಳುವ ಇವರ ಜ್ಞಾನ ಶಕ್ತಿಗೆ ಕ್ರಿಯಾಶೀಲತೆಗೆ ಕುಲಭೇದವೆಲ್ಲಿಯದು ಎನ್ನುತ್ತಾನೆ.

**"ಮೂಢನಂಬಿಕೆಗಳ ವರ್ಜನೆ"**

**ಒಬ್ಬರ ಮನವ ನೋಯಿಸಿ**
**ಒಬ್ಬರ ಮನೆಯ ಘಾತಕವ ಮಾಡಿ**
**ಗಂಗೆಯ ಮುಳುಗಿದಡೇನಾಗುವುದಯ್ಯಾ?**
**ಚಂದ್ರನು ಗಂಗೆಯ ಅಡಿಯಲ್ಲಿದ್ದಡೇನು? ಅದು ಕಾರಣ**
**ಮನವ ನೋಯಿಸಿದವನೆ ಒಬ್ಬರ ಘಾತಕವ ಮಾಡದವನೇ**
**ಪರಮ ಪಾವನ ನೋಡಾ ಕಪಿಲ ಸಿದ್ಧಮಲ್ಲಿಕಾರ್ಜುನ**

ಅಂದಿನಂತೆ ಇಂದು ಕೂಡ ನಮ್ಮ ಸಮಾಜದಲ್ಲಿ ಸಂಪ್ರದಾಯಗಳ ಹೆಸರಲ್ಲಿ ಮಾನವತೆಗೆ ಮೀರಿದ ಹಿಂಸಾತ್ಮಕ ರೀತಿಯ ಮೌಢ್ಯಯುತ ಆಚರಣೆಗಳನ್ನು ಕಾಣುತ್ತಿದ್ದೇವೆ. ನೇಮ-ನೀತಿ, ದೇವರು-ಧರ್ಮ, ವ್ರತಗಳ ನೆಪದಲ್ಲಿ ಮೌಢ್ಯತೆಯಿಂದ ಆಚರಿಸುತ್ತಿದ್ದ ಆಚರಣೆಗಳನ್ನು ಇಲ್ಲಿ ಟೀಕಿಸಿದ್ದಾರೆ. ಒಟ್ಟುಬಾಳ್ವೆ ನಡೆಸಬೇಕಾದರೆ ತನ್ನ ತಾ ಅರಿಯುವುದೆ ನಿಜವಾದ ನೇಮವೆಂಬುದು ಸಿದ್ಧರಾಮರ ಅಭಿಪ್ರಾಯ. ಸಿದ್ಧರಾಮರು ಧಾರ್ಮಿಕ ವಿಮರ್ಶೆಯ ಮೂಲಕ ಜನರಲ್ಲಿ ವೈಚಾರಿಕ ಪ್ರಜ್ಞೆಯನ್ನು ಬಿತ್ತಿದ್ದಾರೆ. ಇಲ್ಲಿ ಶಿವನ ಕುರಿತ ಪೌರಾಣಿಕ ಕತೆಗಳನ್ನು ಚೆನ್ನಾಗಿ ಬಲ್ಲವರಾಗಿದ್ದರೆಂಬ ಅಂಶವು ಇದೆ. ಅಂತೆಯೆ ಮೂಢನಂಬಿಕೆಗಳನ್ನು ಈಡಾಡಿ ಸಾತ್ವಿಕ ಬದುಕಿನ ಬೆಳಕನ್ನು ಬೀರಿದ್ದಾರೆ.

**ಮಹಿಳಾ ಪರ ಚಿಂತನೆ**

**ತಾ ಮಾಡಿದಾ ಹೆಣ್ಣು ತನ್ನ ತಲೆಯನೇರಿತ್ತು**
**ತಾ ಮಾಡಿದಾ ಹೆಣ್ಣು ತನ್ನ ತೊಡೆಯನೇರಿತ್ತು**
**ತಾ ಮಾಡಿದಾ ಹೆಣ್ಣು ಬ್ರಹ್ಮನ ನಾಲಿಗೆಯನೇರಿತ್ತು**
**ತಾ ಮಾಡಿದಾ ಹೆಣ್ಣು ವಿಷ್ಣುವಿನ ಎದೆಯನೇರಿತ್ತು**
**ಅದು ಕಾರಣ**
**ಹೆಣ್ಣು ಹೆಣ್ಣಲ್ಲ ಹೆಣ್ಣು ರಕ್ಕಸಿಯಲ್ಲ**
**ಹೆಣ್ಣು ಸಾಕ್ಷಾತ್ ಕಪಿ ಸಿದ್ಧಮಲ್ಲಿಕಾರ್ಜುನ ನೋಡಾ**

ಈ ಹಿಂದೆ ಅಸ್ಪೃಶ್ಯಳೆಂದು ಕರೆಸಿಕೊಂಡಿದ್ದ ಮಹಿಳೆ ಹನ್ನೆರಡನೆಯ ಶತಮಾನದ ಶರಣ ಚಳುವಳಿಯಲ್ಲಿ ಪ್ರಮುಖಳಾಗಿದ್ದಾಳೆ. ಕಾರಣ ವಚನಕಾರರ ವಿಚಾರಧಾರೆಯಲ್ಲಿ ಸ್ತ್ರೀ ಲೋಕಕ್ಕೆ ಬೆಳ್ಳಂಬೆಳಕಿನ ಪರಿಕಲ್ಪನೆ ಮೂಡಿತು. ಮಹಿಳೆ

ಯನ್ನು ಶರಣರು ಮನುಷ್ಯಳಂತೆ ಕಂಡರು. ಸ್ತ್ರೀಯಾಗಲಿ ಪುರುಷನಾಗಲಿ ಅವರವರ ಆತ್ಮೋದ್ಧಾರಕ್ಕೆ ಅವರೇ ಧಾತಾರರು ಎಂದರು. ಹೀಗೆ ಶರಣರು ಎತ್ತಿದ ಮಹಿಳಾಪರ ಚಿಂತನೆಯ ಫಲವಾಗಿ ನಮ್ಮ ನೆಲದಲ್ಲಿ ಒಂದೊಮ್ಮೆಗೆ ಸುಮಾರು ಮೂವತ್ತಾರು ಜನ ವಚನಕಾರ್ತಿಯರು ಮೂಡಿ ಬಂದರು. ದೀಕ್ಷಾ ಸಂಸ್ಕಾರದ ಹಕ್ಕನ್ನು ಹೊಂದಿದರು.

ಮೇಲಿನ ಈ ವಚನದಲ್ಲಿ ವಚನಕಾರ ಸಿದ್ಧರಾಮರ ಸಾಮಾಜಿಕ ಹಿತ ಪ್ರಜ್ಞೆಯನ್ನು ಕಾಣುತ್ತೇವೆ. ಇಲ್ಲಿ ಬರುವ 'ತಾ ಮಾಡಿದಾ ಹೆಣ್ಣು' ಎಂದರೆ ಹೆಣ್ಣು ಬರೀ ಸಾಮಾನ್ಯ ಸ್ತ್ರೀಯಾಗದೆ ತ್ರಿಮೂರ್ತಿಗಳಲ್ಲಿ ಅವಳು ಒಂದು ಅಂಶವಾಗಿ ಗೋಚರಿಸಿದ್ದಾಳೆ. ಹೆಣ್ಣು ಅಮಾನವೀಯಳಲ್ಲ. ರಕ್ಕಸಿಯಲ್ಲ. ಪ್ರತ್ಯಕ್ಷ್ಯ ಕಪಿಲಸಿದ್ಧ ಮಲ್ಲಿಕಾರ್ಜುನನೇ ಅವಳಾಗಿದ್ದಾಳೆ. ಇದು ಸಿದ್ಧರಾಮರು ಹೆಣ್ಣಿನ ಬಗ್ಗೆ ಹೊಂದಿರುವ ಗೌರವದ ಪ್ರತೀಕವಾಗಿದೆ. ಮಹಿಳೆ ಕುರಿತ ಅವರ ಕಾಳಜಿಯಲ್ಲಿ ಮನುಷ್ಯ ಪ್ರಯತ್ನವಿದೆ. ಈ ಮೂಲಕ ಸರ್ವರ ಜೀವನ ಪ್ರೀತಿಯನ್ನು ಎತ್ತಿ ಹಿಡಿದಿದ್ದಾರೆ. ಸಿದ್ಧರಾಮರು ಪುರುಷನಂತೆ ಮಹಿಳೆಯರ ಅಂತರಂಗದ ಸುಸಂಸ್ಕೃತ ಭಾವನೆಗಳನ್ನು ಗೌರವಿಸಬೇಕೆಂದು ಚಿಂತಿಸಿದರು. ಇದು ಶರಣ ಧರ್ಮವೂ ಆಗಿತ್ತು. ಮಹಿಳೆಯನ್ನು ಯೋಗ್ಯ ಲಿಂಗವಂತೆಯನ್ನಾಗಿ ಮಾಡುವಲ್ಲಿ ಅವಳ ವ್ಯಕ್ತಿತ್ವದ ಬೆಳವಣಿಗೆಗೆ ಪೂರಕವಾದ ವಾತಾವರಣವನ್ನು ಕಲ್ಪಿಸಿಕೊಡಬೇಕೆಂಬುದು ಸಿದ್ಧರಾಮರ ಅಭಿಪ್ರಾಯವಾಗಿದೆ. ಸ್ತ್ರೀಯರ ವಾತ್ಸಲ್ಯ ಪ್ರೀತಿಯ ಜೊತೆ ಜೀವನ ಧರ್ಮವನ್ನು ಕಲ್ಪಿಸುವುದು ನಿಸರ್ಗ ಧರ್ಮವೆಂದೇ ನಂಬಿ ಲಿಂಗಭೇದವನ್ನು ಅಲ್ಲಗಳೆದರು.

ಸ್ತ್ರೀಯರು ಕೇವಲ ತಮ್ಮ ಸ್ತ್ರೀ ಕರ್ತವ್ಯಗಳನ್ನಷ್ಟೆ ಆಲೋಚಿಸಿದರೆ ಸಾಕು ಎಂಬ ಮಹನೀಯರು ಈಗಲೂ ಇದ್ದಾರೆ. ಅಂತೆಯೆ ಮಹಿಳಾ ಶೋಷಣೆ ನಿರಂತರವಾಗಿದೆ. ಹೆಣ್ಣು ಭ್ರೂಣಹತ್ಯೆ, ಕೌಟುಂಬಿಕ ದೌರ್ಜನ್ಯ, ಲೈಂಗಿಕ ಕಿರುಕುಳ, ಮಹಿಳಾ ಅಪಹರಣ, ಹೆಣ್ಣು ಮಕ್ಕಳ ಮಾರಾಟ ಇಂದಿಗೂ ಕಂಡು ಬರುತ್ತಿರುವ ಈ ಸಂದರ್ಭದಲ್ಲಿ ಸಿದ್ಧರಾಮರ ಆಲೋಚನೆ ಎಲ್ಲರದಾಗಬೇಕಿದೆ.

**"ಕೃಷಿ ಕಾಯಕ ಮಾನ್ಯತೆ"**

**ಕೃಷಿಯ ಮಾಡಿ ಉಣ್ಣದೆ ಹಸಿವು ಹರಿವ ಪರಿ ಇನ್ನೆಂತೋ**
**ಕರ್ಮಯೋಗವ ಮಾಡದೆ ನಿರ್ಮಲ ಸುಚಿತ್ತವನರಿವ ಪರಿ ಇನ್ನೆಂತೋ**
**ಬೇಯದೆ ಆಶನವನುಂಬ ತಾವಾವುದು**
**ಕಪಿಲಸಿದ್ಧಮಲ್ಲಿಕಾರ್ಜುನ ಲಿಂಗಕ್ಕೆ**

ನಮ್ಮ ಭಾರತದ ನೆಲ ಮಣ್ಣಿನ ಮಕ್ಕಳದು. ಕೃಷಿ ದುಡಿಮೆಗೆ ಪವಿತ್ರಭೂಮಿಯಿದು. ಕೃಷಿಯೇ ಪ್ರಧಾನ ಕಸುಬು. ಕೃಷಿಕ ನಮ್ಮ ದೇಶದ ಬೆನ್ನೆಲುಬು. 'ಕೋಟಿ ವಿದ್ಯೆಗಳಲಿ ಮೇಟಿ ವಿದ್ಯೆಯೇ ಮೇಲು" ಎನ್ನುತ್ತಾನೆ ಸರ್ವಜ್ಞ. ಆದರಿಂದು ಕೃಷಿಕ ಜಗತ್ತು ನಲುಗುತ್ತಿದೆ. ಕೃಷಿಕರು ಸಮಸ್ಯೆಗಳ ಸುಳಿಯಲ್ಲಿ ಸಿಲುಕಿದ್ದಾರೆ. ಗ್ರಾಮೀಣರು ನಗರದತ್ತ ನೆಲೆಯೂರಿದರೆ ನಗರದವರು ವಿದೇಶದತ್ತ ಮುಖ ಮಾಡಿದ್ದಾರೆ. ಬೆಳೆ ಬೆಳೆಯಲು ಅನುಕೂಲಿಸುವ ಭೂ ತಾಯಿಯನ್ನು ಅಗೆದು ಬಗೆದು ಬರಿದು ಮಾಡುತ್ತಿದ್ದೇವೆ. ಜೀವಾಧಾರವಾಗಿರುವ ಮಣ್ಣಿನ ಮೌಲ್ಯವನ್ನು ಹಗುರವಾಗಿ ಕಾಣುತ್ತಿದ್ದೇವೆ. ನೆಲದ ಮಹತ್ವವನ್ನು ಮರೆತು ನಮ್ಮನ್ನು ನಾವೇ ಕಳೆದುಕೊಳ್ಳುತ್ತಿದ್ದೇವೆ. ಕೃಷಿ ಕಾಯಕಕ್ಕೆ ಬೇಕಾಗಿರುವುದು ನಂಬಿಕೆ. ಆತ್ಮವಿಶ್ವಾಸ, ಸ್ವಾಭಿಮಾನ.

ಇತ್ತೀಚಿನ ದಿನಗಳಲ್ಲಿ ರೈತರ ಆತ್ಮಹತ್ಯೆಯ ಪ್ರಕರಣಗಳು ಹೆಚ್ಚುತ್ತಿವೆ. ಕಾರಣ ರೈತ ಸೋತಾಗ ಆಗುವ ನಿರಾಶೆ, ಒಂದು ವರ್ಷ ನಷ್ಟವಾದ ಮಾತ್ರಕ್ಕೆ ಕಂಗೆಡುವುದು. ಆದರೆ ಕಾಲವನರಿತು ಮಾಡುವ ಕೃಷಿ ನಮ್ಮನೆಂದೂ ಕೈ ಬಿಡದು. ಕೃಷಿಕ ಜಗತ್ತಿಗೆ ಕುಲಧರ್ಮ ಭೇದವಿಲ್ಲ. ಲಿಂಗ ತಾರತಮ್ಯವಿಲ್ಲ. ಈ ವಚನದಲ್ಲಿ ಸಿದ್ಧರಾಮೇಶ್ವರರು ನೀಡಿರುವ ಕೃಷಿ ಜಗತ್ತಿನ ಮೌಲ್ಯ ಲೋಕ ಸಂದೇಶವಾಗಿದೆ. ಕೃಷಿ ಕಾಯಕದಿಂದ ಬದುಕು ಉನ್ನತಿಗೇರುತ್ತದೆ.

**ಯೋಗಿಯ ಶರೀರ ವೃಥಾಯ ಹೋಗಲಾರದಯ್ಯಾ**
**ಪುಣ್ಯವ ಪುಣ್ಯವ ಮಾಡುವುದು ಲೋಕಕ್ಕೆ**
**ಆದಿಯ ಹಾದಿಯ ಹತ್ತುವುದಯ್ಯಾ**
**ಆ ಲೋಕಕ್ಕೆ ಸೋಪಾನವ ಕೊಡುವ ಎನ್ನ**
**ಕಪಿಲ ಸಿದ್ಧಮಲ್ಲಿಕಾರ್ಜುನಯ್ಯನು**

ಸಿದ್ಧರಾಮರು ಕರ್ಮಾಚರಣೆಯನ್ನು ಎತ್ತಿ ಹಿಡಿದ ಕರ್ಮಯೋಗಿಗಳು. ಲೋಕ ನೆಮ್ಮದಿಗೆ ಕರ್ಮಾಚರಣೆಯೇ ಮೂಲ. ಕರ್ಮವನ್ನು ಲೋಕ ಕಲ್ಯಾಣಕ್ಕಾಗಿ ಮಾಡಬೇಕು ಎನ್ನುವಲ್ಲಿ ಸರ್ವಜನರ ಹಿತವಿದೆ. ಬದುಕು ಬರೀ ಬದುಕಾಗಬಾರದು. ಕ್ರಿಯಾಶೀಲ ಸೃಜನಶೀಲವಾಗಿ ಬದುಕು ಸಾರ್ಥಕತೆ ಪಡೆಯಬೇಕು. ಪ್ರತಿಫಲದ ಅಪೇಕ್ಷೆಯಿಲ್ಲದೆ ಕಾಯಕ ಮಾಡುವವನೆ ನಿಜವಾದ ಯೋಗಿ. ಅಂತಹ ಯೋಗಿಯ ಶರೀರ ವೃಥಾ ಹಾಳಾಗಬಾರದು. ಕಾರಣ ಈ ಲೋಕಕ್ಕೆ ಬಂದ ಕಾಯ ಬಂದಂತೆ ಹಿಂದಿರುಗುವುದು. ಶರೀರವನ್ನು ಹೊತ್ತು ಬಂದಿರುವುದೇ ಪುಣ್ಯ. ಬಂದು ಹೋಗುವುದರ ನಡುವೆ ಸಫಲವಿರಬೇಕು. ಈ ಪುಣ್ಯದ ಕಾಯ ಕಾಯಕದಿಂದ ಕೂಡಿರಲೆಂಬುದು ಸಿದ್ಧರಾಮರ ಆಶಯ.

"ಸಿದ್ಧರಾಮರ ಸಮತಾ ಭಾವ"

**ಆರೇನೆಂದಡೂ ಓರಂತಿಪ್ಪುದೆ ಸಮತೆ**
**ಆರು ಜರೆದರೂ ಅವರೆನ್ನ ಮನದ ಕಾಳಿಕೆಯ ಕಳೆದರೆಂಬುದೇ ಸಮತೆ**
**ಆರು ಸ್ತೋತ್ರ ಮಾಡಿದರೂ ಅವರೆನ್ನ ಜನ್ಮದ ಹಗೆಗಳೆಂಬುದೇ ಸಮತೆ**
**ಇಂತಿದು ಗುರುಕಾರುಣ್ಯ ಮನ ವಚನ ಕಾಯದಲ್ಲಿ ಅಹಿತವಿಲ್ಲದೆ**
**ಕಪಿಲ ಸಿದ್ಧ ಮಲ್ಲಿಕಾರ್ಜುನಯ್ಯಾ ನಿಮ್ಮವರ ನೀನೆಂಬುದೇ ಸಮತೆ**

ಸಿದ್ಧರಾಮರದು ಸಮತಾಭಾವವುಳ್ಳ ಮನೋವೈಶಾಲ್ಯತೆ. ಸರ್ವರ ಬದುಕಿನಲ್ಲಿ ಸ್ತುತಿ–ನಿಂದನೆ ಸಹಜವಾದುದು. ಈ ಭಾವನೆಗಳಿಗೆ ಹಿಗ್ಗದೆ ಕುಗ್ಗದೆ ಸಮಚಿತ್ತತೆಯನ್ನು ಹೊಂದಿರಬೇಕೆಂಬ ಧೋರಣೆ ಇವರದು. ಬಸವಣ್ಣನವರು "ಹೊಗಳಿ ಹೊಗಳಿ ಎನ್ನ ಹೊನ್ನ ಶೂಲಕೇರಿಸಿದರಯ್ಯಾ" ಎಂದು ನೊಂದು ಇದರಿಂದ ಮುಕ್ತಿಗೊಳಿಸೆಂದು ಕೂಡಲಸಂಗಮನಲ್ಲಿ ಬೇಡುತ್ತಾರೆ. ಸರ್ವರಲ್ಲಿ ಒಂದಾಗಿ ಬಾಳಬೇಕಾದರೆ ಅನ್ಯರ ಭಾವನೆಗಳ ಕುರಿತು ಸಕಾರಾತ್ಮಕವಾಗಿ ಯೋಚಿಸಿದಾಗ ಶಾಂತಿಗೆ ಭಂಗ ಬಾರದು. ಹೊಗಳಿಕೆಯೆಂಬುದು ಅಹಂಕಾರವನ್ನು ಹುಟ್ಟು ಹಾಕುತ್ತದೆ. ತೆಗಳಿಕೆ ದುರ್ಬಲ ಮನಸ್ಸನ್ನು ಜರ್ಜರಿತವನ್ನಾಗಿಸುತ್ತದೆ. ಇವೆರಡೂ ವ್ಯಕ್ತಿತ್ವದ ಅವನತಿಗೆ ಕಾರಣವಾಗುತ್ತವೆ. ಆದ್ದರಿಂದ ಈ ಎರಡೂ ಭಾವಗಳಿಗೂ ಮನಸೋಲಬಾರದು.

ಒಂದೊಮ್ಮೆ ನಮ್ಮನ್ನು ಯಾರಾದರೂ ತೆಗಳಿದರೆ ಅದನ್ನು ಕುರಿತು ವಿವೇಚಿಸಬೇಕು. ನಮ್ಮ ಲೋಪದೋಷಗಳನ್ನು ತಿದ್ದಲು ಎಂದು ಭಾವಿಸಿದರೆ ವಾತಾವರಣ ಕೆಡುವುದಿಲ್ಲ. ಅಂತೆಯೇ ಹೊಗಳಿಕೆಯ ಮಾತುಗಳು ಬಂದಾಗ ನಮ್ಮೊಳಗಿನ ಮೌಲ್ಯಗಳಿಗೆ ಇನ್ನು ಹೆಚ್ಚಿನ ವರ್ಧನದ ಪ್ರೇರಣೆ ಎಂದು ಭಾವಿಸಿದರೆ ಮನಸ್ಸು ಸದ್ದುಗದ್ದಲವಿರದೆ ಸದಾ ಸಮಚಿತ್ತದಿಂದ ಕೂಡಿರುತ್ತದೆ. ಇದು ವ್ಯಕ್ತಿತ್ವ ವಿಕಸನಕ್ಕೂ ಕಾರಣವಾಗುತ್ತದೆ. ಇದ್ದರೂ ಇಲ್ಲದಂತಿರುವ ಸುಜ್ಞಾನ ಗೋಚರಿಸುತ್ತದೆ. ಇದು ಸಮತಾಭಾವಕ್ಕೆ ಪೂರಕವಾದುದು. ಉರಿ ಬರಲಿ ಸಿರಿ ಬರಲಿ ಬೇಕು ಬೇಡ ಎನ್ನದವನೇ ನಿಜವಾದ ಶರಣ.

ವಚನಕಾರ ಸಿದ್ಧರಾಮರು ದಯಾಪರರು. ಮಣ್ಣಿನ ಸಂಸ್ಕೃತಿಯನ್ನು ಎತ್ತಿ ಹಿಡಿದ ಕೃಷಿ ತಜ್ಞರು. ನೆಲದೊಳಗಿನ ಜಲಧಾರೆಯ ಪಶು ಪಕ್ಷಿ ಪ್ರಾಣಿಗಳಿಗೆ ಉಣಿಸಿದವರು. ಪ್ರಗತಿಪರ ಧೋರಣೆಯುಳ್ಳ ತ್ಯಾಗಿ. ಕರ್ಮಯೋಗಿ. ಶಿವಯೋಗಿ. ಮೌಢ್ಯಾಂಧತೆಯನ್ನು ಕಿತ್ತೊಗೆದವರು. ಸಮಷ್ಠಿ ಹಿತ ಬಯಸಿದವರು. ಜನರ ಸೇವೆಯೇ ಮಹೋನ್ನತ ಜನಾರ್ಧನನ ಸೇವೆಯೆಂದವರು. ಸಮಾಜ ಸೇವಕರಾಗಿ ಬಾಳಿ ಬದುಕಿ ತಾವು ಬೆಳಕಾಗಿ ಅನ್ಯರ ಬಾಳ ಬೆಳಕಿಗೂ ಮಾರ್ಗ ದೀವಿಗೆಯಾದವರು. ಲೋಕ ಶಾಂತಿಗೆ ಮಹೋನ್ನತ ಮಾನವೀಯ ಲೋಕವನ್ನು ತನ್ನ ವಚನಗಳಲ್ಲಿ ತೆರೆದಿಟ್ಟ ಮಹಾ ಶರಣ ಸಿದ್ಧರಾಮರು ಯಾವ ಕಾಲದ ಯಾರಿಗೆ ತಾನೇ ಬೇಡವಾಗುತ್ತಾರೆ.

## ಮನವಿ

**ನೊಳಂಬ ಅರಸರ ರಾಜ್ಯಭಾರ, ನೊಳಂಬ ಸಮುದಾಯದ ಮಠಗಳು, ಸಾಹಿತ್ಯ, ಇತಿಹಾಸ, ಕೃಷಿ, ಭಾಷೆ, ಬದುಕು, ಸಂಸ್ಕೃತಿ, ಸಾಂಸ್ಕೃತಿಕ ಚಟುವಟಿಕೆ, ವಾಸ್ತು ಶಿಲ್ಪಗಳ ಬಗ್ಗೆ ಅಧ್ಯಯನ ಮತ್ತು ಸಂಶೋಧನೆ ಮಾಡಲು ನೊಳಂಬ ಲಿಂಗಾಯತ ಸಂಘದಿಂದ ತುಮಕೂರು ವಿಶ್ವವಿದ್ಯಾನಿಲಯದಲ್ಲಿ ನೊಳಂಬ ಸಂಸ್ಕೃತಿ ಅಧ್ಯಯನ ಪೀಠವನ್ನು ಸ್ಥಾಪಿಸಿದ್ದು, ಅಧ್ಯಯನಕ್ಕಾಗಿ ಬರುವ ಅಭ್ಯರ್ಥಿ/ಸಂಶೋಧಕರುಗಳಿಗೆ ಸೌಲಭ್ಯ ಕಲ್ಪಿಸಲು ಹಣದ ಕೊರತೆ ತುಂಬಾ ಇರುವುದರಿಂದ ದಾನಿಗಳಾದ ತಾವು ವಂತಿಗೆ ನೀಡಲು ಬಯಸಿದ್ದಲ್ಲಿ ಈ ಕೆಳಕಂಡ ಬ್ಯಾಂಕಿಗೆ ಹಣವನ್ನು ವರ್ಗಾವಣೆ ಮಾಡಲು ಮನವಿ ಮಾಡುತ್ತೇನೆ.**

| | |
|---|---|
| **ಹೆಸರು** | **: ನೊಳಂಬ ಲಿಂಗಾಯತ ಸಂಘ (ರಿ.)** |
| **ಬ್ಯಾಂಕ್** | **: ಎಸ್.ಬಿ.ಐ. ಬಸವೇಶ್ವರನಗರ** |
| **ಖಾತೆ ಸಂಖ್ಯೆ** | **: 54033145493** |
| **ಐ.ಎಫ್.ಎಸ್.ಸಿ.** | **: SBIN0040624** |

# ನಮ್ಮನ್ನೇ ಪ್ರಶ್ನಿಸಿಕೊಂಡರೆ?

ಶಿವಶರಣರು ಮಾನವೀಯತೆಗೆ ಮನ್ನಣೆ ಕೊಟ್ಟಿದ್ದರು. ನೀನು ಬದುಕು ಮತ್ತೊಬ್ಬನನ್ನು ಬದುಕಲು ಬಿಡು ಎನ್ನುವ ಪ್ರಚಲಿತ ಮೌಲ್ಯಕ್ಕಿಂತ : "ನೀನು ಚೆನ್ನಾಗಿ ಬದುಕು, ಮತ್ತೊಬ್ಬನೂ ಚೆನ್ನಾಗಿ ಬದುಕಲು ಸಹಕರಿಸು" ಎಂಬುದು ಶರಣರ ಜೀವನ ಮೌಲ್ಯ. ಸಿದ್ಧರಾಮ ಅದರಂತೆ ಬದುಕಿದ ಶರಣ. ಆದ್ದರಿಂದಲೇ "ಸಕಲ ಜೀವಿಗಳಿಗೂ ಲೇಸನೆ ಬಯಸುವುದು" ಲಿಂಗಾಯತ ಧರ್ಮದ ಪರಮೋದ್ದೇಶ. ಈ ತತ್ವಾನುಷ್ಠಾನದಿಂದ ವ್ಯಕ್ತಿಯ ಬಾಳು ಹಸನಾಗುತ್ತದೆ. ಸಮಷ್ಟಿಯ ಹಿತ ಸಾಧಿತವಾಗುತ್ತದೆ. ದುಡಿದಲ್ಲದೆ ತಿನ್ನುವುದಿಲ್ಲ, ನಾಳೆಗೆಂದು ಕೂಡಿಡುವುದಿಲ್ಲ. ಇಲ್ಲಿ ಅರ್ಹನಾದರೆ ಎಲ್ಲೆಲ್ಲಿಯೂ ಅರ್ಹನಾಗುತ್ತಾನೆ. ಇಹ ಕರ್ತಾರನ ಕಮ್ಮಟ, ಸತ್ಯಶುದ್ಧ ನಡೆ ನುಡಿಗೆ ಮನ್ನಣೆ, ಹೆಣ್ಣುಗಂಡೆಂಬ ಭೇದವಿಲ್ಲ, ಜಾತಿಮತವಿಲ್ಲದೆ, ಮೇಲು ಕೀಳೆನ್ನದೆ ಬಡವ ಬಲ್ಲಿದನೆನ್ನದೆ, ವರ್ತಮಾನಕ್ಕೆ ಮನ್ನಣೆ ಕೊಟ್ಟು, ಇಹದ ಬದುಕಿನ ನೆಮ್ಮದಿಗಾಗಿ ಆದರ್ಶ ಸಮಾಜ ಕಟ್ಟುವ ಬಯಕೆ ಅವರದು. ಪಾಪ-ಪುಣ್ಯ, ಹಣೇಬರಹ, ಅದೃಷ್ಟವಾದ, ಕರ್ಮಸಿದ್ಧಾಂತ, ಜನ್ಮಾಂತರಗಳ ತೊಡಕಿಲ್ಲ. ಅರ್ಥವಾಗದ ಭಾಷೆಯ ಬೆನ್ನಂಟದೆ, ಅರ್ಥವಾಗುವ ಭಾಷೆಗೆ ಮನ್ನಣೆ ಕೊಟ್ಟು ಬದುಕಿಗೆ ಹತ್ತಿರವಾಗಿದ್ದರು. ತಾನಿರುವ ನೆಲೆಯಲ್ಲೆ, ತನಗೆಟುಕಿದ ರೀತಿಯಲ್ಲೆ, ತನ್ನ ಮಿತಿಯಲ್ಲೆ, ಸತ್ಯಶುದ್ಧ ಕಾಯಕ ತತ್ವಕ್ಕೆ ಬದ್ಧರಾಗಿದ್ದರು. ಆದ್ದರಿಂದ ಶರಣಧರ್ಮ, ಸಕಾರಣಬದ್ಧ ವ್ಯಕ್ತಿನಿಷ್ಠ ಧರ್ಮ.

ಲಿಂಗವಂತ ಧರ್ಮ, ಕಾಲ, ಸ್ಥಳ, ಹುಟ್ಟಿನ ನಿರ್ಬಂಧವಿಲ್ಲದೆ, ವ್ಯಕ್ತಿಗತ ಸಾಧನಶೀಲವಾಗಿದೆ. ವಿಶ್ವ ಅಥವಾ ಬ್ರಹ್ಮಾಂಡದ ಚರಾಚರ ವಸ್ತುವಿನ ನಿಗೂಢಶಕ್ತಿಗೆ ಪರಶಿವತ್ವದ ಕಲ್ಪನೆಯಿಂದೆ. ಯಾವುದೇ ರೀತಿಯ ಆಚರಣೆಯ ಕಟ್ಟುಪಾಡುಗಳಿಲ್ಲ. ಮಧ್ಯವರ್ತಿಗಳ ಅಡ್ಡಗೋಡೆಯಿಲ್ಲ. ಫಲಸಿದ್ಧ ವ್ಯಕ್ತಿನಿಷ್ಠ ಅನುಭಾವವಾಗಿರುವುದರಿಂದ, ಯಾರಾದರೂ ಅಳವಡಿಸಿಕೊಳ್ಳಬಹುದಾದ, ಎಲ್ಲಿಯಾದರೂ ಅನುಷ್ಠಾನ ಮಾಡುವಂತಿರುವುದರಿಂದ ವಿಶ್ವಧರ್ಮವೆನ್ನಿಸಿಕೊಳ್ಳುತ್ತಿದೆ. ಶಿವಶರಣರ ನಂಬಿಕೆ--ಜೀವನ-ವಿಶ್ವಾತ್ಮ ಸಂಭಂಧದಲ್ಲಿ ಏಕಸೂತ್ರವಿತ್ತು. ಪರಸ್ಪರ ಪೂರಕವಾಗಿತ್ತು. ಬದುಕಿಗೆ ಅರ್ಥಸ್ಥಿರತೆ ಇತ್ತು. ಚಿತ್ತ ಕಲುಷಿತವಾಗಿರಲಿಲ್ಲ. ಆದರೆ ಇಂದು ನಮ್ಮ ನಂಬಿಕೆಗೂ-ಬದುಕಿಗೂ-ವಿಶ್ವಾತ್ಮಕ್ಕೂ ಪರಸ್ಪರ ಸಂಬಂಧವಿಲ್ಲ. ಆದರ್ಶ ಮತ್ತು ದೈವತ್ವ ನಮ್ಮ ನಮ್ಮ ಉಪಯುಕ್ತತೆಗೆ ತಕ್ಕಂತೆ ಬಳಸಿಕೊಳ್ಳುವ, ನಂಬುವ, ಕೈಬಿಡುವ ಸಂಗತಿಯಾಗಿದೆ. ಜೀವನ ಭೋಗಕ್ಕಾಗಿ ಎಂಬ ಭ್ರಮೆ ಇದೆ. ವಿಶ್ವ ಅಥವಾ ಬ್ರಹ್ಮಾಂಡ ಕೂಡ ನಮ್ಮ ಅನುಕೂಲಕ್ಕಾಗಿ ಎಂಬ ಗ್ರಹಿಕೆ ಇದೆ. ನಮ್ಮ ಚಿತ್ತವೇ ಕಲುಷಿತವಾಗಿದೆ. ಹಾಗಾಗಿ ನಮ್ಮ ಸ್ಥಿತಿ ಮರಳ ಮೇಲೆ ಮನೆ ಕಟ್ಟಿದಂತೆ ಎಲ್ಲ ಕಡೆ ಅಸ್ಥಿರತೆ, ಅಶಾಂತಿಯಿದೆ. ಈ ಪ್ರಸ್ತಾವನೆಯ ಹಿನ್ನೆಲೆಯಲ್ಲಿ ನಮಗೆ ನಾವೇ ಕೆಲವು ಪ್ರಶ್ನೆಗಳನ್ನು ಕೇಳಿಕೊಳ್ಳುವ-ಏಕೆಂದರೆ ಶಿವಶರಣರು ಪ್ರತಿಕ್ಷಣ ನ್ಯಾಯನಿಷ್ಠುರಿಗಳಾಗಿದ್ದು ಆತ್ಮಾವಲೋಕನ ಮಾಡಿಕೊಳ್ಳುತ್ತಾ, ತಮ್ಮಲ್ಲಿ ತಾವೇ ಪ್ರಶ್ನೆಗಳನ್ನು ಕೇಳಿಕೊಂಡು ತಮ್ಮೊರೆಕೋರೆಗಳನ್ನು ತಿದ್ದಿಕೊಳ್ಳುವ ಪ್ರಾಮಾಣಿಕ ಪ್ರಯತ್ನ ಮಾಡಿಕೊಂಡಿರುವ ಹಲವಾರು ಉದಾಹರಣೆಗಳು ವಚನ ಸಾಹಿತ್ಯದಲ್ಲಿವೆ. ಈ ಪ್ರಶ್ನೆಗಳಿಗೆ ಯಾರೂ ಉತ್ತರಿಸಬೇಕಾದ್ದಿಲ್ಲ. ನಮಗೆ ನಾವೇ ಕೇಳಿಕೊಂಡು ನಾವೇ ಬದುಕಿನಲ್ಲಿ ಉತ್ತರ ಕಂಡುಕೊಳ್ಳಬೇಕು.

1. ಸಕಲ ಜೀವಿಗಳಿಗೆ ಲೇಸನೇ ಬಯಸುವ ವಿಶ್ವಧರ್ಮವಾದ ಲಿಂಗಾಯತ ಧರ್ಮದ ಅನುಯಾಯಿಗಳಾದ ನಾವು ನಮ್ಮ ನಡೆನುಡಿಯಲ್ಲಿ ಶುದ್ಧರಾಗಿ, ಅಂಥರಂಗ, ಬಹಿರಂಗವೆರಡೂ ಒಂದೇ ಎಂದು ತಿಳಿದು ಸತ್ಯ-ಸುಂದರ-ಶಾಶ್ವತ ಸ್ವರೂಪಿ ಶಿವನನ್ನು ಆರಾಧಿಸಿ, ಶಿವನೇ ಆಗುತ್ತೇವೆ ಎಂಬ ವೀರ ಮಾಹೇಶ್ವರ ನಿಷ್ಠೆಯ-ವೀರಶೈವರು ನಾವಾಗಿದ್ದೇವೆಯೇ?

2. ಲಿಂಗವಂತ, ಲಿಂಗಧಾರಿ, ಲಿಂಗಾಯಿತ ಎಂಬ ಪದಗಳು ಸೂಚಿಸುವ ಲಿಂಗದ ಸಂಕೇತ; ಅಂಗದ ಮೇಲಿನ ಲಿಂಗನಿರಬೇಕು, ದೇಹ ದೇವಾಲಯವಾಗಬೇಕು, ದೇಹ ಪರಿಶುದ್ಧವಾಗಿ ಶಿವನ ಆವಾಸ ಸ್ಥಾನವಾಗಬೇಕೆಂಬ ಅರ್ಥದ ಪ್ರತೀಕ. ಈ ಹಿನ್ನೆಲೆಯಲ್ಲಿ ವೈದೀಕರು ಯಜ್ಞೋಪವೀತ ಧರಿಸುವಂತೆ, ಕ್ರೈಸ್ತರು ಶಿಲುಬೆ ಚಿಹ್ನೆ ಧರಿಸುವಂತೆ ಲಿಂಗಧಾರಿಗಳೀಗೆ ಲಿಂಗ ಧರಿಸುವುದು ಅಭಿಮಾನದ, ಪಾವಿತ್ರ್ಯದ ಹಿರಿಮೆ ಎನ್ನಿಸುತ್ತಿದೆಯೇ ಅಥವಾ ಅದು ತೊಡಕು ಎನ್ನಿಸುತ್ತಿದೆಯೇ?

3. ರೇವಣಸಿದ್ಧ, ಮರುಳಸಿದ್ಧ, ಅಲ್ಲಮ, ಬಸವ, ಸಿದ್ಧರಾಮ, ಅಕ್ಕಮಹಾದೇವಿಯರಂತಹ ಶಿವಶರಣರ ವಾರಸುದಾರರು ನಾವಾಗಿದ್ದೇವೆಯೇ? ಅದಕ್ಕೆ ತಕ್ಕ ಅರ್ಹತೆ ಯೋಗ್ಯತೆ

ಸಂಪಾದಿಸುತ್ತಿದ್ದೇವೆಯೇ?

4. ಜಾತಿ ಮತ ಭೇದವಿಲ್ಲದೆ 'ಶರಣ ಸತಿ ಲಿಂಗಪತಿ' ಎಂಬ ತತ್ವ ಒಪ್ಪಿಕೊಂಡು ತನಗೆ ತಾನೇ ಯಾರೂ ಶ್ರೇಷ್ಠರಲ್ಲ, ಯಾರೂ ಕನಿಷ್ಠರಲ್ಲ, ಸಾಧನೆಯಲ್ಲಿ ತೊಡಗಿದ ಎಲ್ಲರೂ ಸಮಾನರು, ಪ್ರತಿಯೊಬ್ಬನೂ ಸಮರ್ಥನಾಗಬೇಕು ಎಂಬುದಕ್ಕೆ ಪ್ರಾಧಾನ್ಯತೆ ಕೊಟ್ಟ ಶರಣ ಧರ್ಮದ ಅನುಯಾಯಿಗಳಾದ ನಮ್ಮಲ್ಲಿ ಅಂತರ, ಭಿನ್ನ ಭೇದವೇಕೆ?

5. ಶಿವಶರಣರ ದೃಷ್ಟಿಯಲ್ಲಿ ಗುರುವೆಂದರೆ ಸತ್ವಶಾಲಿ, ಜ್ಞಾನಮೂರ್ತಿ, ಲಿಂಗವೆಂದರೆ ಚರಾಚರ ವಸ್ತುವನ್ನೊಳಗೊಂಡ ಚೈತನ್ಯದ ಬೆಳಕು. ಜಂಗಮವೆಂದರೆ ಚಲಿಸುವ ಚೈತನ್ಯ. ಪ್ರಸಾದವೆಂದರೆ ಸ್ವಶ್ರಮದಿಂದ ನ್ಯಾಯವಾಗಿ ಗಳಿಸಿದ ದುಡಿಮೆ. ಪಾದೋದಕವೆಂದರೆ ಗುರುವಿನ ಮೂಲಕ ಬೋಧಿತವಾಗುವ ಜ್ಞಾನ ಜಲ (ಗ್ರಹಿತವಾಗುವ ತಿಳಿವು). ಆದರೆ ಇಂದು ಲಿಂಗವಂತರ ಆಚರಣೆಯಲ್ಲಿ ಜಂಗಮ ಎಂಬುದು ಒಂದು ಜಾತಿಯ ಜನ, ಗುರುವೆಂದರೆ ಲಾಂಛನಧಾರಿ. ಪ್ರಸಾದವೆಂದರೆ ವಿಗ್ರಹಕ್ಕೆ ನೀವಳಿಸಿದ್ದು, ಪಾದೋದಕವೆಂದರೆ ಐಯ್ಯನವರ ಪಾದ ತೊಳೆದ ನೀರು ಎಂಬ ಸೀಮಿತ ಅರ್ಥಕ್ಕೆ ಬಂದು ಲಿಂಗವಂತರ ಆಚರಣೆ ವಿಕೃತವಾಗುತ್ತಿಲ್ಲವೆ?

6. ಜಗತ್ತಿನ ಯಾವುದೇ ಧರ್ಮಕ್ಕೆ ಧರ್ಮಗ್ರಂಥದ ಭಾಷೆಯ ಆಧಾರವಿದೆ. ಬೌದ್ಧಧರ್ಮಕ್ಕೆ ತ್ರಿಪಿಟಕ ಗ್ರಂಥ, ಪಾಳಿ ಭಾಷೆ; ಕ್ರೈಸ್ತ ಧರ್ಮಕ್ಕೆ ಬೈಬಲ್ ಗ್ರಂಥ, ಹೀಬ್ರೂ ಭಾಷೆ; ಇಸ್ಲಾಂ ಧರ್ಮಕ್ಕೆ ಕುರಾನ್ ಗ್ರಂಥ, ಅರಾಬಿಕ್ ಭಾಷೆ; ವೈದಿಕ ಧರ್ಮಕ್ಕೆ ಮನು ಧರ್ಮಶಾಸ್ತ್ರ, ಭಗವದ್ಗೀತೆ, ಸಂಸ್ಕೃತ ಭಾಷೆ, ವೀರಶೈವ ಧರ್ಮಕ್ಕೆ ವಚನ ಸಾಹಿತ್ಯದ ಗ್ರಂಥರಾಶಿ, ಕನ್ನಡ ಭಾಷೆ ಆಗಿದೆ. ಆದರೆ ಲಿಂಗಾಯತ ಮತಾನುಯಾಯಿಗಳು ಶಿವಶರಣರ ವಚನ ಸಾಹಿತ್ಯದ ಮೂಲ ಇದ್ದ ಹಾಗೆ ಗ್ರಹಿಸಿದೆ. ಕೆಲವರು ವಿಕೃತಗೊಳಿಸುತ್ತಿರುವುದೇಕೆ? ಕನ್ನಡ ಭಾಷೆಯನ್ನು ಬಳಸಿ, ಬೆಳೆಸುವ ನಿಷ್ಠೆ ನಮಗೆಷ್ಟಿದೆ. ಲಿಂಗಾಯತ ಮತಮಾನ್ಯಗಳು, ಗಿಳಿಪಾಠದ ವೈದಿಕ ಘೋಷಕ್ಕೆ ವೈದಿಕಾಚರಣೆಯ ಪೌರೋಹಿತ್ಯಕ್ಕೆ ಅಂಟಿಕೊಂಡು ಬದುಕಿನಲ್ಲಿಯೇ ಅರಳಬೇಕಾದ ಲಿಂಗವಂತ ಧರ್ಮವನ್ನು ಆಚಾರದ ನೇಣಿಗೆ ಬಿಗಿಯುತ್ತಿರುವುದೇಕೆ?

7. ಕ್ರಿಯಾಶೀಲರಾಗಿ ಚಲನಶೀಲ ಚೈತನ್ಯ ಸ್ವರೂಪಿಗಳಾಗಿದ್ದ ಶಿವಶರಣರು ಯಾವುದೇ ವಿಷಯವನ್ನು ಸ್ಥಿರಗೊಳಿಸುವ, ಸ್ಥಾವರಗೊಳಿಸುವ, ಮಠ ಕಟ್ಟುವ ವಿಷಯಗಳಿಗೆ ವಿರೋಧಿಗಳಾಗಿದ್ದರು. ಸಿದ್ಧರಾಮನಂತೆ ಕ್ರಿಯಾಶೀಲರಾಗಿದ್ದರಿಂದ ಅವರು ನಿಂತ ನೆಲೆ ಸಾಧನೆಯ ಕೇಂದ್ರಗಳಾಗಿದ್ದವು. ಆದರೆ ಅವರ ತತ್ವ ಪರಂಪರೆಯವರೆಂದು ಹೇಳಿಕೊಳ್ಳುವ ಲಿಂಗಾಯತರಲ್ಲಿ, ಮಠ ಕಟ್ಟುವ ಪರಿಪಾಠ ಬೆಳೆದದ್ದೇಕೆ, ಸಾಧನೆಯ ಕೇಂದ್ರಗಳಿಲ್ಲ ಏಕೆ?

ಲಿಂಗಾಯತ ಶ್ರೀಮಠಗಳೂ ತನ್ನ ಒಬ್ಬೊಬ್ಬ ಶಿಷ್ಯರಲ್ಲೂ ಸ್ವಾಭಿಮಾನದ ಮಾನವಂತ ಬದುಕಿಗೆ ಬೇಕಾದ ನೈತಿಕ ಶಕ್ತಿಯ ನೆಲೆಗಟ್ಟಿನ ಮೇಲೆ, ಶ್ರಮ ಸಂಸ್ಕೃತಿಯ ಕಾಯಕ ತತ್ವ ಅರಳಿಸುವುದರ ಮೂಲಕ ಆರೋಗ್ಯಕರ ಸುಭದ್ರ ಸಮಾಜ ಸೃಷ್ಟಿಸುವ ಕಡೆ ಗಮನಕೊಡುವುದರಲ್ಲಿ ನಿರಾಸಕ್ತಿ ತೋರುತ್ತಿರುವುದೇಕೆ?

8. ಸುಮರು 50 ವರ್ಷಗಳಿಂದಿತ್ತೀಚೆಗೆ ಲಿಂಗಾಯತ ಧರ್ಮಾನುಯಾಯಿಗಳಲ್ಲಿ ಕೆಲವರು ಅಧಿಕಾರ ಹಿಡಿಯುವ ದುರಾಶೆಯ ಫಲವಾಗಿ, ಲಿಂಗಾಯತ ಜಾತಿ-ಒಳಜಾತಿಗಳಾಗಿ ಛಿದ್ರವಾಗುತ್ತಿದ್ದಾರೆ ಎನ್ನುತ್ತಾ, ರಾಜಕೀಯ ನಾಯಕತ್ವ ಪಡೆಯುವ ಕಾರಣಕ್ಕಾಗಿ ಸಾರ್ವಜನಿಕ ವೇದಿಕೆಯಲ್ಲಿ ನಾವೆಲ್ಲಾ ಒಂದು ಎಂದು ಹೇಳುತ್ತಲೇ, ವಾಸ್ತವವಾಗಿ ಜಾತಿ ಒಳಜಾತಿಗಳನ್ನು ಮಿಸುಕಿ, ಬೆನ್ನು ತಟ್ಟಿ ಬೆಳೆಸುತ್ತಿರುವುದು. ಇದಕ್ಕೆ ಮಠಮಾನ್ಯಗಳೂ ಬಲಿಯಾಗಿರುವುದು ಶರಣ ಧರ್ಮದ ದುರಂತವಲ್ಲವೇ?

9. ಕರ್ನಾಟಕದಲ್ಲಿರುವ ಸುಮಾರು ಒಂದೂವರೆ ಕೋಟಿ ಲಿಂಗವಂತರನ್ನು ತೋರಿಸುತ್ತಾ ಆಯಕಟ್ಟಿನ ಅಧಿಕಾರ ಹಿಡಿಯುತ್ತಿರುವ ರಾಜಕಾರಣಿಗಳು, ಉನ್ನತಾಧಿಕಾರಿಗಳು. ಕನಿಷ್ಠ ಬದುಕಿಗೆ ಬೇಕಾದ ಸೌಲಭ್ಯವೂ ಇಲ್ಲದೆ ಅನ್ಯರ ಕಾಲಿನ ಕಸವಾಗಿ ಪರಿತಪಿಸುತ್ತಾ, ಲಿಂಗವಂತರ ಮಕ್ಕಳಾಗಿ ಹುಟ್ಟಿದ್ದೇ ಪಾಪ, ಶಾಪ ಎಂದು ನಿಟ್ಟುಸಿರು ಬಿಡುತ್ತಾ ನರಳುತ್ತಿರುವ ನಿರುದ್ಯೋಗಿ ಯುವಕರ ಗೋಳನ್ನು ಕೇಳುತ್ತಿದ್ದಾರೆಯೇ?

10. ಮುಂದಿನ ಶತಮಾನದಲ್ಲಿ ಇತಿಹಾಸಕಾರರು ಲಿಂಗಾಯತ ಇತಿಹಾಸ ಬರೆಯುವಾಗ ಅತ್ಯುತ್ತಮ ನಿತ್ಯನೂತನ ಚಿಂತನೆಗಳನ್ನೊಳಗೊಂಡ ಜೀವಪರವಾದ ಲಿಂಗಾಯತ ಧರ್ಮ ಇಪ್ಪತ್ತನೇ ಶತಮಾನದಲ್ಲಿ ದುರ್ಬಲ, ಸಮಯಸಾಧಕ ಅನುಯಾಯಿಗಳ ಕಾರಣದಿಂದಾಗಿ, ಜಡವಾಗಿ ಕಾಲಗರ್ಭ ಸೇರಿತು ಎಂದು ಬರೆದರೆ ಆಶ್ಚರ್ಯಪಡಬೇಕಾಗಿಲ್ಲ ಅಲ್ಲವೆ?

**ಕೆ.ಆರ್. ಬಸವರಾಜು**
ತಿಪಟೂರು

# ಶಿವಾರಪಟ್ಟಣದ ನೊಳಂಬರ ಅಪ್ರಕಟಿತ ಶಾಸನ

'ಶಿವಾರಪಟ್ಟಣ'ವು ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಪ್ರಾಚೀನ ಗ್ರಾಮ. ಶಿವಾರಪಟ್ಟಣ ಗ್ರಾಮಕ್ಕೆ ಐತಿಹಾಸಿಕ ಮಹತ್ವದ ಜೊತೆಗೆ ಸಾಂಸ್ಕೃತಿಕ ಮಹತ್ವವೂ ಇದೆ. ಶಿವಾರಪಟ್ಟಣವು ಮೊದಲಿಗೆ ಇದೇ ಕೋಲಾರ ಜಿಲ್ಲೆ ಮತ್ತು ತಾಲ್ಲೂಕಿನ ನರಸಾಪುರ ಹೋಬಳಿಗೆ ಸೇರಿದ್ದು, ನಂತರ ಮಾಲೂರು ತಾಲ್ಲೂಕಿಗೆ ಸೇರಿದೆ. ಶಿವಾರಪಟ್ಟಣವು ಪಾರಂಪರಿಕವಾಗಿ ದೇವರ ಶಿಲ್ಪ ಮೂರ್ತಿಗಳ ಕೆತ್ತನೆಗೆ ಹೆಸರುವಾಸಿಯಾಗಿದ್ದು ಭಾರತದಲ್ಲಿ ಮಾತ್ರವಲ್ಲದೆ ಹೊರ ದೇಶಗಳಲ್ಲೂ ಇಲ್ಲಿನ ಮೂರ್ತಿ ಶಿಲ್ಪಗಳಿಗೆ ಬೇಡಿಕೆ ಇದೆ. ಯಾವುದೇ ಜಾತಿ ಜನಾಂಗದ ತಾರತಮ್ಯವಿಲ್ಲದೆ ಎಲ್ಲರೂ ಶಿಲ್ಪ ಕೆತ್ತನೆಯಲ್ಲಿ ನಿಪುಣತೆಯನ್ನು ಸಾಧಿಸಿರುವುದನ್ನು ಇಲ್ಲಿರುವ ಕುಶಲಕರ್ಮಿಗಳನ್ನು ನೋಡಿದರೆ ಗೊತ್ತಾಗುತ್ತದೆ. 'ವಿಶ್ವಕರ್ಮ' ಕೆಲಸವನ್ನೇ ನಂಬಿ ಬದುಕುತ್ತಿರುವ ಇಲ್ಲಿನ ಜನ ತಮ್ಮ ಕೆಲಸವನ್ನು ಶ್ರದ್ಧಾಭಕ್ತಗಳಿಂದ ಮಾಡುತ್ತಾರೆ.

ಶಿಲ್ಪಿಗಳ ತವರೂರು ಎಂದೇ ಹೇಳಬಹುದಾದ ಶಿವಾರ ಪಟ್ಟಣವು ಗಂಗರ ಕಾಲದ ಪ್ರಾಚೀನ ಶಿವಾಲಯವನ್ನು ಹೊಂದಿದೆ. ಶಿವಾರಪಟ್ಟಣದ ಹಲವಾರು ಶಾಸನಗಳು ಎಪಿಗ್ರಾಫಿಯಾ ಸಂಪುಟಗಳಾದ 10 ಮತ್ತು 17, ಇತಿಹಾಸ ದರ್ಶನ ಸಂಪುಟಗಳು, ಇಂಡಿಯನ್ ಆಂಟಿಕ್ವೆರಿ ಹಾಗೂ ಮೈಸೂರು ಆರ್ಕಿಯಾಲಜಿ ರಿಪೋರ್ಟ್ (ಎಂ.ಎ.ಆರ್.) ಗಳಲ್ಲಿ ದಾಖಲಾಗಿದೆ. ಇದೀಗ ಗ್ರಾಮದಲ್ಲಿನ ಆಂಜನೇಯ ದೇವಾಲಯದ ಆವರಣದಲ್ಲಿ ಹೊಸ ಕನ್ನಡ ಶಾಸನವೊಂದು ಲಭ್ಯವಾಗಿದೆ. ಶಿವಾರದಲ್ಲಿ ಈಗಾಗಲೇ ಸುಮಾರು 09ನೇ ಶತಮಾನದಿಂದ 17ನೇ ಶತಮಾನ ದವರೆಗೂ 14 ಶಾಸನಗಳು ದಾಖಲಾಗಿದ್ದು ಇವುಗಳಲ್ಲಿ ಸುಮಾರು ಇಪ್ಪತ್ತು ರ್ಷಗಳ ಅಂತರದಲ್ಲಿ ನೊಳಂಬರ ಎರಡು ಶಾಸನಗಳು ಸೇರಿವೆ. ಬಹುತೇಕ ವೀರಗಲ್ಲು ಶಾಸನಗಳಾಗಿದ್ದು ಒಂದು ಊರಳಿವು ಶಾಸನವೂ ಇದೆ. ಒಟ್ಟು ಶಾಸನಗಳಲ್ಲಿ ಎರಡು ತಮಿಳು ಶಾಸನಗಳು ಇದ್ದು ಉಳಿದವರೆಲ್ಲವೂ ಕನ್ನಡ ಶಾಸನಗಳೇ ಆಗಿದೆ.

**ಶಾಸನ ಪಾಠ**

1. ಸ್ವಸ್ತಿ ಶ್ರೀ ಸಕ ವರಿಷ ಎಣ್ಬ ನೂ ಱ ಎ
2. ಟ್ಟಿತ್ತ ನಾಲ್ಕನೆಯ ವರಿಷ ಪ್ರವತ್ತಿಸು
3. ತ್ತಿರೆ ದಿಲೀ[ಪ]ಯ್ಯ ಇಱಿವ ನೊಟಂಬ
4. ಪೃಥುವೀರಾಜ್ಯಂಗೆಯುತ್ತಿರೆ ಸಿರಿಮಣ್ತಿ

೪ ಪೃಥುವೀರಾಜ್ಯಂಗೆಯುತ್ತಿರೆ ಸಿರಿಮಣ್ತಿ
೫ ಮಂಗಲದ ಮಹಾಜನ ಅರುಲುವಯ್ಯ
೬ .......... ಕೊಟ್ಟಸ್ತಿತಿ ಎನ್ತೆನ್ದೊಡೆ
೭ ................ನ್ದೊಟಿ
೮ ...........ಗಟಿಗೆ ಸಲ್ವುದು ನಿಚ್ಚ ಒಬ್ಬ ಬ್ರಾಹ್ಮ
೯ .....ಣ.....ಪರಿವದಿ ಸಲ್ವುದು
೧೦ ..................ಇದನಟಿದೊ
೧೧. ವಾ.......ವ..

ಸಾರಾಂಶ

ಶಾಸನವು ಒಟ್ಟು ಹನ್ನೊಂದು ಸಾಲುಗಳನ್ನು ಹೊಂದಿದ್ದು ಇದನ್ನು ಪ್ರತಿ ಐದು ಸಾಲುಗಳಂತೆ ಎರಡು ಭಾಗವಾಗಿ ವಿಂಗಡಿಸಿಕೊಂಡರೆ ಮೊದಲ ಭಾಗದ ಐದು ಸಾಲುಗಳ ಸಂಪೂರ್ಣ ಪಾಠ ಸಿಕ್ಕದ್ದು ನಂತರ ಭಾಗದ ಆರು ಸಾಲುಗಳ ಪಾಠದಲ್ಲಿ ಅಸ್ಪಷ್ಟತೆಯಿಂದ ಪಾಠ ಸಿದ್ಧತೆಗೆ ತೊಡಕುಂಟಾಗಿದೆ. "ಸ್ವಸ್ತಿಶ್ರೀ ಶಕವರಿಷ ೮೬೪ನೆಯ ವರ್ಷದಲ್ಲಿ ದಿಲೀಪಯ್ಯ ಇರಿವ ನೊಳಂಬ ಪೃಥ್ವೀ ರಾಜ್ಯವಾಳುತ್ತಿರಲು ಸಿರಿಮಣ್ತಿ ಮಂಗಲದ ಮಹಾಜನ ಅರುಬವಯ್ಯ ಎಂಬುವನಿಂದ ನಿತ್ಯ ಒಬ್ಬ ಬ್ರಾಹ್ಮಣನಿಗೆ ದಾನ ನೀಡುವುದು ಇದನ್ನು ಆಳಿದವನಿಗೆ ಪಾಪ ಉಂಟಾಗಲಿ. ಕೊನೆಯಲ್ಲಿ ಕಲ್ಲಿನ ಬದಿಗಳು ಹೊಡೆದಿರುವುದರಿಂದ ಅದನ್ನು ಹೀಗೆ ಅರ್ಥೈಸಬಹುದಾಗಿದೆ. 'ವಾರಣಾಸಿಯುನಳಿದೊ' (ಕಾಣಿಸುತ್ತಿರುವ ಅಕ್ಷರಗಳ ಹಿನ್ನೆಲೆಯಲ್ಲಿ ದಿಲೀಪನ ಹಲವು ಶಾಸನಗಳಲ್ಲಿ ಸಾಮಾನ್ಯವಾಗಿ ಬಳಕೆಯಾಗಿರುವ ಶಾಪಾಶಯ ಎಂದು ಊಹಿಸಬಹುದಾಗಿದೆ.) ಬೀರ ನೊಳಂಬನ ಶಾಸನದಲ್ಲಿ ಇಬ್ಬರು ಬ್ರಾಹ್ಮಣರಿಗೆ ಗದ್ಯಾಣ ದಾನ ನೀಡುವುದನ್ನು ಉಲ್ಲೇಖಿಸುತ್ತದೆ. ಪ್ರಸ್ತುತ ದೊರೆತಿರುವ ದಿಲೀಪನಿಗೆ ಸಂಬಂಧಿಸಿದ ಹೊಸ ಶಾಸನವು ಪರಿವದಿ (ಅಂದರೆ ಊಟ ಹಾಕುವಂತ ಪದ್ಧತಿ ಎಂದು ಅರ್ಥೈಸ ಬಹುದು.) ದಾನದ ಮಾಹಿತಿ ನೀಡುತ್ತದೆ.

ನೊಳಂಬರ ದಿಲೀಪನಿಗೆ ಸಂಬಂಧಿಸಿದ ಈ ಶಾಸನವು ಕ್ರಿ.ಶ. ೯೫೨ಕ್ಕೆ ಸೇರಿದ್ದಾಗಿದೆ. ಈ ಶಾಸನವು ಮೊದಲಿಗೆ ಆಂಜನೇಯಸ್ವಾಮಿ ದೇವಾಲಯದ ಪಕ್ಕದಲ್ಲಿ ರುವ ಗ್ರಾಮಸ್ಥರ ಹೊಲದಲ್ಲಿದ್ದು ಅದನ್ನು ಈ ದೇವಾಲಯದ ಆವರಣಕ್ಕೆ ಸ್ಥಳಾಂತರಿಸಲಾಗಿದೆ. ಇದೇ ಆಂಜನೇಯ ದೇವಾಲಯದ ಬಳಿ ಇರುವ ಬೀರನೊಳಂಬನಿಗೆ ಸಂಬಂಧಿಸಿದ ಶಾಸನವೊಂದು ಬಿ.ಎಲ್. ರೈಸ್‌ರವರ ಶಾಸನ ಸಂಪುಟ ೧೦ರಲ್ಲಿ ದಾಖಲಾಗಿದ್ದು, ಕ್ರಿ.ಶ. ೯೨೫ಕ್ಕೆ ಸೇರಿದ್ದಾಗಿರಬಹುದೆಂದು ಹೇಳಲಾಗಿದೆ. ಕಾಲದ ಉಲ್ಲೇಖ ಇಲ್ಲವಾದರೂ ಇದನ್ನು ಶಕ ೯೩೦ರವರೆಗೂ ಬೀರ ನೊಳಂಬನ ತಂದೆ ಅಯ್ಯಪ್ಪದೇವ ಆಳುತ್ತಿದ್ದ ದಾಖಲೆಗಳು

ಸಿಗುತ್ತವೆ. ಹಾಗಾಗಿ ಬೀರನೊಳಂಬನ ಶಾಸನವನ್ನು ಸು. ಶಕ ೯೩೧ ಅಥವಾ ನಂತರದ್ದೆಂದು ತೆಗೆದುಕೊಳ್ಳಬಹುದು. ಇದೇ ಬೀರನೊಳಂಬ ಚಿಂತಾಮಣಿ ತಾಲ್ಲೂಕಿನ ಕುರುಬೂರಿನಲ್ಲಿ ಶಕವರ್ಷ ೮೫೩ರಲ್ಲಿ ಅಂದರೆ ಕ್ರಿ.ಶ. ೯೩೧ರಲ್ಲಿ ಶಾಸನ ಹಾಕಿಸಿದ್ದಾನೆ. ಶಾಸನದಲ್ಲಿ ಬ್ರಾಹ್ಮಣರಿಗೆ (ಊಟ)ದ ದಾನಕ್ಕೆ ಗದ್ಯಾಣ (ಹೊನ್ನು) ನೀಡುವಂತೆ ಹೇಳಲಾಗಿದೆ. ಈ ಶಾಸನವನ್ನು 'ಕಬ್ಬದ ನಾಗಮಯ್ಯ' ಬರೆದಿದ್ದಾನೆ.

ಪ್ರಸ್ತುತ ದೊರೆತಿರುವ ಶಾಶನದಲ್ಲಿ ಕಾಲದ ಉಲ್ಲೇಖವಿದ್ದು, 'ಶಕವರ್ಷ ಎಂಟುನೂರ ಎಪ್ಪತ್ತ ನಾಲ್ಕು' ಎಂದು ಹೇಳಲಾಗಿದೆ. ಇದು ಕ್ರಿ.ಶ. ೯೫೨ಕ್ಕೆ ಸೇರಿದ್ದೆಂಬುದು ಸ್ಪಷ್ಟವಾಗಿ ತಿಳಿದುಬರುತ್ತಿದೆ. ಶಾಸನವು ದಿಲೀಪನನ್ನು ಪ್ರಸ್ತಾಪಿಸಿರುವುದರಿಂದ ವೀರನೊಳಂಬನ ಆಡಳಿತ ಅಂತ್ಯವಾಗಿ ಇರಿವನೊಳಂಬ ದಿಲೀಪನ ಪೃಥ್ವೀರಾಜ್ಯವನ್ನು ಆಳುತ್ತಿರುತ್ತಾನೆ.

ಬೀರನೊಳಂಬ ಹಾಗೂ ಇರಿವ ನೊಳಂಬನ ಎರಡೂ ಶಾಸನಗಳಲ್ಲಿ 'ಶ್ರೀಮೆಣ್ಡಿಮಂಗಲದ ಮಹಾಜನ–ಸಿರಿಮೆಣ್ತೆ ಮಂಗಲದ ಮಹಾಜನ' ಎಂದು ಉಲ್ಲೇಖಿಸಿರುವುದು ಇಂದಿನ ಶಿವಾರಪಟ್ಟಣವೇ ಆಗಿದ್ದು, ಇದರ ಪ್ರಾಚೀನ ಹೆಸರಿನ ಮೇಲೆ ಬೆಳಕು ಚೆಲ್ಲುತ್ತಿದೆ. ಮಹಾಜನರು ಎಂಬುದು 'ಬ್ರಾಹ್ಮಣರನ್ನು' ಗುರ್ತಿಸುವ ಪದವಾದರೆ 'ಮಂಗಲ' ಎಂಬುದಕ್ಕೆ ಅಗ್ರಹಾರ ಎನ್ನಬಹುದು. ಹೊಸದಾಗಿ ಸಿಕ್ಕಿರುವ ಶಾಸನದಲ್ಲಿ ಒಬ್ಬ ಬ್ರಾಹ್ಮಣನಿಗೆ ಪ್ರತಿನಿತ್ಯ ಪರವದಿ/ಪರಿವಾಣ(ಹರಿವಾಣ?) ಸಲ್ಲುವುದೆಂದು ಶಾಸನವು ತಿಳಿಸುತ್ತದೆ. ಹಾಗೂ ಆಂಜನೇಯ ದೇವಾಲಯದಲ್ಲಿ ಈ ಮೊದಲೇ ಸಿಕ್ಕಿರುವ ಬೀರನೊಳಂಬನ ಶಾಸನವೂ ಬ್ರಾಹ್ಮಣರಿಗೆ ದಾನ ನೀಡಿರುವುದನ್ನು ಕುರಿತು ತಿಳಿಸುತ್ತದೆ.

ಬಹುಶಃ ಅನಂತರ ಶಿವಾರದಲ್ಲಿ ನಿರ್ಮಾಣವಾಗಿರುವ 'ಶಿವ ದೇವಾಲಯ'ದ ಕಾರಣದಿಂದಾಗಿ ಇದಕ್ಕೆ 'ಶಿವಾರ' ಎಂಬ ನಾಮ ಬಂದಿರಬಹುದೆಂದೂ ಊಹಿಸಬಹುದಾಗಿದೆ. ಆದರೆ ಯಾವ ಕಾಲಘಟ್ಟದಲ್ಲಿ ಶ್ರೀಮೆಣ್ತೆ ಮಂಗಲ – ಸಿರಿಮೆಣ್ತೆ ಮಂಗಲ – ಶಿವಾರಪಟ್ಟಣ ಆಯಿತು ಎಂದು ಹೇಳಲು ಯಾವುದೇ ಆಧಾರಗಳು ಇಲ್ಲ.

ಗಂಗರ ಶಿವಮಾರ (ಕ್ರಿ.ಶ. ೬೭೯–೭೨೫) ನಿಂದ ಅಥವಾ ಇವನ ಮೊಮ್ಮಗನಾದ ಶ್ರೀಪುರುಷ (ಕ್ರಿ.ಶ. ೭೨೫–೭೮೮) ನಿಂದ ಗ್ರಾಮದ ನಿರ್ಮಾಣ ಆಗಿರಬಹುದು. ಶ್ರೀಪುರುಷನ ಕಾಲದಲ್ಲಿ ಇವನ ಆಳ್ವಿಕೆಯಲ್ಲಿದ್ದ ರಾಜ್ಯಕ್ಕೆ ಶ್ರೀರಾಜ್ಯ ಎಂಬ ಅನ್ವರ್ಥವಿದ್ದಿದ್ದು ಶಾಸನಗಳಿಂದ ತಿಳಿಯುತ್ತದೆ. ಗ್ರಾಮವನ್ನು ನಿರ್ಮಾಣ ಮಾಡಿರಬಹುದೆಂದು ಊಹಿಸಬಹುದಾಗಿದೆ. ಶಿವಮಾರ ಅಥವಾ ಶ್ರೀಪುರುಷನ ಕಾರಣದಿಂದಾಗಿಯೂ ಇವರ ಹೆಸರುಗಳೇ ಗ್ರಾಮಕ್ಕೂ ಅನ್ವರ್ಥವಾಗಿ ಬಂದಿರುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ.

ಮುಳಬಾಗಿಲು ತಾಲ್ಲೂಕಿನ ೨೭ ಸಂಖ್ಯೆಯ ವೀರಗಲ್ಲು ಶಾಸನವನ್ನು ಗಮನಿಸಿದಾಗ ಶಾಸನದಲ್ಲಿ 'ಮಣಿಘಟ್ಟಯ ಮಾಣಿಕಾ ಮೆಣ್ಡಿ ಮುದುಳ ಗಾಮುಣ್ಡ' ಎಂಬ ವ್ಯಕ್ತಿಯ ಹೆಸರು ಉಲ್ಲೇಖಗೊಳ್ಳುತ್ತದೆ. ಈ ಶಾಸನವು ಬಾಣರಸರಿಗೆ ಸಂಬಂಧಿಸಿದ್ದಾಗಿದ್ದು ಕಾಲ ಶಕ ಕಾಲಾತೀತ ಸಂವತ್ಸರದ ೮೩೧ (ಕ್ರಿ.ಶ. ೯೦೯) ಕ್ಕೆ ಸೇರಿದೆ. 'ಮೆಣ್ಡಿ' ಎನ್ನುವ ನಾಮಪದ ಅಂದು ಬಳಕೆಯಲ್ಲಿತ್ತು ಎನ್ನುವುದನ್ನು ಇದು ಸೂಚಿಸುತ್ತದೆ.

**ಲಿಪಿಕಾರ :** ಕೋಲಾರ ಜಿಲ್ಲೆಯ ಹಲವಾರು ಶಾಸನಗಳಲ್ಲಿ 'ಲಿಪಿಕಾರ ಕಬ್ಬದ ನಾಗಮಯ್ಯ' ಹೆಸರನ್ನು ಕಾಣಬಹುದು. ಈತ ನೊಳಂಬರ ಕಾಲಕ್ಕೆ ಸೇರಿದ ಪ್ರಸಿದ್ಧ ಲಿಪಿಕಾರ ಆಗಿದ್ದಾನೆ.

ಹೊಸದಾಗಿ ಬೆಳಕಿಗೆ ಬಂದಿರುವ ಈ ಶಾಸನವು ಸ್ಥಳನಾಮದ ಕುರಿತಾಗಿ ಹೊಸ ಚಿಂತನೆಗೆ ದಾರಿ ಮಾಡಿಕೊಟ್ಟಿದೆ. ಈ ಕುರಿತಾಗಿ ವಿದ್ವಾಂಸರು, ಸಂಶೋಧಕರು ಹೆಚ್ಚಿನ ಅಧ್ಯಯನ ಕೈಗೊಳ್ಳುವಂತಾಗಲಿ.*

* ಮಾರ್ಗದರ್ಶನ ನೀಡಿದ ಪ್ರೊ. ಕೆ.ಆರ್. ನರಸಿಂಹನ್, ಸಂಶೋಧಕರು, ನಿವೃತ್ತ ಜಂಟಿ ನಿರ್ದೇಶಕರು, ಕಾ.ಶಿ. ಇಲಾಖೆ, ಸಹಕಾರ ನೀಡಿದ ಡಾ. ಆರ್. ಯುವರಾಜು, ಯುವ ಸಂಶೋಧಕ, ಕೆ. ಧನಪಾಲ್, ಸಂಶೋಧಕರು, ನಿವೃತ್ತ ಬಿ.ಎಂ.ಟಿ.ಸಿ ಚಾಲಕರು ಇವರೆಲ್ಲರಿಗು ಕೃತಜ್ಞತೆಗಳು.

**ಆಕರ ಗ್ರಂಥಗಳು**

೧. ಎಪಿಗ್ರಾಫಿಯಾ ಕರ್ನಾಟಕ ಸಂಪುಟ ೧೦, ಕೋಲಾರ ಡಿಸ್ಟ್ರಿಕ್ಟಿನಲ್ಲಿರುವ ಶಾಸನಗಳು (೨ನ ಸಂಚಿಕೆ) ಕನ್ನಡ ಮತ್ತು ಅರವ ಪ್ರತಿ. ಬಿ. ಲೂಯಿಸ್ ರೈಸ್–೧೯೦೫.

೨. ಎಪಿಗ್ರಾಫಿಯಾ ಕರ್ನಾಟಕ ಸಂಪುಟ ೧೬, ಸಪ್ಲಿಮೆಂಟರಿ ಇನ್ಸ್ಕ್ರಿಪ್ಷನ್, ಕೋಲಾರ ಜಿಲ್ಲೆ, ಡಾ. ಎಂ. ಶೇಷಾದ್ರಿ, ೧೯೬೫.

೩. ನೊಳಂಬರ ಶಾಸನಗಳು, ಪರಮಶಿವಮೂರ್ತಿ ಡಿ.ವಿ

೪. ಮೈಸೂರು ಆರ್ಕಿಯಾಲಜಿ ರಿಪೋರ್ಟ್ಸ್‌ಗಳು ೧೯೨೩–೧೯೪೫.

೫. ಹೆಚ್ಚಿನ ಮಾಹಿತಿಗಾಗಿ ಎ.ಕ.ಶಾ. ಸಂಪುಟ ೧೦ ಕೋ.ತಾ. ಶಾಸನ ಸಂಖ್ಯೆ ೦೬ ರಿಂದ ೦೯, ಮಾ.ತಾ. ೯೪ ರಿಂದ ೯೬, ಮು.ತಾ. ಶಾ.ಸಂ. ೨೯, ಚಿಂ.ತಾ.ಶಾ.ಸಂ. ೪೩ ರಿಂದ ೪೬

**ವಿಜಯಕುಮಾರ್ .ಎಸ್**
ಕನ್ನಡ ಉಪನ್ಯಾಸಕರು
ಸರ್ಕಾರಿ ಮಹಿಳಾ ಕಾಲೇಜು,
ಚಿಂತಾಮಣಿ, ಚಿಕ್ಕಬಳ್ಳಾಪುರ ಜಿಲ್ಲೆ.
ಮೊ : 9066622236

# ನೊಳಂಬ ದೇವಾಲಯಗಳು

## ಬರಗೂರು ಮಹೇಂದ್ರೇಶ್ವರ ದೇವಾಲಯ

ಸಿರಾದಿಂದ ಸುಮಾರು ೨೨೫ ಕಿ.ಮೀ ದೂರದಲ್ಲಿಯೂ ಹೇಮಾವತಿಯಿಂದ ಸುಮಾರು ಹದಿನೈದು ಕಿ.ಮೀ ದೂರದಲ್ಲಿರುವ ಬರಗೂರು ನೊಳಂಬ ಅರಸರ ಅರಮನೆಯುನ್ನು ಹೊಂದಿದ್ದ ಪ್ರದೇಶವಾಗಿತ್ತು. ಬಾಣರಾಜರನ್ನು ಗೆದ್ದ ಸಂತೋಷಕ್ಕಾಗಿ ನೊಳಂಬ ದೊರೆ ಮಹೇಂದ್ರನು ಬರಗೂರಿನಲ್ಲಿ ಕ್ರಿ.ಶ. ೮೭೮ರಲ್ಲಿ ಮಹೇಂದ್ರೇಶ್ವರ ದೇವಾಲಯುವನ್ನು ನಿರ್ಮಿಸಿದನು. ನೊಳಂಬ ದೊರೆಯಿಂದ ನಿರ್ಮಾಣವಾದ ಸ್ಪಷ್ಟವಾದ ಉಲ್ಲೇಖವನ್ನು ಒದಗಿಸುವ ದೇಗುಲ ನಿರ್ಮಾಣ ಹಾಗೂ ನಿರ್ವಹಣೆಯ ವಿಷಯಗಳನ್ನು ಹೊಂದಿರುವ ನೊಳಂಬರ ಶಾಸನವನ್ನು ಈ ದೇವಾಲಯವು ಹೊಂದಿರುವುದು ವಿಶೇಷವಾದ ಸಂಗತಿಯಾಗಿದೆ. ಮಹೇಂದ್ರನು ಬರಗೂರಿನಲ್ಲಿ ಬೀಡುಬಿಟ್ಟಿದ್ದುದಕ್ಕೆ ಶಾಸನಾಧಾರಗಳಿವೆ. ಬರಗೂರಿನ ಮಹೇಂದ್ರೇಶ್ವರ ದೇವಾಲಯದ ಸ್ಥಾನಿಕನಾಗಿ ಪಾಶುಪತ ಪಂಥದ ಗುರುವಾಗಿದ್ದ ದಿನಕರ ಸೋಮ ಭಟಾರನು ಕಾರ್ಯನಿರ್ವಹಿಸುತ್ತಿದ್ದನು. ಇವನ ನಿರ್ವಹಣೆಯಲ್ಲಿದ್ದ ಮಹೇಂದ್ರೇಶ್ವರ ದೇವಾಲಯುದ ನಿರ್ವಹಣೆಗೆ ಮಹೇಂದ್ರರಾಜನು ದಾನಗಳನ್ನು ಕೂಡ ನೀಡಿದ್ದಾನೆ. ಕ್ರಿ.ಶ. ೯೨೦ರಲ್ಲಿ ಈ ದೇವಾಲಯದ ನಿರ್ವಹಣೆಗೆಂದು ಮಹೇಂದ್ರನ ಮಗನಾದ ಅಯ್ಯಪ್ಪದೇವನು ತನ್ನ ಪತ್ನಿಯರಾದ ನಾಗಿಯಬ್ಬೆ ಮತ್ತು ಹಳೆಯಬ್ಬೆಯರ ಸ್ಮರಣಾರ್ಥವಾಗಿ ಕೆಲವು ದಾನಗಳನ್ನು ನೀಡಿದನು. ಆಗ ಈ ದೇವಾಲಯದ ಸ್ಥಾನಿಕನಾಗಿದ್ದವನು ವಿಮಲಮತಿ ಭಟಾರ. ಈ ಬರಗೂರಿನಲ್ಲಿ ಇನ್ನೊಂದು ದೇವಾಲಯವಿದ್ದು ಅದನ್ನು ಮೂಲಸ್ಥಾನ ದೇವಾಲಯುವೆಂದು ಕರೆಯಲಾಗುತ್ತಿತ್ತು. ಬಹುಶಃ ಈ ಕಾಲಕ್ಕೆ ನೊಳಂಬರ ರಾಜಧಾನಿಯಾದ ಹೇಮಾವತಿಯಲ್ಲಿದ್ದ ಪಂಚಮಠಗಳು ಸುತ್ತಮುತ್ತಲ ದೇವಾಲಯಗಳ ನಿರ್ವಹಣೆಯ ಜವಾಬ್ದಾರಿಯನ್ನು ಹೊಂದಿತ್ತು ಎಂದು ತಿಳಿಯಬಹುದಾಗಿದೆ. ಬರಗೂರಿನಲ್ಲಿ ನೀಡಿದ ದಾನಗಳ ವಿಷಯದಲ್ಲಿ ಈ ಪಂಚಮಠಗಳ ಪಾತ್ರವೂ ಹಿರಿದಾದುದಾಗಿದೆ.

ಇತ್ತೀಚಿನವರೆಗೆ ಹಲವು ಬಾರಿ ಜೀರ್ಣೋದ್ಧಾರಕ್ಕೆ ಒಳಗಾಗಿರುವ ಈ ದೇವಾಲಯವು ತನ್ನ ಮೂಲಸ್ವರೂಪವನ್ನು ಹಲವಾರು ಬಾರಿ ಮಾರ್ಪಡಿಸಿಕೊಂಡಿರುವ ಕುರುಹುಗಳಿವೆ. ಇನ್ನೊಂದು ಊಹೆಯನ್ನು ಮಾಡಬಹುದಾದರೆ ಬರಗೂರಿನಲ್ಲಿ ಎರಡು ದೇವಾಲಯಗಳನ್ನು ನೊಳಂಬರು ನಿರ್ಮಿಸಿದಂತೆ ತೋರುತ್ತದೆ. ಅಯ್ಯಪ್ಪದೇವನ ಶಾಸನವೊಂದು ತಿಳಿಸುವ ಹಾಗೆ ಬರಗೂರಿನಲ್ಲಿ ಮೂಲಸ್ಥಾನೇಶ್ವರ ಮತ್ತು ಮಹೇಂದ್ರೇಶ್ವರ ದೇವಾಲಯಗಳು ಅಸ್ತಿತ್ವದಲ್ಲಿದ್ದವು. ಬಹುಶಃ ವಿಜಯನಗರ ಮತ್ತು ನಂತರದ ಪಾಳೆಯಗಾರರ ಕಾಲದಲ್ಲಿ ಅವನತಿಯಾಗಿದ್ದ ಈ ಎರಡೂ ದೇವಾಲಯಗಳನ್ನು ಬಳಸಿಕೊಂಡು ಈ ಒಂದೇ ದೇವಾಲಯವನ್ನು ನಿರ್ಮಿಸಿರಬಹುದು ಎಂದೆನಿಸುತ್ತದೆ. ಹಾಗಾಗಿ ಈ ದೇವಾಲಯದ ವಿಸ್ತರಣೆಯನ್ನೂ ಕೂಡ ಗಮನಿಸಬೇಕಾಗುತ್ತದೆ.

ಪೂರ್ವಾಭಿಮುಖವಾಗಿರುವ ಈ ಮಹೇಂದ್ರೇಶ್ವರ ದೇವಾಲಯವು ಇಂದಿಗೆ ಗರ್ಭಗುಡಿ, ತೆರೆದ ಅಂತರಾಳ, ಗೂಢಮಂಟಪ, ಅಗ್ರಮಂಟಪ, ನಂದಿಮಂಟಪಗಳನ್ನು ಹೊಂದಿದೆ. ದೇವಾಲಯದ ಮೂಲಸ್ವರೂಪವು ಇಂದಿಗೆ ಹಾಳಾಗಿದ್ದು ಜೀರ್ಣೋದ್ಧಾರದ ನಂತರ ನಮಗೆ ಕಂಡುಬರುವ ಸ್ವರೂಪವನ್ನು ಈಗ ತಿಳಿಯಬಹುದಾಗಿದೆ. ಸಾಮಾನ್ಯವಾದ ಅಧಿಷ್ಠಾನದ ಮೇಲೆ ಸಂಪೂರ್ಣವಾಗಿ ಗಾರೆ ಮತ್ತು ಇಟ್ಟಿಗೆಗಳನ್ನು ಬಳಸಿ ಮಾಡಿರುವ ಭಿತ್ತಿಯಿದೆ. ದೇವಾಲಯದ ವಿಮಾನವು ಕೂಡ ಫಾಂಸನಾ ಮಾದರಿಯ ಗಾರೆಯ ಶಿಖರವನ್ನು ಹೊಂದಿದು ವಿಶೇಷವಾಗಿದೆ. ದೇವಾಲಯದ ಭಿತ್ತಿಯಲ್ಲಿ ನೊಳಂಬರ ಜಾಲವಾತಾಯನಗಳು ಇವೆ.



**ಸುಂಕಂ ಗೋವರ್ಧನ**
ಬೆಂಗಳೂರು
ಮೊ : 9535762464

**ಗರ್ಭಗುಡಿ :**

ಗರ್ಭಗುಡಿಯಲ್ಲಿ ನೊಳಂಬರ ಕಾಲದ ಮಹೇಂದ್ರೇಶ್ವರ ಲಿಂಗವಿದೆ. ಲಿಂಗವು ಮಧ್ಯಮಗಾತ್ರವನ್ನು ಹೊಂದಿದೆ. ಚೌಕಾಕಾರದ ಈ ಗರ್ಭಗುಡಿಯ ಬಾಗಿಲುವಾಡವು ಅತ್ಯಂತ ಸರಳವಾಗಿದ್ದು ಮೂರು ಶಾಖೆಗಳನ್ನು ಒಳಗೊಂಡಿದೆ. ಮೊದಲನೆಯುದು ಶಾಖೆಯು ಪದ್ಮಶಾಖೆಯಾಗಿದ್ದು ನಂತರದ ಎರಡನೆಯ ಶಾಖೆಯು

ಸ್ತಂಭಶಾಖೆಯಾಗಿದೆ. ಮತ್ತೆ ಮೂರನೆಯ ಶಾಖೆಯು ಕೂಡ ಪದ್ಮಶಾಖೆಯನ್ನು ಹೊಂದಿದೆ.

**ತೆರೆದ ಅಂತರಾಳ :**

ಮಹೇಂದ್ರೇಶ್ವರ ದೇವಾಲಯದ ಅಂತರಾಳವು ನೊಳಂಬರ ಬಹುತೇಕ ದೇವಾಲಯಗಳಂತೆ ತೆರೆದ ಅಂತರಾಳವಾಗಿದೆ. ಅಂತರಾಳದಲ್ಲಿ ಅಳವಡಿಸಲಾಗಿರುವ ಶ್ರೀಕಾರದ ಎರಡು ಕಂಬಗಳು ಮಿಶ್ರಮಾಧ್ಯಮವನ್ನು ಒಳಗೊಂಡಿರುವ ಕಂಬಗಳಾಗಿವೆ. ಸ್ವತಂತ್ರ ಕಂಬಗಳಾಗಿರುವ ಈ ಎರಡು ಕಂಬಗಳು ಗೂಢಮಂಟಪದ ಕಂಬಗಳಿಗಿಂತ ಎತ್ತರದಲ್ಲಿ ಸ್ವಲ್ಪ ಕುಳ್ಳಗಿವೆ. ಈ ಅಂತರಾಳದ ಕಂಬಗಳಲ್ಲಿರುವ ಶಿಲ್ಪಗಳು ಅತ್ಯಂತ ಸುಂದರವಾಗಿದ್ದು ಮೇಲಿನ ದಂಡಿನಲ್ಲಿ ಪೂರ್ಣಕುಂಭಗಳನ್ನು ಕೆತ್ತಲಾಗಿದ್ದು ಅದರ ಕೆಳಗಿರುವ ಪಟ್ಟಿಕೆಯಲ್ಲಿ ನೊಳಂಬರ ಅತ್ಯುತ್ತಮ ಮಾದರಿಯ ಶಿಲ್ಪಗಳನ್ನು ಕೆತ್ತಲಾಗಿದೆ. ಈ ಕಂಬಗಳಲ್ಲಿ ಶಂಖನಿಧಿ ಮತ್ತು ಪದ್ಮನಿಧಿಗಳನ್ನು ಕೆತ್ತಿರುವುದರ ಜೊತೆಗೆ ಕೈಗಳಲ್ಲಿ ಕಮಲಗಳನ್ನು ಹಿಡಿದಿರುವ ಗಂಧರ್ವ ಕನ್ಯೆಯರನ್ನೂ ಕೂಡ ಕೆತ್ತಲಾಗಿದೆ. ಗಂಧರ್ವ ದಂಪತಿಗಳನ್ನು ಕೂಡ ಇಲ್ಲಿ ಕೆತ್ತಲಾಗಿದೆ. ಇವುಗಳ ಮೇಲೆ ಕೀರ್ತಿಮುಖಗಳನ್ನು ಕೆತ್ತಲಾಗಿದೆ. ಹಾಗೂ ಕೀರ್ತಿಮುಖದಿಂದ ಇಳಿಬಿಟ್ಟಿರುವ ಹಾರಗಳಲ್ಲಿ ಶಿಲ್ಪಗಳನ್ನು ಕೆತ್ತಲಾಗಿದೆ. ಅಂತರಾಳದಲ್ಲಿ ಎರಡು ಶಿಲ್ಪಗಳಿವೆ. ಅದರಲ್ಲಿ ಭೈರವ ಮತ್ತು ಮಹಿಷಾಸುರ ಮರ್ದಿನಿಯ ಶಿಲ್ಪಗಳು ಬಹುಶಃ ನೊಳಂಬರ ಕಾಲದ ಶಿಲ್ಪಗಳಾಗಿವೆ.

**ಭೈರವ :**

ಸುಮಾರು ಮೂರು ಅಡಿ ಎತ್ತರದ ಭೈರವನು ಚತುರ್ಭುಜನಾಗಿದ್ದು ಹಿಂದಿನ ಎರಡು ಕೈಗಳಲ್ಲಿ ಢಮರುಗ ಮತ್ತು ತ್ರಿಶೂಲಗಳನ್ನು ಹಿಡಿದಿದ್ದಾನೆ. ಮುಂದಿನ ಪ್ರಧಾನವಾದ ಎರಡು ಕೈಗಳಲ್ಲಿ ಎಡಗೈಯಲ್ಲಿ ಬ್ರಹ್ಮ ಕಪಾಲವನ್ನು ಹಿಡಿದಿದ್ದರೆ ಬಲಗೈಯಲ್ಲಿ ಕತ್ತಿಯನ್ನು ಹಿಡಿದಿದ್ದಾನೆ. ಪ್ರಭಾವಳಿಯಂತಹ ಪಟ್ಟಿಕೆಯು ಇಕ್ಕೆಲಗಳಲ್ಲೂ ಇದ್ದು ಎಡಗಡೆಯಲ್ಲಿ ಸರ್ಪದ ಚಿತ್ರಣವಿದ್ದರೆ ಬಲಗಡೆಯಲ್ಲಿ ಬ್ರಹ್ಮಕಪಾಲವನ್ನು ತಿನ್ನಲು ಹಾರುತ್ತಿರುವ ನಾಯಿಯ ಚಿತ್ರಣವಿದೆ. ಭೈರವನು ನಗ್ನನಾಗಿದ್ದು ಅತ್ಯಂತ ದೊಡ್ಡದಾದ ಜನಿವಾರವನ್ನು ತೊಟ್ಟಿದ್ದಾನೆ.

**ಮಹಿಷಾಸುರ ಮರ್ದಿನಿ :**

ಮಹಿಷಾಸುರ ಮರ್ದಿನಿಯ ಶಿಲ್ಪವು ನೊಳಂಬರ ಕಾಲದ ಶಿಲ್ಪವಾಗಿದ್ದು ಈಕೆಯು ಚತುರ್ಭುಜೆಯಾಗಿದ್ದಾಳೆ. ಮೇಲಿನ ಕೈಗಳಲ್ಲಿ ಶಂಖ ಮತ್ತು ಚಕ್ರಗಳನ್ನು ಕೆತ್ತಲಾಗಿದ್ದು ಕೆಳಗಿನ ಕೈಗಳಲ್ಲಿ ಮಾನವರೂಪಿಯೂ ಮಹಿಷನ ಮುಖವನ್ನೂ ಹೊಂದಿರುವ ಮಹಿಷಾಸುರನನ್ನು ಒಂದು ಲಂಬವಾದ ಶೂಲದಿಂದ ಇರಿಯುತ್ತಿದ್ದಾಳೆ.

**ಗೂಢಮಂಟಪ :**

ಮಹೇಂದ್ರೇಶ್ವರ ದೇವಾಲಯದ ಗರ್ಭಗುಡಿ ಮತ್ತು ತೆರೆದ ಅಂತರಾಳದ ನಂತರ ಇರುವ ಭಾಗವೇ ಗೂಢಮಂಟಪ. ಈ ಗೂಢಮಂಟಪದಲ್ಲಿ ಶ್ರೀಕಾರದ ಕಂಬಗಳನ್ನು ಅಳವಡಿಸಲಾಗಿದೆ. ರುದ್ರಕಾಂತ ಮಾದರಿಯ ಈ ಕಂಬಗಳು ದೇವಾಲಯದ ಸೊಗಸನ್ನು ಇಮ್ಮಡಿಗೊಳಿಸಿದೆ. ಈ ಕಂಬಗಳು ನೊಳಂಬವಾಡಿಯ ಇನ್ನಿತರ ಕಂಬಗಳಂತೆ ಅತ್ಯಂತ ನುಣುಪಾಗಿರುವ ತಿರುಗಣಿ ಕಂಬಗಳಾಗಿದ್ದು ಅತ್ಯಂತ ಮೇಲುಮಟ್ಟದ ತಾಂತ್ರಿಕ ಕುಶಲತೆಯನ್ನು ಹೊಂದಿದೆ. ಗೋಡೆಗಳಿಗೆ ಅಳವಡಿಸಿರುವ ಕಂಬಗಳು ನೊಳಂಬರ ದೇವಾಲಯಗಳಲ್ಲಿ ಸಾಮಾನ್ಯವಾಗಿ ಕಂಡು ಬರುವ ಚತುರಶ್ರವಾದ ಕಂಬದ ಅರ್ಧಭಾಗವಾಗಿದೆ. ಇದರಲ್ಲಿ ಹೆಚ್ಚಿನ ಅಲಂಕರಣಗಣಗಳಾಗಲೀ ಕೆತ್ತನೆಗಳಾಗಲೀ ಕಂಡು ಬರುವುದಿಲ್ಲ. ಬದಲಿಗೆ ಅಲ್ಲಲ್ಲಿ ಕೀರ್ತಿಮುಖಗಳೋ ಅಥವಾ ಬಳ್ಳಿಗಳ ಅಲಂಕರಣವನ್ನೋ ಮಾಡಲಾಗಿರುತ್ತದೆ.

ಗೂಢಮಂಟಪದ ವಿತಾನವನ್ನು ಬಹುಶಃ ಅಷ್ಟದಿಕ್ಪಾಲಕರ ಶಿಲ್ಪಗಳನ್ನು ಕೆತ್ತುವ ಯೋಚನೆಯನ್ನು ಇಟ್ಟುಕೊಂಡಿದ್ದರೋ ಅಥವಾ ಅಂತಹ ಅಷ್ಟದಿಕ್ಪಾಲಕರ ಶಿಲ್ಪಗಳನ್ನು ಮಾಡಿದ್ದರೋ ಏನೋ ತಿಳಿಯದು. ಬಹುಶಃ ಜೀರ್ಣೋದ್ದಾರದ ಸಂದರ್ಭದಲ್ಲಿಈ ವಿತಾನವನ್ನು ಒಂಬತ್ತು ಪಟ್ಟಿಕೆಗಳಲ್ಲಿ ವಿಭಾಗಿಸಿರುವರಾದರೂ ಇಲ್ಲಿ ಶಿಲ್ಪಗಳನ್ನು ಕೆತ್ತುವುದರ ಬದಲಿಗೆ ನಡುಪಟ್ಟಿಕೆಯಲ್ಲಿ ಕಮಲದಳಗಳನ್ನು ಕೆತ್ತಲಾಗಿದೆ. ಉಳಿದಂತೆ ಇರುವ ಪಟ್ಟಿಕೆಗಳಲ್ಲಿ ಕಮಲಗಳನ್ನು ಪೂರ್ಣವಾಗಿ ಕೆತ್ತಿಲ್ಲ. ಮಧ್ಯದ ಪಟ್ಟಿಕೆಯ ಸುತ್ತಲೂ ನಾಲ್ಕು ಕಡೆ ಅಧೋಪದ್ಮಗಳನ್ನು ಕೆತ್ತಲಾಗಿದೆ.

ಗೂಢಮಂಟಪದ ಬಾಗಿಲುವಾಡವು ತ್ರಿಶಾಖೆಗಳನ್ನು ಹೊಂದಿದ್ದು ಮೊದಲನೆಯ ಶಾಖೆಯು ಪದ್ಮಶಾಖೆಯಾಗಿದ್ದು ನಂತರದ ಎರಡನೆಯ ಶಾಖೆಯು ಸ್ತಂಭಶಾಖೆಯಾಗಿದೆ. ಮತ್ತೆ ಮೂರನೆಯ ಶಾಖೆಯು ಕೂಡ ಪದ್ಮಶಾಖೆಯನ್ನು ಹೊಂದಿದೆ. ಈ ಗೂಢ ಮಂಟಪದಲ್ಲಿ ಇಂದ್ರಾಣಿ ಹಾಗೂ ವಿಷ್ಣುವಿನ ಶಿಲ್ಪಗಳನ್ನು ಇರಿಸಲಾಗಿದೆ.

**ಇಂದ್ರಾಣಿ :**

ಈ ಗೂಢಮಂಟಪದಲ್ಲಿ ಸಪ್ತಮಾತೃಕೆಯರ ಶಿಲ್ಪಗಳು ಈ ಹಿಂದೆ ಇದ್ದಿರಬಹುದು. ಅದರ ಕುರುಹಾಗಿ ಈಗ ಒಂದೇ ಒಂದು ಮಾತೃಕೆಯ ಶಿಲ್ಪವಿದೆ. ಇಲ್ಲಿರುವ ಮಾತೃಕೆಯ ಶಿಲ್ಪವು ಇಂದ್ರಾಣಿಯದ್ದಾಗಿದೆ. ಇಂದ್ರಾಣಿಯು ಚತುರ್ಭುಜೆಯಾಗಿದ್ದು ತನ್ನ ಹಿಂದಿನ ಎರಡು ಕೈಗಳಲ್ಲಿ ಶಂಖ ಮತ್ತು ಚಕ್ರಗಳನ್ನು ಹಿಡಿದಿದ್ದರೆ ಮುಂದಿನ ಪ್ರಧಾನವಾದ ಕೈಗಳಲ್ಲಿ ಒಂದುಕೈಯಲ್ಲಿ ಅಭಯವನ್ನು ಅನುಗ್ರಹಿಸಿದ್ದಾಳೆ.

**ವಿಷ್ಣು :**

ಇದರ ಜೊತೆಗೆ ಈ ಗೂಢಮಂಟಪದಲ್ಲಿ ಒಂದು ವಿಷ್ಣುವಿನ ಶಿಲ್ಪವಿದೆ. ಸಮಭಂಗದಲ್ಲಿ ನಿಂತಿರುವ ಸುಮಾರು ಮೂರು ಅಡಿಗಳ ವಿಷ್ಣುವಿನ ಶಿಲ್ಪವು ಚತುರ್ಭೂಜವಾಗಿದ್ದು ತನ್ನ ಹಿಂದಿನ ಎರಡು ಕೈಗಳಲ್ಲಿ ಶಂಖ ಮತ್ತು ಚಕ್ರಗಳನ್ನು ಹಿಡಿದಿದ್ದರೆ ಮುಂದಿನ ಪ್ರಧಾನವಾದ ಕೈಗಳಲ್ಲಿ ಒಂದು ಕೈಯಲ್ಲಿ ಪದ್ಮವನ್ನೂ ಹಾಗೂ ಇನ್ನೊಂದು ಕೈಗಳಲ್ಲಿ ಒಂದು ಕೈಯಲ್ಲಿ ಪದ್ಮವನ್ನೂ ಹಾಗೂ ಇನ್ನೊಂದು ಕೈಯಲ್ಲಿ ಗದೆಯನ್ನೂ ಹಿಡಿದಿದ್ದಾನೆ. ಅತ್ಯಂತ ನವಿರಾದ ರೇಷ್ಮೆ ದುಕೂಲವನ್ನು ಉಟ್ಟಿರುವ ವಿಷ್ಣುವು ತೊಟ್ಟಿರುವ ಪಂಚೆಯು ವಿಶೇಷವಾಗಿದೆ. ವೈಜಯಂತಿಯನ್ನು ತೊಟ್ಟಿರುವ ವಿಷ್ಣುವು ತೋಳಬಂಧಿ, ಕೊರಳಿನಲ್ಲಿ ಕಂಠೀಹಾರಗಳನ್ನು, ಉದರ ಬಂಧನವನ್ನೂ ತೊಟ್ಟಿದ್ದಾನೆ.

**ಅಗ್ರಮಂಟಪ :**

ಮಹೇಂದ್ರೇಶ್ವರ ದೇವಾಲಯದ ಗೂಢಮಂಟಪ ದಲ್ಲಿ ಶ್ರೀಕಾರದ ನಾಲ್ಕು ಕಂಬಗಳನ್ನು ಅಳವಡಿಸಲಾಗಿದೆ. ರುದ್ರಕಾಂತ ಮಾದರಿಯ ಈ ಕಂಬಗಳು ದೇವಾಲಯದ ಸೊಗಸನ್ನು ಇಮ್ಮಡಿಗೊಳಿಸಿದೆ. ಅಗ್ರಮಂಟಪದಲ್ಲಿ ಕೂಡ ಎರಡು ಶಿಲ್ಪಗಳು ಕಂಗೊಳಿಸುತ್ತವೆ. ಇಲ್ಲಿರುವ ಮಾತೃಕೆಯ ಶಿಲ್ಪವು ವಿಪರೀತವಾಗಿ ಸವೆದು ಹೋಗಿದೆ. ಇದುಯಾವ ದೇವತೆಯೆಂದು ತಿಳಿಯುವುದು ಕೂಡ ಕಷ್ಟವಾಗಿದೆ. ಆದರೆ ಸಪ್ತಮಾತೃಕೆಯರ ಜೊತೆಯಲ್ಲಿ ಇರುವ ವೀಣಾಧರ ವೀರಭದ್ರ ಮಾತ್ರ ಈಗ ಉಳಿದಿದೆ. ಬಹುಶಃ ಇನ್ನೊಂದು ಬದಿಯಲ್ಲಿ ಇದ್ದಿರಬಹುದಾದ ಗಣೇಶನ ಶಿಲ್ಪವು ಇಂದಿಗೆ ದೇವಾಲಯದ ಹೊರಗೆ ಇಟ್ಟಿರುವ ಎರಡು ಗಣೇಶನ ಶಿಲ್ಪಗಳಲ್ಲಿ ಚಿಕ್ಕಗಣೇಶನು ಒಂದಾಗಿರುವ ಸಾಧ್ಯತೆಯು ಹೆಚ್ಚಿಗಿದೆ.

**ನಂದಿಮಂಟಪ :**

ಮಹೇಂದ್ರೇಶ್ವರ ದೇವಾಲಯದಲ್ಲಿರುವ ನಂದಿ ಮಂಟಪವು ವಿಶೇಷವಾಗಿದೆ. ಬೇರೆಡೆಯಲ್ಲಿ ದೇವಾಲಯದ ಹೊರಗೆ ನಂದಿಗಾಗಿ ಒಂದು ಮಂಟಪವನ್ನು ಮಾಡುವ ಪರಿಪಾಠವಿದೆ. ಆದರೆ ಇಲ್ಲಿ ದೇವಾಲಯದ ಅಗ್ರ ಮಂಟಪವನ್ನೇ ಅರ್ಧಭಾಗ ತುಂಡು ಮಾಡಿ ನಂದಿ ಮಂಟಪವನ್ನಾಗಿ ರೂಪಿಸಲಾಗಿದೆ. ಇಲ್ಲಿ ಆರು ನೊಳಂಬರ ಕಾಲದ ರುದ್ರಕಾಂತ ಮಾದರಿಯ ಸ್ವತಂತ್ರ ಕಂಬಗಳನ್ನು ನಾವೀಗ ನೋಡಬಹುದು. ಆದರೆ ಇಂದು ಗೋಡೆಯಲ್ಲಿ ಸೇರಿಸಿ ನಿರ್ಮಿಸಿರುವ ರುದ್ರಕಾಂತ ಮಾದರಿಯ ಕಂಬಗಳು ಮೂಲದಲ್ಲಿ ಸ್ವತಂತ್ರ ಕಂಬಗಳೇ ಆಗಿದ್ದವು. ಇದು ಕುಡ್ಯಸ್ತಂಭಗಳಲ್ಲ. ಇದು ಸ್ವತಂತ್ರ ಕಂಬಗಳೇ ಎನ್ನುವುದನ್ನು ನೆನಪಿನಲ್ಲಿಡಬೇಕು. ಈ ನಂದಿಮಂಟಪದಲ್ಲಿಯೇ ನೊಳಂಬ ದೊರೆ ಮಹೇಂದ್ರನ ಅತ್ಯಂತ ಸುಂದರವಾದ ಕಂಬಶಾಸನವನ್ನು ಇರಿಸಲಾಗಿದೆ. ಚತುರ್ಮುಖಗಳಲ್ಲೂ ಶಾಸನಪಾಠಗಳನ್ನು ಹೊಂದಿರುವ ಈ ಶಾಸನವನ್ನು ತೆಗೆದುಕೊಂಡು ಹೋಗಿ ಗೋಡೆಯ ಬದಿಗೆ ಇರಿಸಿರುವುದು ಅಕ್ಷಮ್ಯವೇ ಸರಿ.

ನೊಳಂಬರ ಕಾಲದ ಅತ್ಯುತ್ತಮ ನಂದಿಗಳಲ್ಲಿ ಮಹೇಂದ್ರೇಶ್ವರ ದೇವಾಲಯದ ನಂದಿಮಂಟಪದಲ್ಲಿರುವ ನಂದಿಯು ಕೂಡ ಒಂದಾಗಿದೆ. ಅತ್ಯಂತ ಹಿತಮಿತವಾಗಿ ಅಲಂಕೃತಗೊಂಡಿರುವ ಈ ನಂದಿಗೆ ಕತ್ತಿನ ಸುತ್ತಲೂ ಹಾಗೂ ಬೆನ್ನಿನ ಮೇಲೆಯೂ ಗಂಟೆಗಳ ಹಾರವನ್ನು ಅಳವಡಿಸಲಾಗಿದೆ. ಈ ನಂದಿಯ ಗಂಗೆದೊಗಲೂ ಸಹ ಅತ್ಯಂತ ಸಹಜವಾಗಿ ಕೆತ್ತಲ್ಪಟ್ಟಿದೆ. ಪದ್ಮಪೀಠವೊಂದರ ಮೇಲೆ ಈ ನಂದಿಯನ್ನು ಕುಳ್ಳಿರಿಸಲಾಗಿದೆ.

ಮಹೇಂದ್ರೇಶ್ವರದೇವಾಲಯದ ನಂದಿಮಂಟಪದ ವಿತಾನವನ್ನೂ ಸಹ ಗೂಢಮಂಟಪದ ವಿತಾನದಂತೆಯೇ ನಿರ್ಮಿಸಲಾಗಿದೆ. ಈ ವಿತಾನವನ್ನು ಒಂಬತ್ತು ಪಟ್ಟಿಕೆಗಳಲ್ಲಿ ವಿಭಾಗಿಸಿರುವರಾದರೂ ಇಲ್ಲಿ ಶಿಲ್ಪಗಳನ್ನು ಕೆತ್ತುವುದರ ಬದಲಿಗೆ ನಡುಪಟ್ಟಿಕೆಯಲ್ಲಿ ಕಮಲದಳಗಳನ್ನು ಕೆತ್ತಲಾಗಿದೆ. ಉಳಿದಂತೆ ಇರುವ ಪಟ್ಟಿಕೆಗಳಲ್ಲಿ ಕಮಲಗಳನ್ನು ಪೂರ್ಣವಾಗಿ ಕೆತ್ತಿಲ್ಲ. ಮಧ್ಯದ ಪಟ್ಟಿಕೆಯ ಸುತ್ತಲೂ ನಾಲ್ಕು ಕಡೆ ಅಧೋಪದ್ಮಗಳನ್ನು ಕೆತ್ತಲಾಗಿದೆ.

## ನೊಳಂಬರ ಕಾಲದ ಬಿರುದಾವಳಿಗಳು

ಸಿಂಹಪೋತ ಕಲಿ ನೊಳಂಬಾಧಿರಾಜ (ಕ್ರಿ.ಶ. 785–805)
ನೊಳಂಬಾಧಿರಾಜ : ನೊಳಂಬ ರಾಜ್ಯದ ಅರಸ
ಪಲ್ಲವಾನ್ವಯ : ಪಲ್ಲವ ಮನೆತನಕ್ಕೆ ಸೇರಿದವನು
ಪಲ್ಲವಕುಲತಿಲಕ : ಪಲ್ಲವ ಕುಲಕ್ಕೆ ತಿಲಕಪ್ರಾಯವಾದನು
ಪೃಥ್ವೀವಲ್ಲಭ : ಭೂಮಂಡಲದ ಒಡೆಯ, ಪ್ರಿಯನಾದವನು
ಪೊಳಲ್ಚೋರ (ಕ್ರಿ.ಶ. 830–875)
ನೊಳಂಬಾಧಿರಾಜ : ನೊಳಂಬ ರಾಜ್ಯದ ಅರಸ
ಮಹಾಸಾಮಂತ : ಗಂಗರ ಸಾಮಂತನಾಗಿ ಆಳ್ವಿಕೆ ನಡೆಸಿದ ಕಾರಣ ಈ ಬಿರುದು, ಹುದ್ದೆಯಿಂದ ಕರೆಯಲಾಗಿದೆ.
1ನೇ ಮಹೇಂದ್ರ (ಕ್ರಿ.ಶ. 875–97)
ಗಂಡತ್ರಿನೇತ್ರ : ಶೂರರಿಗೆ ಮುಕ್ಕಣ್ಣನಾಗಿರುವವನು. ಮೈಯೆಲ್ಲಾ ಕಣ್ಣುಳ್ಳ ಮಹಾಶುರನು
ತ್ರಿಭುವನಧೀರ : ಬಾಣರಸರನ್ನು ಸೋಲಿಸಿ ಈ ಬಿರುದನ್ನು ಹೊಂದಿದ್ದನು. ಮೂರು ಲೋಕಕ್ಕೆ ಪರಾಕ್ರಮಶಾಲಿಯದವನು
ನೊಳಂಬಾಧಿರಾಜ : ನೊಳಂಬ ರಾಜ್ಯದ ಅರಸ
ಮಹಾಬಲಿಕುಲವಿಧ್ವಂಸಕ : ಮಹೇಂದ್ರನು ಮಹಾಬಲಿ ಬಾಣರಸರನ್ನು ತಮಿಳುನಾಡಿನ ಸೂರೆಮಡಿ ಎಂಬಲ್ಲಿ ಕ್ರಿ.ಶ. ೮೯೨ರಲ್ಲಿ ಸೋಲಿಸಿ ಈ ಬಿರುದನ್ನು ಹೊಂದಿದನು.
ಮೈದುಂಬಮಹಾರಾಜ : ವೈದುಂಬನಾಡಿನ ಅರಸ (The Nolambas, pp84, 94)
ಅಯ್ಯಪದೇವ (ಕ್ರಿ.ಶ. ೯೦೭–೯೩೩)
ನೊಳಂಬಾಧಿರಾಜ : ನೊಳಂಬ ರಾಜ್ಯದ ಅರಸ
ಇರಿವ ನೊಳಂಬ ದಿಲೀಪ (ಕ್ರಿ.ಶ. ೯೪೧–೯೬೮)
ತ್ರಿಭುವನಧೀರ : ಮೂರು ಲೋಕಗಳಲ್ಲಿ ಪರಾಕ್ರಮ ಶಾಲಿಯಾದವನು
ನೊಳಂಬ ನಾರಾಯಣ : ನೊಳಂಬ ಮನೆತನದಲ್ಲಿ ನಾರಾಯಣನಂತೆ ಪ್ರಸಿದ್ಧನಾದನು
ನೊಳಂಬಾಧಿರಾಜ : ನೊಳಂಬ ರಾಜ್ಯದ ಅರಸ
ಪಲ್ಲವರಾಮ : ಪಲ್ಲವ ಮನೆತನದಲ್ಲಿ ಶ್ರೀರಾಮನಂತಿರುವವನು
ಪಲರೊಡೆಗಂಡ : ಪಲ್ಲವರಲ್ಲಿ ಮಹಾಶುರನಾದವನು
ಪಲ್ಲವ ಮುರಾರಿ : ಪಲ್ಲವ ಮನೆತನದಲ್ಲಿ ಶ್ರೀಕೃಷ್ಣನಂತಿರುವವನು
ಪಲ್ಲವಾದಿತ್ಯ : ಪಲ್ಲವ ಮನೆತನದಲ್ಲಿ ಸೂರ್ಯನಂತೆ ಪ್ರಕಾಶಿಸುವನು
ಪಲ್ಲವೋಳ್ಗಂಡ : ಪಲ್ಲವರಲ್ಲಿ ಮಹಾಶುರನಾದವನು
ನನ್ನಿ ನೊಳಂಬ (ಕ್ರಿ.ಶ. ೯೬೯–೭೫)
ಛಲದಂಕಕಾರ : ಯುದ್ಧದಲ್ಲಿ ಛಲದಿಂದ ಹೋರಾಡುವವನು, ಪರಾಕ್ರಮಶಾಲಿಯಾದವನು, ದೃಢಸಂಕಲ್ಪವುಳ್ಳವನು
ಕಟ್ಟಣೆಮಲ್ಲ : ಕಟ್ಟಳೆ, ನಿಯಮಗಳನ್ನು ರೂಪಿಸುವಲ್ಲಿ ಚತುರನಾದವನು, ಶೂರನು
೨ನೇ ಮಹೇಂದ್ರ (ಕ್ರಿ.ಶ. ೯೭೫–೯೮೧)
ಅಹವದುರ್ಗ : ಸದಾ ಎಚ್ಚರದಿಂದಿರುವ ದುರ್ಗಮವಾದ ಕೋಟೆಯಂತಿರುವವನು
ಅಹಿತರಜವ : ದುಷ್ಟರಿಗೆ ಯಮನಂತಿರುವವನು
ಅಮೋಘವಾಕ್ಯ : ಹೆಸರುವಾಸಿಯಾದ ಬಿರುದುಗಳನ್ನು ಹೊಂದಿದವನು.
ಏಕವಾಕ್ಯ : ಸತ್ಯವಂತ, ಒಮ್ಮೆ ಕೊಟ್ಟ ಮಾತಿನಂತೆ ನಡೆದುಕೊಳ್ಳುವವನು
ನೊಳಂಬ ನಾರಾಯಣ : ನೊಳಂಬ ಮನೆತನದಲ್ಲಿ ನಾರಾಯಣನಂತೆ ಪ್ರಸಿದ್ಧನಾದನು
ನೊಳಂಬಾಧಿರಾಜ : ನೊಳಂಬ ರಾಜ್ಯದ ಅರಸ
ಪಲ್ಲವಾಭರಣ : ಪಲ್ಲವ ಮನೆತನದಲ್ಲಿ ಆಭರಣದಂತಿರುವವನು (The Nolambas, p. 126)
೨ನೇ ಇರಿವ ನೊಳಂಬ (ಕ್ರಿ.ಶ. ೧೦೧೦–೨೪)
ಏಕವಾಕ್ಯ : ಸತ್ಯವಂತ, ಒಂದೇ ಮಾತಿನಂತೆ ನಡೆದುಕೊಳ್ಳುವವನು
ಘಟೆಯಂಕಕಾರ : ಆನೆಗಳ ಗುಂಪಿನೊಡನೆ ಯುದ್ಧ ಮಾಡುವವನು, ಗಜದಳದಲ್ಲಿ ಪರಿಣತನು
ಕಾಂಚೀಪುರವರೇಶ್ವರ : ಕಾಂಚಿಪುರದ ಒಡೆಯನು
ಮಾಂಡಲಿಕ ತ್ರಿನೇತ್ರ : ಮಾಂಡಲಿಕರಲ್ಲಿ ಮುಕ್ಕಣ್ಣನಂತಿರುವವನು
ನೊಳಂಬಪಲ್ಲವ ಪೆರ್ಮಾಡಿ ಉದಯಾದಿತ್ಯದೇವ (ಕ್ರಿ.ಶ. ೧೦೨೪–೩೬)
ಅಮೋಘವಾಕ್ಯ : ಹೆಸರುವಾಸಿಯಾದ ಬಿರುದುಗಳನ್ನು ಹೊಂದಿದವನು
ಅರುವತ್ತನಾಲ್ಕು ಮಾಂಡಲಿಕರ ತಲೆಗೊಂಡಗಂಡ : ೬೪

ಮಾಂಡಲಿಕರ ತಲೆಗಳನ್ನು ಉರುಳಿಸಿದ ಪರಾಕ್ರಮಿ
ಅಹಿತಕರಗಂಡ : ಕೆಡುಕನ್ನು ಉಂಟುಮಾಡುವವರನ್ನು ಹಿಮ್ಮೆಟ್ಟಿಸುವವನು
ಏಕಾಂಗವೀರ : ಏಕಾಂಗಿಯಾಗಿ ಕದನದಲ್ಲಿ ಹೋರಾಡುವ ವೀರ
ಕಾಂಚೀಪುರವರೇಶ್ವರ : ಕಾಂಚಿಪುರದ ಒಡೆಯ
ಜಗದೇಕಮಲ್ಲ : ಜಗತ್ತನ್ನು ಜಯಿಸುವ ವೀರನಾಗಿದ್ದವನು. ಜಗತ್ತಿನ ಅರಸ
ನರಲೋಕದ ಗಂಡರಗಂಡ : ಭೂಲೋಕದಲ್ಲಿ ಆಳುವ ಅರಸು–ಮಾಂಡಲಿಕರ ಅಧಿಪತಿ
ನಿಗಳಂಕಮಲ್ಲ : ಕಾಲಿಗೆ ಪೆಂಡೆಯವನ್ನು ಧರಿಸಿದ ಪರಾಕ್ರಮಿ
ನೊರೆಯೂರು ಪುರವರಾಧೀಶ್ವರ : ನೊರೆಯೂರುಪುರದ ಒಡೆಯನು
ಪಲ್ಲವಕುಲಾನ್ವಯ : ಪಲ್ಲವ ಮನೆತನಕ್ಕೆ ಸೇರಿದವನು
ಪೆರ್ಮಾಡಿ : ಹೆಮ್ಮಾಡಿ, ಹಿರಿಯ, ಹಿರಿತನವುಳ್ಳವನು, ಶ್ರೇಷ್ಠನಾದವನು
ಭಂಟರಭಾವ : ಪರಾಕ್ರಮಿಗಳನ್ನು ಸೋಲಿಸಿ ಅವರ ಕಡೆಯ ಹೆಣ್ಣನ್ನು ಮದುವೆಯಾಗುವವನು
ಭೀತರಂಕೊಲ್ಲ : ಭೀತಿಗೊಳಗಾದವರನ್ನು ರಕ್ಷಿಸುವವನು
ಮರೆವುಗೆಕಾದ : ಶರಣಾದವರನ್ನು ರಕ್ಷಿಸುವವನು
ರಣರಂಗಭೈರವ : ರಣರಂಗದಲ್ಲಿ ಭೈರವನಷ್ಟು ಬಲಿಷ್ಠನಾದವನು.
ಶರಭಭೇರುಂಡ : ಶರಭ ಮತ್ತು ಭೇರುಂಡಗಳ ಶಕ್ತಿಯುಳ್ಳವನು
ಶೌಚಾಂಜನೇಯ : ಶುಚಿತ್ವದಲ್ಲಿ ಆಂಜನೇಯನಂತಿರುವವನು (S.I.I-IX-I, No. 80-81:EC-11, No. 21, ಚಳ್ಳಕೆರೆ)
ಇಮ್ಮಡಿ ನನ್ನಿನೊಳಂಬಪಲ್ಲವ ಪೆರ್ಮಾಡಿ (ಕ್ರಿ.ಶ. ೧೦೪೪–೫೪)
ಅಮೋಘವಾಕ್ಯ : ಹೆಸರುವಾಸಿಯಾದ ಬಿರುದುಗಳನ್ನು ಹೊಂದಿದವನು
ಏಕವಾಕ್ಯ : ಸತ್ಯವಂತ, ಕೊಟ್ಟ ಮಾತಿನಂತೆ ನಡೆದುಕೊಳ್ಳುವವನು
ಕಾಂಚೀಪುರವರೇಶ್ವರ : ಕಾಂಚಿಪುರದ ಒಡೆಯ
ಚಿತ್ರವೆಡಂಗ : ಚಿತ್ರವೆಂಬ ಕುದುರೆಯನ್ನು ಹೊಂದಿದವನು
ತ್ಯಾಗಚಿಂತಾಮಣಿ : ತ್ಯಾಗಕ್ಕೆ ಹೆಸರಾದವನು
ತ್ರೈಲೋಕ್ಯಮಲ್ಲ : ಮೂರುಲೋಕದ ಒಡೆಯ. ೧ನೇ ಸೋಮೇಶ್ವರನಿಂದ ಪಡೆದ ಬಿರುದು.
ದ್ರೋಹಕಾಳಾನಳ : ದ್ರೋಹ ಬಗೆಯುವವರನ್ನು ಸಂಹರಿಸುವವನು
ಮಂಡಳಿಕತ್ರಿಣೇತ್ರ : ಮಾಂಡಲಿಕರಿಗೆ ಶಿವನಂತಿರುವವನು, ಮುಕ್ಕಣ್ಣನಂತಿರುವವನು
ಮಹಾಮಂಡಳೇಶ್ವರ : ಇವನು ೬ನೇ ವಿಕ್ರಮಾದಿತ್ಯನ ಮಂತ್ರಿ, ಮಹಾಮಂಡಲದ ಒಡೆಯನೆಂದು ಕರೆಯಲಾಗಿದೆ.
ರಾಜಮನೋಜ : ಅರಸರಲ್ಲಿ ಮನ್ಮಥನಂತಿರುವವನು, ರೂಪವಂತನು
ವೈರಿನಾರಾಯಣ : ಶತ್ರುಗಳಿಗೆ ನಾರಾಯಣನಂತಿರುವವನು
ಹಯವತ್ಸರಾಜ : ಕುದುರೆ ಸವಾರಿಯಲ್ಲಿ ವತ್ಸರಾಜನಂತೆ ಹೆಸರಾದವನು (S.I.I-IX-I, No. 42; The Nolambas, p. 71, 84, 94, ಕವಿಶಿಶಾಸಂ–1, ಪು. 283)

**ಡಾ. ಎಸ್.ವೈ. ಸೋಮಶೇಖರ್**
ಪ್ರಾಧ್ಯಾಪಕರು,
ಪ್ರಾಚೀನ ಭಾರತೀಯ ಇತಿಹಾಸ
& ಪುರಾತತ್ವ ವಿಭಾಗ,
ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

## ನೊಟಿಂಬರ ಶಾಸನಗಳು

ಗಂಗ, ರಾಷ್ಟ್ರಕೂಟ, ಚಾಳುಕ್ಯ ಚಕ್ರಾಧಿಪತ್ಯದ ಅಧೀನ ಅರಸುಮನೆತನ ನೊಳಂಬರದ್ದು. ಇವರು ಸಾಮಂತರಾದರೂ ಪ್ರಭುತ್ವದ ಜೊತೆಗಿನ ರಾಜಕೀಯ ಅನುಸಂಧಾನದ ಮಾರ್ಗ ಒಂದು ಸ್ವತಂತ್ರ ನೆಲೆಗಟ್ಟನ್ನು ಸ್ಥಾಪಿಸಿಕೊಟ್ಟಿತ್ತು. ಅಂತೆಯೇ ಇವರ ಆಡಳಿತದ ನೆಲೆಗಳು ಕರ್ನಾಟಕ ಸಹಿತವಾಗಿ ತೆಲುಗು ಮತ್ತು ತಮಿಳು ಭಾಷಿಕರ ಪ್ರದೇಶಗಳವರೆಗೂ ಹಬ್ಬಿದ್ದವು. ರಾಜಕೀಯ ಇಚ್ಛಾಶಕ್ತಿ, ಶೌರ್ಯಗುಣ, ಸುಸಜ್ಜಿತ ಸೇನಾಪಡೆ, ಚಕ್ರಾಧಿಪತ್ಯಕ್ಕೆ ಸೂಚಿಸಿದ ಇವೆಲ್ಲವೂ ನೊಳಂಬರ ಸುಧೀರ್ಘವಾದ ಪ್ರಭುತ್ವದ ಪರಂಪರೆಗೆ ಅಡಿಗಲ್ಲಾದವು. ಮೂರುವರೆ ಶತಕಗಳಷ್ಟು ರಾಜ್ಯಾಡಳಿತ ನಡೆಸಿದ ನೊಳಂಬರ ಬಗ್ಗೆ ಇಡಿಯಾದ ಅಧ್ಯಯನಗಳು ಬರದೆ ಬಿಡಿ ಬಿಡಿಯಾಗಿ ಬಂದ ಅಧ್ಯಯನಗಳೇ ಹೆಚ್ಚು. ಈ ಅಗತ್ಯತೆಯನ್ನು ಅರಿತು ನೊಳಂಬರು ಹಾಕಿಸಿದ 328 ಶಾಸನಗಳನ್ನು ಒಗ್ಗೂಡಿಸಿ ಭಾಷ್ಯೆ ಸಹಿತವಾಗಿ ಹೊರಬಂದ ಕೃತಿ "ನೊಟಿಂಬರ ಶಾಸನಗಳು" ಒಕ್ಕೈಪಿಡಿಯಲ್ಲಿ ರಚಿತವಾದ ಈ ಕೃತಿಯು ಶಾಸನ ಸಂಪುಟದ ಸ್ವರೂಪದ್ದಾದರೂ; ಒಂದು ಅರಸುಮನೆತನದ ಸಂಸ್ಕೃತಿಯ ತಲಸ್ಪರ್ಶಿಯ ಸಂಶೋಧನಾ ಕೃತಿಯೂ ಆಗಿರುವುದು ವಿಶೇಷವಾಗಿದೆ.

ಒಂದಿಡೀ ಅರಸೊತ್ತಿಗೆಯ ಕಲ್ಬರೆಹಗಳನ್ನು ಒಗ್ಗೂಡಿಸುವುದು ಸುಲಭದ ಮಾತಲ್ಲ. ನಾಡಿನಾದ್ಯಂತ ಚದುರಿದ ಶಾಸನಗಳನ್ನು ಕ್ಷೇತ್ರಕಾರ್ಯದ ಮೂಲಕ ಮೂಲ ಆಕರಗಳನ್ನು ಹುಡುಕಿ, ಅವುಗಳ ಪಾಠ ತಯಾರಿಸಿಕೊಂಡು ಒಕ್ಕಟ್ಟು ಮಾಡುವುದು ಒಂದೆಡೆಯಾದರೆ, ಒಗ್ಗೂಡಿದ ಶಿಲಾಲೇಖಗಳ ಪಾಠಗಳನ್ನು ಕಾಲಾನುಕ್ರಮಣಿಕೆಯಲ್ಲಿ ಅಧ್ಯಯನಕ್ಕೆ ಒಳಪಡಿಸುವುದು ಮತ್ತೊಂದೆಡೆ ದೈಹಿಕ ಮತ್ತು ಬೌದ್ಧಿಕ ಶಿಸ್ತನ್ನು ಬಯಸುವ ಈ ಕಾರ್ಯ ಸತತ ಪ್ರಯತ್ನದ ಫಲ. ಈ ಶ್ರಮಸಾಧ್ಯತೆಯನ್ನು ಪ್ರೊ. ಡಿ.ವಿ. ಪರಮಶಿವಮೂರ್ತಿಯವರು ಮತ್ತು ಡಿ. ಸಿದ್ಧಗಂಗಯ್ಯ ಅವರು 'ನೊಟಿಂಬರ ಶಾಸನಗಳೂ' ಕೃತಿಯಲ್ಲಿ ಸಾಧಿಸಿ ತೋರಿಸಿದ್ದಾರೆ. ಈರ್ವರ ಶ್ರಮದಿಂದ ನೊಳಂಬರ ಶಾಸನಗಳು ಸಂಶೋಧಕರಿಗೆ, ಓದುಗರಿಗೆ ದೊರೆತಂತಾಗಿದೆ. 598 ಪುಟಗಳನ್ನು ಹೊಂದಿದ ಈ ಕೃತಿಯು ಕ್ರೌನ್ 1/4 ಆಕಾರದಲ್ಲಿದೆ. 800 ರೂಪಾಯಿಗಳ ಮುಖ ಬೆಲೆಯನ್ನು ಹೊಂದಿದ ಸಂಪುಟವನ್ನು "ಶ್ರೀ ಗುರು ಸಿದ್ಧರಾಮೇಶ್ವರ ಸೇನೆ", ಹೆರೂರು, ಗುಬ್ಬಿ, ತುಮಕೂರು ಜಿಲ್ಲೆ ಇವರು 2019ರಲ್ಲಿ ಪ್ರಕಟಿಸಿದ್ದಾರೆ.

ನೊಳಂಬರ ಬಹುತೇಕ ಒಟ್ಟು ಶಾಸನಗಳ ಪುದುವಟ್ಟು ಎಂಬ ಹೆಮ್ಮೆಯನ್ನು ಪ್ರಸ್ತುತ ಕೃತಿ ಪಡೆದುಕೊಳ್ಳುವುದರಲ್ಲಿ ಅನುಮಾನವೇ ಇಲ್ಲ. ಅಂತೆಯೆ ಕೃತಿಯು ಮುಖ್ಯ ಆಕರ ಗ್ರಂಥವೂ ಎಂಬುದರಲ್ಲಿ ಎರಡು ಮಾತಿಲ್ಲ. ಕೃತಿಯ ರಚನಾ ಸಂವಿಧಾನದಿಂದ ಈ ಮಾತು ದಿಟವಾಗುತ್ತದೆ. 'ನೊಟಿಂಬರ ಶಾಸನಗಳು' ಕೃತಿಸಂಪುಟವನ್ನು ನಾವು ಬೌದ್ಧಿಕ ಮತ್ತು ಭೌತಿಕ ಎಂಬ ಎರಡು ರಚನಾ ವಿಧಾನಗಳಲ್ಲಿ ಗ್ರಹಿಸಬಹುದು. ಮೊದಲನೆಯದ್ದು ಕೃತಿಯ ಅಂತರಂಗದ ಅರ್ಥ ವಿನ್ಯಾಸವಾದರೆ; ಎರಡನೆಯದ್ದು ಬಹಿರಂಗ ಅಲಂಕಾರ ಸೊಬಗಾಗಿದೆ. ಎರಡೂ ವಿಧಾನಗಳು ಬೇರೆ ಬೇರೆಯಾದರೂ ಒಂದಕ್ಕೊಂದು ಪೂರಕವಾಗಿ ಬಂದಿವೆ.

**ಕೃತಿ ಬೌದ್ಧಿಕತೆ :** ಬುದ್ಧಿಯ ಶ್ರಮಸಾಧ್ಯತೆಯಿಂದ ಹೊಮ್ಮುವ ಫಲಿತವೇ ಬೌದ್ಧಿಕತೆ ಎಂಬುದನ್ನು ಸರಳೀಕರಣಗೊಳಿಸ ಬಹುದು. ಪ್ರಸ್ತುತ ಕೃತಿಯಲ್ಲಿ ಈ ಅಂಶ ಎದ್ದು ತೋರುತ್ತದೆ. ದೈಹಿಕ ಶ್ರಮದಿಂದ ಒಕ್ಕಟ್ಟು ಮಾಡಿದ ಶಾಸನಗಳನ್ನು ಒಲಿಸಿಕೊಳ್ಳುವ ಒಲುಮೆಗಣ್ಣು ದೊರೆಯುವುದು ಸುಲಭದ ಮಾತಲ್ಲ. ಪ್ರತಿಯೊಂದು ಶಾಸನವನ್ನು ಓದುವಾಗಲೂ ಆಳವಾದ ಅಧ್ಯಯನ, ಚಾರಿತ್ರಿಕ, ಐತಿಹಾಸಿಕ ಪ್ರಜ್ಞೆ, ಭಾಷಾಪ್ರೌಢಿಮೆ, ಲಿಪಿಜ್ಞಾನ ಘನವಾಗಿರಬೇಕು. ಈ ಎಲ್ಲಾ ಅಂಶಗಳ ಪ್ರೌಢಿಮೆಯನ್ನು ಕೃತಿಯ ಉದ್ದಕ್ಕೂ ಪ್ರೊ. ಡಿ.ವಿ. ಪರಮಶಿವಮೂರ್ತಿಯವರು ಸಾಧಿಸಿ ತೋರಿಸಿದ್ದಾರೆ. ಈ ಕ್ರಿಯೆಗೆ ಡಿ. ಸಿದ್ಧಗಂಗಯ್ಯ ಅವರು ಒತ್ತಾಸೆಯಾಗಿದ್ದಾರೆ.

ನೊಟಿಂಬರ ಶಾಸನಗಳು ಸಂಪುಟದ ಆನೆಬಲವೆಂದರೆ ಇದರಲ್ಲಿರುವ ಸುದೀರ್ಘವಾದ ಪ್ರಸ್ತಾವನೆ. ಸದ್ಯ ಲಭ್ಯವಿರುವ ನೊಳಂಬರ 328 ಶಾಸನಗಳ ಅಂತರ್ಗತ ಪ್ರಸ್ತಾವನೆಯಲ್ಲಿ ಚರ್ಚಿತವಾಗಿದೆ. ನೊಟಿಂಬ ಪದದ ಉತ್ಪತ್ತಿ, ಅವರ ಕುಲ, ಕಸುಬು, ಇತಿಹಾಸ, ವಂಶ, ವಂಶಾವಳೀ, ರಾಜಕೀಯ ಇತಿಹಾಸ, ಪ್ರಮುಖ ರಾಜರ ಅಧ್ಯಯನ ಒಂದೆಡೆಯಾದರೆ; ಮತ್ತೊಂದು ಕಡೆ ನೊಳಂಬ ಎಂದರೆ ಶೌರ್ಯದ ಪ್ರತೀಕ ಎಂಭಂತೆ ಅವರು ಹಾಕಿಸಿದ

ವೀರಗಲ್ಲುಗಳ ಸಂಸ್ಕೃತಿಯ ಅನಾವರಣವಿದೆ. ಸಾಮಾನ್ಯ ಹೋರಾಟದ ವೀರಗಲ್ಲುಗಳು, ಊರಟಿವು, ತುಱುಕಾಳಗ, ಪೆಣ್ಬುಯ್ಯಲ್, ಕೋಟೆಕಾಳಗ, ಕಳ್ಳರೊಡನೆ ಹೋರಾಟ, ಲೆಂಕರು, ವೇಳವಾಳಿ, ಕೀಳ್ಗುಂಟೆ, ಬೆಂಕಿಬಲಿ, ಬೇಟೆ ವೀರಗಲ್ಲುಗಳ ವಿಭಾಗೀಕರಣ ಮತ್ತು ಅಧ್ಯಯನ ಸಂಪಾದಕರ ಶಿಸ್ತನ್ನು ಬಿಂಬಿಸುತ್ತದೆ. ಇಲ್ಲಿ ನೊಳಂಬರು ಕೃಷಿಮೂಲದಿಂದ ಬಂದು ಅಧಿಕಾರ ಹಿಡಿದವರು ಎಂಬುದನ್ನು ಸಂಪಾದಕರು ಸಾಧಿಸಿ ತೋರಿಸಿದ್ದಾರೆ, ಈಗಲೂ 'ನೊಣಬ' ಎಂಬ ಜನಾಂಗವಾಚಿ ಪದದಿಂದ ಗ್ರಾಮೀಣ ಮಟ್ಟದಲ್ಲಿ ಒಕ್ಕಲುತನ ಮಾಡಿಕೊಂಡು ಬದುಕುತ್ತಿರುವ ಸಮುದಾಯವು ನೊಟಂಬರ ಮೂಲದ್ದು ಎನ್ನಲಾಗಿದೆ.

ಕೆರೆ ನಿರ್ಮಾಣ, ದೇಗುಲ–ಬಸದಿಗಳ ನಿರ್ಮಾಣ ಮತ್ತು ನಿರ್ವಹಣೆ ಲೋಕೋಪಯೋಗಿ ಕಾರ್ಯ ರಾಜಸತ್ತೆಯಲಿ ನಿತ್ಯನೂತನವಾಗಿರುತ್ತಿದ್ದವು ಎಂಬುದನ್ನು ನೊಳಂಬ ಶಾಸನಗಳಲ್ಲಿ ಸಂಪಾದಕರು ಗುರುತಿಸಿದ್ದಾರೆ. ಅಳತೆಮಾಪನಗಳೂ, ಜೈನ, ಶೈವ, ಯತಿಗಳು, ನೊಳಂಬರಿಗೆ ಒಳಪಟ್ಟ ಆಡಳಿತ ಪ್ರದೇಶಗಳು, ಅಧೀನ ಅಧಿಕಾರಿಗಳು, ನೊಳಂಬ ಶಾಸನ ಸಾಹಿತ್ಯ, ಶಾಸನಕವಿಗಳೂ, ಛಂದಸ್ಸು, ಶಿಲ್ಪಿಗಳು, ಶಾಪಾಶಯಗಳನ್ನು ಪ್ರತ್ಯೇಕವಾದ ಅಧ್ಯಯನ ಕೃತಿಯಲ್ಲಿದೆ.

ನೊಳಂಬ ಶಾಸನಗಳಲ್ಲಿ ವ್ಯಕ್ತವಾದ ವಿಶೇಷ ವಿಚಾರಗಳನ್ನು ಸಂಪಾದಕರು ಗುರುತಿಸಿದ್ದು ಶ್ಲಾಘ್ಯ. ತ್ರಿಕೂಟ ದೇವಾಲಯ ಉಗಮ, ವೀರಗಲ್ಲಿನ ಮೊರೆಹೋದ ವ್ಯಕ್ತಿಯ ರಕ್ಷಣೆ, ದೇಗುಲ ಬಸದಿಗಳಲ್ಲಿ ಅಕ್ರಮವಾಗಿ ಸಂಪತ್ತನ್ನು ಅನುಭವಿಸುತ್ತಿದ್ದ ಹುಸಿ ಸನ್ಯಾಸಿಗಳ ಉಚ್ಚಾಟನೆ, ರೈತಾಪಿ ವರ್ಗದ ನಿತ್ಯ ಕಾಯಕದ ಉಪಕರಣ ತಯಾರಿಸುತ್ತಿದ್ದ ಕುಲುಮೆಯ ಮಹತ್ತು, ಸಕಾಲಕ್ಕೆ ದೇಗುಲಗಳ ದುರಸ್ತಿ ಕಾರ್ಯದ ದಾನ, ನೆಟ್ಟ ಶಾಸನಗಳನ್ನು ಸುಟ್ಟಾಗ ಆ ಶಾಸನಗಳ ಮರುನಿರ್ಮಾಣ, ಶತ್ರುಗಳ ಮೂಗನ್ನು ಕತ್ತರಿಸುವ 'ಮೂಗರಿಗ' ಎಂಬ ಶೂರರ ಉಲ್ಲೇಖ, ಶತ್ರುವಿನ ಶಿರಚ್ಛೇದ, ಪ್ರಾಚೀನ ದೇಗುಲ ರಕ್ಷಣೆ, ಸೂಳೆವಾಳ, ಕಂಭದ ಸೂಳೆಯರ ಮನೆತೆರಿಗೆ ಮತ್ತು 'ಕನ್ನಡಿ ತೇರಿಗೆ' ವಿನಾಯಿತಿ, ಸಾರ್ವಜನಿಕ ಉಪಯೋಗಿ ಧರ್ಮದ ಏತದ ನಿರ್ಮಾಣ, ದೇಗುಲದಲ್ಲಿ ಸೇರಿಕೊಂಡು ಧರ್ಮದ ಚೌಕಟ್ಟನ್ನು ಮೀರಿರುವ ಅನಾಚಾರಿಗಳಿಗಾಗಿ ದಂಡನೆ, ಗಂಗೆಯಲ್ಲಿ ಅಸ್ಥಿ ವಿಸರ್ಜಿಸಿದ್ದಕ್ಕಾಗಿ ದಾನ, ವಿಶೇಷ ಅಳತೆಗೋಲುಗಳು, ಔಷಧಿ ಉಪಚಾರಕ್ಕೆ ದಾನ ಮಾಡಿರುವುದು ಹೀಗೆ ಬಹುಮುಖಿ ಸಂಸ್ಕೃತಿಯ ಅನಾವರಣವನ್ನು ಸಂಪಾದಕರು ಸಮರ್ಥವಾಗಿ ಕಟ್ಟಿಕೊಟ್ಟಿದ್ದಾರೆ.

ಶಾಸನಗಳ ತಾಯಿಬೇರು ಲಿಪಿ. ಕನ್ನಡ ಶಾಸನಗಳ ಉಗಮ ಅದು ಕನ್ನಡ ಲಿಪಿಯ ಉಗಮವೂ ಹೌದು. ಕನ್ನಡದ ಒಂದೊಂದು ಪ್ರಭುತ್ವ ಬಂದಾಗ ಕನ್ನಡ ಲಿಪಿಯೂ ಸೃಜನೀಕರಣಗೊಳ್ಳುತ್ತಲೇ ಬಂದಿದೆ. ಆದರೆ ನೊಟಂಬ ಎಂಬ ಸಾಮಂತ ಅರಸೊಬ್ಬರು ಪ್ರಭುತ್ವದ ಸಿದ್ಧಮಾದರಿಯ ಲಿಪಿ ವಿನ್ಯಾಸದ ಮೊರೆ ಹೋಗದೆ ತಮ್ಮದೇ ಆದ ಹೊಸ ಲಿಪಿ ಸ್ವರೂಪವನ್ನು ಶಾಸನಗಳಲ್ಲಿ ಪ್ರಯೋಗಿಸಿದರು. ಕೃತಿಯ ಸಂಶೋಧಕರೆ ಹೇಳುವ ಹಾಗೆ ನೊಳಂಬರು "ಶಾಸನಲಿಪಿಯ ಕಲೆಯಲ್ಲಿ ಕನ್ನಡ ಲಿಪಿಯನ್ನು ಶ್ರದ್ಧಾಪೂರ್ವಕವಾಗಿ ಅರಳಿಸಿ ಕನ್ನಡ ಲಿಪಿಗೆ ಸುಂದರವಾದ ವಿನ್ಯಾಸವನ್ನು ನೀಡಿದ್ದಾರೆ. ಲಿಪಿಶೈಲಿಯಲ್ಲಿ ಈವರೆಗಿನ ಹೊಯ್ಸಳರನ್ನು ಮಾದರಿಯನ್ನಾಗಿ ಬಳಸುತ್ತಿರುವ ನಮಗೆ ನೊಳಂಬರ ಕನ್ನಡ ಲಿಪಿಶೈಲಿಯ ಸೌಂದರ್ಯ ಆಶ್ಚರ್ಯವನ್ನುಂಟುಮಾಡುತ್ತದೆ. ಕನ್ನಡ ಲಿಪಿಯನ್ನೂ ಕಲಾಪ್ರಕಾರದ ಒಂದು ಮಾಧ್ಯಮವನ್ನಾಗಿ ರೂಪಿಸಿ ಬೆಳಸಿದ ಕೀರ್ತಿ ನೊಳಂಬರಿಗೆ ಸಲ್ಲಬೇಕಾಗಿದೆ". ನೊಳಂಬ ಶಾಸನಗಳ ಲಿಪಿ ಸ್ವರೂಪ, ಲಕ್ಷಣಗಳೂ, ಲಿಪಿಯ ಮಾದರಿಗಳು, ಲಿಪಿವಿನ್ಯಾಸದ ಅಚ್ಚು ಮುಂತಾದ ವಿಷಯಗಳು ಶಾಸನಗಳ ಲಿಪಿ ಎಂಬ ಅಡಿಬರಹದ ಅಧ್ಯಯನದಲ್ಲಿ ಸಂಪಾದಕರು ಸಮರ್ಥವಗಿ ಅಭ್ಯಸಿಸಿದ್ದಾರೆ.

ಶಾಸನಗಳು ಎರಡು ರೀತಿಯ ಅರ್ಥವಂತಿಕೆಯನ್ನು ಓದುಗರಿಗೆ ತೆರೆದಿಡುತ್ತವೆ. ಒಂದು ಲಿಪಿಯ ಮೂಲಕ ಕಲಿತವರಿಗೆ ಕಲ್ಪವೃಕ್ಷವಾದರೆ, ಇನ್ನೊಂದು ಶಿಲ್ಪಗಳ ಮೂಲಕ ಕಲಿಯದವರ ಕಾಮಧೇನಾಗುತ್ತದೆ. ಲಿಪಿ ಬಲ್ಲವರಿಗೆ ಕಲ್ಬರೆಹ ಸಹಜವಾಗಿ ಅರ್ಥವಾಗುತ್ತಿತ್ತು ಆದರೆ ಲಿಪಿಯನ್ನು ಅರಿಯದವರಿಗೆ ಶಾಸನ ಒಕ್ಕಣೆಯನ್ನು ಓದಲು ಅಸಾಧ್ಯ. ಆದ್ದರಿಂದಲೇ ಶಾಸನ ಹಾಕಿದ ಉದ್ದೇಶ ಮತ್ತು ಸ್ವರೂಪ ಪ್ರತಿಯೊಬ್ಬರಿಗೂ ತಿಳಿಯುವ ಸಲುವಾಗಿ ಶಾಸನ ಜೊತೆಗೆ ಶಿಲ್ಪಗಳನ್ನೂ ಕೊರೆಯಲಾಯಿತು. ಪ್ರಸ್ತುತ ನೊಳಂಬರ ಶಾಸನ ಶಿಲ್ಪಗಳ ಬಗ್ಗೆ ಸ್ತಂಭಶಾಸನಗಳ, ಸ್ಮರಕ ಶಾಸನಗಳ, ವೀರಗಲ್ಲುಗಳ ಶಿಲ್ಪಗಳ ಬಗ್ಗೆ ವಿಶ್ಲೇಷಣೆ ಇದೆ. ನೊಳಂಬರ ಶಾಸನಶಿಲ್ಪಗಳು ರಾಷ್ಟ್ರಕೂಟರ ಶಾಸನ ಶೀಲ್ಪಗಳ ಮಾದರಿಯನ್ನು ಹೋಲುತ್ತವೆ ಎಂದು

ಸಂಪಾದಕರೆಂದರೂ ಬರಗೂರು ನೊಳಂಬ ಸ್ತಂಭ ಶಾಸನದಲ್ಲಿ ಬಾದಾಮಿ ಚಾಲುಕ್ಯ ಮಾದರಿಯ ಪುಷ್ಕರ ವಿನ್ಯಾಸವಿರುವುದನ್ನು ಕಾಣಬಹುದು. ಇನ್ನು ವೀರಗಲ್ಲುಗಳ ಶಿಲ್ಪಗಳಲ್ಲಿ ಚಾಲುಕ್ಯ ಮತ್ತು ರಾಷ್ಟ್ರಕೂಟರ ಪ್ರಭಾವವನ್ನು ಸಂಪಾದಕರು ಗುರುತಿಸಿದ್ದಾರೆ. ದೊಡ್ಡ ಉಳ್ಳಾರ್ತಿಯ ಶಕ 785ರ ವೀರಗಲ್ಲು ಮತ್ತು ಶಕ 925ರ ಕಲ್ಲೇದೇವಪುರದ ವೀರಗಲ್ಲು ನೊಳಂಬ ಮಾದರಿಯ ಶ್ರೇಷ್ಠ ವೀರಗಲ್ಲುಗಳು. ಇಲ್ಲಿ ಶಿಲ್ಪಗಳು ಸೊಗಸಾಗಿ ಒಡಮೂಡಿದ್ದು ಸಂಪಾದಕರ ವಿಶ್ಲೇಷಣೆಯೂ ಸಮರ್ಥವಾಗಿ ಬಂದಿದೆ. ವಿಶ್ಲೇಷಣೆಯ ಪಕ್ಕ ವೀರಗಲ್ಲಿನ ಶಿಲ್ಪದ ಛಾಯಾಚಿತ್ರ ಕೊಡುವ ಶಿಸ್ತನ್ನು ಅಳವಡಿಸಿಕೊಳ್ಳಬಹುದಿತ್ತು. ಪ್ರಸ್ತಾವನೆಯ ಕೊನೆಗೆ ಶಾಸನಗಳು ಸೃಜನ ಸಾಹಿತ್ಯದ ತಾಯಿಬೇರು ಎಂಬಂಶವನ್ನು ಶೃತಪಡಿಸಲು ನೊಳಂಬರ ಕಲಕೇರಿಯ ಶಾಸನದ ಛಂದೋರೂಪವನ್ನು ಕೊಡಲಾಗಿದೆ. ಇದೊಂದು 'ಚಂಪೂ' ಮಾದರಿಯ ಶ್ರೇಷ್ಠ ಶಾಸನವಾಗಿದ್ದು, ಗದ್ಯ ಪದ್ಯಗಳ ಮಿಶ್ರಣವಾಗಿದೆ. ಕಂದ, ವಚನ, ಚಂಪಕ, ಮತ್ತೇಭ, ಮಹಾಸ್ರಗ್ಧರ ವೃತ್ತಗಳು ಇಲ್ಲಿ ನಿತ್ಯವಾಗಿ ಬಂದಿವೆ. ಒಟ್ಟಾರೆ 119 ಪುಟಗಳ ಪ್ರಸ್ತಾವನೆಯು ನೊಳಂಬರ 328 ಶಾಸನಗಳನ್ನು 'ಕನ್ನಡಿಯಲ್ಲಿ ಕರಿ ಹಿಡಿದಂತೆ' ಎನ್ನುವ ಮಾತಿನಂತೆ ಅಚ್ಚುಕಟ್ಟಾದ ಸಂಪಾದಕರ ಶ್ರಮಸಾಧನೆಯನ್ನು ಬಿಂಬಿಸಿದೆ.

ಪ್ರಸ್ತಾವನೆಯ ನಂತರ ಅಕರಸೂಚಿ ಕೊಡಲಾಗಿದ್ದು ಇದರ ನಂತರ ಬರುವ 'ಶಾಸನಸೂಚಿ' ಪ್ರಮುಖವಾಗುತ್ತದೆ. ನೊಳಂಬರ 328 ಶಾಸನಗಳ ಕಾಲಾನುಕ್ರಮಣಿಕೆ, ಶಾಸನ ದೊರೆತ ಸ್ಥಳ, ತಾಲ್ಲೂಕು, ಪುಟಸಂಖ್ಯೆಯನ್ನು ಕೊಡಲಾಗಿದೆ. ಒಂದು ಮನೆತನದ ಶಾಸನಗಳ ಕಾಲಾನುಕ್ರಮವಾಗಿ ಹೊಂದಿಸುವುದು ಸುಲಭದ ಮಾತಲ್ಲ. ಜೊತೆಗೆ ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು ರಾಜ್ಯಗಳಲ್ಲಿ ಪಸರಿಸಿದ ನೊಳಂಬರ ಶಾಸನಗಳನ್ನು ಗ್ರಾಮ, ತಾಲ್ಲೂಕು, ಜಿಲ್ಲಾವಾರು ಗುರುತಿಸಿರುವುದು ಮೆಚ್ಚುಗೆಗೆ ಪಾತ್ರವಾಗುವ ಕಾರ್ಯ.

ಶಾಸನ ಪಾಠಗಳು :

'ನೊಳಂಬರ ಶಾಸನಗಳು' ಕೃತಿಯು ಹೆಸರೇ ಹೇಳುವಂತೆ ಅವರ ಶಾಸನಗಳ ಸಂಪುಟವಾಗಿದೆ. ದೇಗುಲ, ಬಸದಿ, ಹೊಲ, ಕೆರೆ, ಕಟ್ಟೆ, ತೂಬು, ಕೋಡಿ, ದಿನ್ನೆ, ಬೆಟ್ಟ, ಗುಡ್ಡ, ಗೋಮಾಳ ಹೀಗೆ ವಿವಿಧ ನೆಲೆಗಳು ಮತ್ತು ವಸತಿ ನೆಲೆಗಳಲ್ಲಿ (ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು) ಹರಡಿರುವ ಶಾಸನಗಳ ಪಾಠವನ್ನು ಒಕ್ಕಡೆ ಸೇರಿಸಿ ಕೊಡುವುದೇ ಕೃತಿಯ ಪ್ರಮುಖ ಉದ್ದೇಶವಾಗಿದೆ ಮತ್ತು ಈ ಕಾರ್ಯ ನೊಳಂಬ ರಾಜಸತ್ತೆಯ 328 ಶಾಸನಗಳನ್ನು ಸಂಕಲಿಸುವಲ್ಲಿ ಸಫಲತೆ ಕಂಡುಕೊಂಡಿದೆ.

ಪ್ರಸ್ತುತ ಕೃತಿಯಲ್ಲಿ ಈ ಹಿಂದಿನ ಸಂಪುಟಗಳಲ್ಲಿ ಇರುವಂತೆ ಶಾಸನ ಪಾಠದ ಸಂಖ್ಯೆ, ಅದು ದೊರೆತಿರುವ ಊರು, ತಾಲ್ಲೂಕು, ಜಿಲ್ಲೆ, ಶಾಸನ ನೆಟ್ಟ ಸ್ಥಳ, ಅದರ ಪಾಠ ಈ ಹಿಂದೆ ಪ್ರಕಟವಾದ ಮೂಲ ಆಕರ, ಶಾಸನ ರಚನೆಯಾದ ಕಾಲವನ್ನು ಕೊಡಲಾಗಿದೆ. ತದನಂಥರ ಇಡೀ ಶಾಸನಪಾಠದ ಸಂಕ್ಷಿಪ್ತ ಸಾರ. ಅಗತ್ಯ ಬಯಸುವ ಪಾಠಗಳ ಸುದೀರ್ಘ ವಿಶ್ಲೇಷಣೆ, ಕಾಲದ ಚರ್ಚೆ, ಶಾಸನಗಲ್ಲನ್ನು ಹಾಕಿದ ವಿಶೇಷತೆ ಮುಂತಾದ ಶಾಸನ ಸಂಸ್ಕೃತಿಯನ್ನು ಅನಾವರಣಗೊಳಿಸಲಗಿದೆ. ಬಳಿಕ ಮೂಲಕ ಕಲ್ಬರಹದ ಒಕ್ಕಣೆಯನ್ನು ಯಥಾವತ್ತಾಗಿ ಕೊಡಲಾಗಿದೆ.

ಸಂಪುಟದ ಬಹುತೇಕ ಪಾಠಗಳನ್ನು ಗಮನಿಸಿದಾಗ ತಪ್ಪುಗಳು ನುಸುಳದಿರುವುದು ಕಂಡುಬಂತು. ಸಂಪಾದಕರು ಪ್ರಕಟಿತ ಪಾಠಗಳನ್ನು ಮತ್ತು ಮೂಲ ಶಿಲೆಯಲ್ಲಿರುವ ಬರೆಹವನ್ನು ಪರೀಕ್ಷಿಸಿ ತಾಳೆ ನೋಡಿದ್ದರ ಪರಿಣಾಮವಾಗಿ ಓದುಗ ಸಂಶೋಧಕರಿಗೆ ಶುದ್ಧಪಾಠ ದೊರೆತಂತಾಗಿದೆ. ಕೆಲವೊಂದು ಮೂಲ ಶಿಲಾಲೇಖದ ಪಡಿಯಚ್ಚು ದೊರಕದೇ ಇದ್ದಾಗ ಪ್ರಕಟಿತ ಪಾಠಗಳನ್ನೇ ಅವಲಂಬಿಸಿದಂತಿದೆ. ಇದು ಅನಿವಾರ್ಯವೂ ಹೌದು.

ಪ್ರತಿ ಶಾಸನಪಾಠದ ಸಾರಾಂಶ ಕೊಡುವಾಗ ಅದು ರಚನೆಯಾದ ಕಾಲ, ಸಂವತ್ಸರ, ಮಾಸ, ವಾರ, ಅಮಾವಾಸ್ಯೆ, ಪೌರ್ಣಮಿ, ಗ್ರಹಣಗಳನ್ನು ತಾಳೆನೋಡಿ ಕ್ರಿಸ್ತಶಕದ ಕಾಲ ನಿರ್ಧರಿಸಲಾಗಿದೆ. ಕಲ್ಬರೆಹ ಸ್ಥಾಪಿತವಾದಾಗ ಇದ್ದ ಚಕ್ರಾಧಿಪತಿ, ನೊಳಂಬ ರಾಜ, ಮಂತ್ರಿ, ದಂಡನಾಯಕರು, ನಾಳ್ಗಾವುಂಡ, ಗಾವುಂಡ ಹೆಸರುಗಳ ದಾಖಲೀಕರಣ ಸಾರಾಂಶದಲ್ಲಿ ಕ್ರೋಡೀಕರಣಗೊಂಡಿದೆ. ಇದಷ್ಟೆ ಅಲ್ಲದೆ ಶಾಸನ ಹಾಕಿದ ಉದ್ದೇಶ, ದಾನದ ವಿವರ, ದಾನ ಸ್ವೀಕರಿಸಿದ ವ್ಯಕ್ತಿ, ಮುನಿ ಮತ್ತು ಶ್ರದ್ಧಾಕೇಂದ್ರ, ಶಾಸನ ಕವಿ, ಲಿಪಿಕಾರ, ರೂವಾರಿ ಹೆಸರುಗಳು ಹೀಗೆ ಬಹುಮೊತ್ತದ ವಿವರಣೆಯನ್ನು ಸಂಪಾದಕರು ಕೊಟ್ಟಿದ್ದಾರೆ. ಶಾಸನ ಪಾಠವನ್ನು ಅರ್ಥೈಯಿಸಿಕೊಳ್ಳುವಲ್ಲಿ ಇದು ಪೂರಕ ಮಾಹಿತಿ. ಈ ರೀತಿಯ ಕ್ರಮವು ಶಾಸನಗಳನ್ನು ಹೊಸದಾಗಿ

**39ನೇ ಪುಟಕ್ಕೆ ಮುಂದುವರೆದಿದೆ.**

# ಪಟೇಲ್ ಸಿದ್ಧಲಿಂಗಪ್ಪ – ನೆನಪು



ಭದ್ರಾವತಿ ತಾಲ್ಲೂಕು ಸಿಂಗನಮನೆ ಕುಗ್ರಾಮ. ಭದ್ರಾ ಅಣೆಕಟ್ಟು ತಗ್ಗು ಪ್ರದೇಶದ ಭತ್ತದ ಕಣಜವೆಂದು ಖ್ಯಾತಿ ಪಡೆದ ಈ ಗ್ರಾಮ ತರೀಕೆರೆ ತಾಲ್ಲೂಕಿಗೆ ಗಡಿ ಅಂಚಿನಲ್ಲಿದೆ. ಸಿಂಗನಮನೆ ಎಂದಾಕ್ಷಣ ನೆನಪಿಗೆ ಬರುವುದು ಸಿದ್ಧಲಿಂಗಪ್ಪ ಗೌಡ್ರು. ಸುತ್ತು ಏಳುಹಳ್ಳಿಗೆ ಸಿದ್ಧಲಿಂಗಪ್ಪ ಗೌಡ್ರು ಅಂದ್ರೆ ಅಜಾತಶತೃ. ಪಟೇಲ್ ಮನೆತನದಲ್ಲಿ ಹುಟ್ಟಿಬೆಳೆದು ಜನರ ಸೇವೆಯೇ ಜನಾರ್ಧನನ ಸೇವೆ ಎಂದು ತಿಳಿದವರು. ಗ್ರಾಮ ಪಂಚಾಯಿತಿಯಿಂದ ತಾಲ್ಲೂಕು ಬೋರ್ಡ್‌ವರೆಗೆ ಕಾಂಗ್ರೆಸ್ ಪಾರ್ಟಿಯಿಂದ ಅನೇಕ ಹುದ್ದೆಗಳನ್ನು ಅಲಂಕರಿಸಿದವರು. ಭದ್ರಾವತಿ ತಾಲ್ಲೂಕು ಕಾಂಗ್ರೆಸ್ ಪಾರ್ಟಿಯ ಅಧ್ಯಕ್ಷರಾಗಿ ಪ್ರಾಮಾಣಿಕವಾಗಿ ದುಡಿದವರು. ಬಿಳಿಪಂಚೆ, ಸಿಲ್ಕ್ ಜುಬ್ಬ, ಮಧ್ಯೆ ಬೈತಲೆ ದುಂಡುಮುಖ, ಪೈಲ್ವಾನ್ ಮೈಕಟ್ಟು ಯಾರಾದರು ಎದುರು ಬಂದು ನಮಸ್ಕಾರ ಗೌಡ್ರೆ! ಅಂದ್ರೆ ನಗುಮುಖದ ನಗೆಬೀರುತ್ತಿದ್ದರು. ಕಾಂಗ್ರೆಸ್ ಪಾರ್ಟಿಯ ಅನೇಕ ಮುಖಂಡರ ಒಡನಾಟ ಇವರಲ್ಲಿ ಇತ್ತು. ಅವರಿಗೆ ತುಂಬಾ ಹತ್ತಿರದವರು ಎಂದರೆ ಟಿ.ವಿ. ಚಂದ್ರಶೇಖರಪ್ಪ ಎ.ಆರ್. ಖದ್ರಿ ನಾರಾಯಣ ಅಯ್ಯಂಗಾರ್, ಇಸ್ಸಾಮಿಯಾ, ಅನ್ವರ್ ಖುದ್ದೂಸ್, ಗಂಗಮ್ಮ, ಜೆ. ರಾಮಪ್ಪ ಇನ್ನೂ ಮುಂತಾದವರು. ಭದ್ರಾವತಿ ತಾಲ್ಲೂಕಿನಲ್ಲಿ ಪಟೇಲ್ ಸಿದ್ಧಲಿಂಗಪ್ಪನವರು ಕತೃತ್ವ ವ್ಯಕ್ತಿತ್ವ ಉಳ್ಳವರು.

ಪಟೇಲ್ ಸಿದ್ಧಲಿಂಗಪ್ಪನವರು ಸಾಮಾಜಿಕ ಕಾಳಜಿಯನ್ನು ಇಟ್ಟುಕೊಂಡು ನೊಳಂಬ ಸಮಾಜವನ್ನು ಸಂಘಟಿಸಲು ಶ್ರಮಪಟ್ಟವರು. (BRP) ಸಿಂಗನಮನೆಯಲ್ಲಿ ಕುವೆಂಪು ವಿಶ್ವವಿದ್ಯಾನಿಲಯ ಸ್ಥಾಪನೆಯಾಗಲು ಪಟೇಲ್ ಸಿದ್ಧಲಿಂಗಪ್ಪನವರು ಕಾರಣೀಬೂತರು. ಆಗ ಎ.ಆರ್. ಖದರಿ ನಾರಾಯಣ ಅಯ್ಯಂಗಾರ್ ಕರ್ನಾಟಕ ಸರ್ಕಾರದ ಶಿಕ್ಷಣ ಮಂತ್ರಿಗಳಾಗಿದ್ದು ಅವರಿಗೆ ಪೂರ್ಣ ಸಹಕಾರ ನೀಡಿದವರು ಸಿಂಗಮನೆ ಸಿದ್ಧಲಿಂಗಪ್ಪನವರು. ಭದ್ರಾವತಿ ತಾಲ್ಲೂಕಿನ ಅಧಿಕಾರಿಗಳು, ಜನಪ್ರತಿನಿಧಿಗಳು, ಸ್ಥಳೀಯ ಜನರು ಗೌಡರ ಮಾತನ್ನು ಚಾಚು ತಪ್ಪದೆ ಪಾಲಿಸುತ್ತಿದ್ದರು. ಇವತ್ತು ಕುವೆಂಪು ವಿಶ್ವವಿದ್ಯಾನಿಲಯ ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ತನ್ನದೇ ಆದ ಹೆಸರನ್ನು ಉಳಿಸಿಕೊಂಡಿದೆ. ಕುವೆಂಪು ವಿಶ್ವವಿದ್ಯಾನಿಲಯದ ಏಳಿಗೆಗೆ ಪಟೇಲ್ ಸಿದ್ಧಲಿಂಗಪ್ಪನವರ ಶ್ರಮ ಅಪಾರವಾಗಿದೆ. ಇದನ್ನು ಯಾರೂ ಮರೆಯುವಂತಿಲ್ಲ. ಸ್ಥಳೀಯ ಸುತ್ತ ಮುತ್ತಲ ಹಳ್ಳಿಯ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ಅನುಕೂಲವಾಗಲೆಂದು ಭದ್ರ ಅಣೆಕಟ್ಟು ಪಕ್ಕದಲ್ಲಿ ರಂಭಾಪುರಿ ಖಾಸಗಿ ಕಾಲೇಜ್ ಸ್ಥಾಪನೆ ಮಾಡಿದ ಕೀರ್ತಿ ಸಿಂಗನಮನೆ ಪಟೇಲರಿಗೆ ಸೇರುತ್ತದೆ.

ನೊಳಂಬ ಸಮಾಜದ ದೂರದೃಷ್ಟಿ ಉಳ್ಳ ವ್ಯಕ್ತಿಯಾಗಿ ಸಮಾಜಕ್ಕೆ ಶಕ್ತಿಯನ್ನು ತುಂಬಿದವರು. ಭದ್ರಾವತಿಯಲ್ಲಿ ಶ್ರೀಗುರು ಸಿದ್ಧರಾಮೇಶ್ವರರ ಜಯಂತಿಯನ್ನು ಆಚರಣೆಯ ಮಾಡಿ ಯಶಸ್ವಿಯಾದರು. ಜಯಂತಿ ಆಚರಣೆ ಮಾಡಿ ಭಕ್ತರು ನೀಡಿದ ಧನ ಸಹಾಯದ ಹಣದಿಂದ ಬೆಂಗಳೂರು ಬಸವೇಶ್ವರ ನಗರದಲ್ಲಿರುವ ದಾನಶೂರ ಕಂಬಿ ಸಿಧರಾಮಣ್ಣ ವಿದ್ಯಾರ್ಥಿ ನಿಲಯದಲ್ಲಿ ಒಂದು ಕೊಠಡಿಯನ್ನು ಜಯಂತಿ ಆಚರಣೆ ನೆನಪಿಗಾಗಿ ಕಟ್ಟಿಸಿಕೊಟ್ಟಿದ್ದಾರೆ. ಶಿವಮೊಗ್ಗ ನಗರದಲ್ಲಿಯ ನಂದಿ ವಿದ್ಯಾಸಂಸ್ಥೆಯ ಅಧ್ಯಕ್ಷರಾಗಿ ಸಮಾಜದ ಒಳಿತಿಗಾಗಿ ಸೇವೆ ಸಲ್ಲಿಸಿದ್ದಾರೆ. ನೊಳಂಬರು ಎಂದು ಹೇಳಿಕೊಳ್ಳಲಾಗದ ಕಾಲದಲ್ಲಿ 'ನೊಳಂಬ' ಎಂದರೆ ಒಂದು ವಂಶ ಎಂದು ಧೈರ್ಯವಾಗಿ ಹೇಳುತ್ತಿದ್ದರು. ಅಂಥಹ ವ್ಯಕ್ತಿತ್ವ ಉಳ್ಳ ಜನರನ್ನು ಕಾಣುವುದೇ ಅಪರೂಪ.

ಒಬ್ಬ ಗಂಡಸಿನ ಹಿಂದೆ ನಾರಿಶಕ್ತಿ ಇರುತ್ತದೆ ಎಂಬುದಕ್ಕೆ ಪಟೇಲ್ ಸಿದ್ಧಲಿಂಗಪ್ಪನವರ ಧರ್ಮಪತ್ನಿ ಈರಮ್ಮನವರೇ ಸಾಕ್ಷಿ. ಈರಮ್ಮನವರು ಇಡೀ ಕುಟುಂಬದ ನಿರ್ವಹಣೆ ಮಾಡುತ್ತಿದ್ದವರು. "ಸತಿಪತಿ ಒಂದಾದ ಭಕ್ತಿ ಹಿತವಪ್ಪುದು ಶಿವಂಗೆ" ಎಂಬ ಮಾತು ಪಟೇಲ್ ಸಿದ್ದಲಿಂಗಪ್ಪ ಮತ್ತು ಈರಮ್ಮ ದಂಪತಿಗಳಿಗೆ ಒಪ್ಪುತ್ತದೆ. ಈ ದಂಪತಿಗಳಿಗೆ ಎರಡು ಗಂಡು ಮಕ್ಕಳು ಎರಡು ಹೆಣ್ಣು ಮಕ್ಕಳು. ಇದೊಂದು ಆದರ್ಶ ಮತ್ತು ಸಮತಾ ಕುಟುಂಬವಾಗಿತ್ತು.



**ಕತ್ತಿಗೆ ಚನ್ನಪ್ಪ**
ಸಾಹಿತ್ಯಧಾರೆ, ಸಿದ್ಧರಾಮ ಬಡಾವಣೆ
ಶಿವಮೊಗ್ಗ. ಮೊ : 9844572572

## ಆರೋಗ್ಯಾಮೃತ 39

# ಜೀವಾಮೃತ

ಇನ್ನೂ ಗೌರವಿಸುವ ಪದ್ಧತಿ ಉಳಿದುಕೊಂಡು ಬಂದಿದೆ. ಜಂಗಮರು ಸ್ವಾಮಿಗಳು ಕಂಡೊಡನೆಯೇ ಅವರ ಪೂರ್ವಾಪರಗಳನ್ನು ವಿಚಾರಿಸದೆಯೇ ಪಾದಕ್ಕೆರಗುವ ಸಂಪ್ರದಾಯ ಬೆಳೆದು ಬಂದಿದೆ. ಏಕೆ? ಬ್ರಹ್ಮಚರ್ಯ ವ್ರತ ಬಹಳ ಕಠಿಣವಾದುದು. ಇವರು ಆ ಮಾರ್ಗದಲ್ಲಿ ನಡೆಯುತ್ತಿದ್ದಾರೆ ಎಂಭ ಕಾರಣಕ್ಕಲ್ಲವೇ? ಹೌದು ಒಬ್ಬ ಸಾಮಾನ್ಯ ಸಾಧುವೂ ಕೂಡ ಮನಸ್ಸು ಮಾಡಿದರೆ ಸಮಾಜದಲ್ಲಿ ಬಹಳಷ್ಟು ಶಾಂತಿ ಪ್ರೀತಿಗಳನ್ನು ಉಂಟುಮಾಡಬಹುದು.

ಈಗಿನ ಕಾಲದ ಬಹಳಷ್ಟು ಜನ ಬ್ರಹ್ಮಚಾರಿಗಳು ಕೇವಲ ಹೆಣ್ಣನ್ನು ಮಾತ್ರ ದೂರವಿರಿಸಿ ಕಣ್ಣು, ನಾಲಿಗೆಗಳನ್ನು ಯಾವುದೇ ನಿಯಮಗಳಿಗೆ ಒಳಪಡಿಸದೆ ಮುಕ್ತವಾಗಿ ಹರಿಯಬಿಟ್ಟಿದ್ದಾರೆ. ಯೋಗಾಭ್ಯಾಸ, ಕಠಿಣ ಪರಿಶ್ರಮಗಳನ್ನು ಗಾಳಿಗೆ ತೂರಿದ್ದಾರೆ. ಹೀಗಾದಾಗ ದೇಹದ ಊರ್ಜೆ ರೋಗದ ರೂಪದಲ್ಲಿ ಕಾಡದೇ ಇನ್ನೇನು ಮಾಡಬೇಕು? ಸರ್ವಜ್ಞ ಹೇಳುತ್ತಾರೆ 'ಕಚ್ಚೆ ಕೈ ಬಾಯಿಗಳು ಇಚ್ಛೆಯಲ್ಲಿ ಇದ್ದಿಹರೆ' ಆರೋಗ್ಯವನ್ನು ಬಯಸುವ ಯಾರೇ ಇರಲಿ ಈ ಮೂರನ್ನು ಅಂಕೆಯಲ್ಲಿಟ್ಟುಕೊಳ್ಳಲೇಬೇಕು. ಇದರರ್ಥ ತಿನ್ನಲೇಬಾರದು, ಮದುವೆಯಾಗಲೇಬಾರದು, ಕೈಯಿಂದ ವ್ಯವಹಾರ ಮಾಡಲೇಬಾರದು ಎಂದರ್ಥವಲ್ಲ. ಇವುಗಳನ್ನು ವಿವೇಕದಿಂದ ಬಳಸಿದರೆ ಮನವು ಬಲಶಾಲಿಯಗಿ ಕೆಟ್ಟ ರುಚಿಗಳನ್ನು ತಿರಸ್ಕರಿಸುತ್ತದೆ. ಒಮ್ಮೆ ಆರೋಗ್ಯದ ಆತ್ಮಾನಂದದ ಸವಿ ನೋಡಿದ ಮನಸ್ಸು 'ಘನಮನ' ವಾಗುತ್ತದೆ. ಆಗ ಅದಕ್ಕೆ 'ನುಚ್ಚು ಮಜ್ಜಿಗೆಯು ಹಿತವಕ್ಕೂ' ಈ ಸಂದರ್ಭದಲ್ಲಿ ಒಂದು ಘಟನೆ ನೆನಪಾಗುತ್ತಿದೆ.

ಅರಸೀಕೆರೆ ಪಟ್ಟಣದಲ್ಲಿ ಪ್ರವಚನ ಕಾರ್ಯಕ್ರಮ ನಡೆಯುತ್ತಿದ್ದಾಗ ಆ ತಾಲ್ಲೂಕಿನ ಒಂದು ಗ್ರಾಮವಾದ ಮೇಟಿಕುರ್ಕೆಯ ವಿಶ್ವಣ್ಣ ಎಂಬುವವರ ಮನೆಗೆ ಪೂಜೆಗೆ ಹೋಗಿದ್ದೆವು. ಅವರ ಮನೆಯಲ್ಲಿ ಅವರ ತಂದೆ ಪುಟ್ಟಪ್ಪಜ್ಜ ಎಂಬುವವರಿದ್ದರು. ಅವರಿಗೆ 74 ವರ್ಷ. ಅವರ ಜೊತೆ ಮಾತನಾಡುತ್ತಿರುವಾಗ ಅವರ ಕಣ್ಣು, ಕಿವಿ, ಧ್ವನಿ ಎಲ್ಲವೂ ಸ್ಪಷ್ಟವಾಗಿದ್ದುದ್ದು ಕಂಡುಬಂದಿತು. ಜೊತೆಗೆ ಅವರ ಮಾತಿನಲ್ಲಿ ಧೃಡತೆ, ಸ್ಪಷ್ಟತೆಗಳು ಎದ್ದು ತೋರುತ್ತಿದ್ದವು. ಆಧುನಿಕ ನಾಗರೀಕನ ಪರಮಮಿತ್ರರಾದ ಬಿಪಿ, ಡಯಾಬಿಟಸ್, ಹೃದಯರೋಗ ಅದರಿಂದ ಎಷ್ಟೋ ಗಾವುದ ದೂರದಲ್ಲಿದ್ದವು. ಮಾತಿನ ಮಧ್ಯೆ ಅವರು ತಮ್ಮ ಒಂದು ಒಳ್ಳೆಯ ಅಭ್ಯಾಸವನ್ನು ಕುರಿತು ಹೇಳಿದರು; 'ಮನೆಯಲ್ಲಿ ಹಬ್ಬದ ದಿನ ಹೋಳಿಗೆಯನ್ನೇ ಮಾಡುತ್ತಿರಲಿ ನಾನು ಹೋಗಿ ಅಮ್ಮಯ್ಯ ನನಗೊಂದು ಮುದ್ದೆ ಮಾಡಿಬಿಡು' ಎಂದು ಮುದ್ದೆ ಮಾಡಿಸಿಕೊಂಡೇ ಊಟ ಮಾಡುತ್ತೇನೆ ಬುದ್ಧಿ' ಇದೇ ನನ್ನ ಆರೋಗ್ಯದ ಗುಟ್ಟು ಎಂದು ಹೇಳಿದರು. ಅವರೊಬ್ಬರು ಸದ್ಗೃಹಸ್ಥರಾಗಿ ಕಾಯಕ ಜೀವಿಗಳಾಗಿ ಸದಾಚಾರದ ವಿಚಾರಮುಕ್ತ ಬದುಕನ್ನು ಬದುಕಿ ಆರೋಗ್ಯವನ್ನು ಕಾಪಾಡಿಕೊಂಡಿರುವುದರಿಂದ ಈ ಮುದಿತನದಲ್ಲೂ ಮುದ್ದೆಯೇ ಅವರಿಗೆ ಪರಮಾಮೃತವಾಗಿ ತೋರುತ್ತದೆ. ಎಷ್ಟೋ ಜನ ಭಾಷಣಕಾರರು ಕೆಲವು ವಿದ್ವಾಂಸರುಗಳು ಅಡಿಗೆಯಲ್ಲಿ ಸಿಹಿ ತಿನಿಸು ಇರದಿದ್ದರೆ ಸಂಘಟಕೆ ಅಚಾತುರ್ಯದಿಂದ ಸಿಹಿ ತಿನಿಸುಗಳು ತಪ್ಪಿ ಹೋದರೆ ಸಿಟ್ಟಿನಿಂದ ಕುದಿಯುವುದನ್ನು ಕಾಣಬಹುದು. ವ್ಯತ್ಯಾಸ ಗೊತ್ತಾಯಿತಲ್ಲವೇ? ಅನೇಕ ಮಂದಿ ಭಾಷಣಕಾರರು ಕೇವಲ ಭಾಷಣ ಮಾಡುತ್ತಾರಷ್ಟೆ ತಮ್ಮ ವಿಕಾರಗಳನ್ನು ಕಡಿಮೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಯೋಚಿಸುವುದೇ ಇಲ್ಲ.

**ನುಚ್ಚು ಮಜ್ಜಿಗೆಯು ಹಿತವಕ್ಕು**

ಉತ್ತರ ಕರ್ನಾಟಕದ ಅತ್ಯಂತ ಸ್ವಾದಪೂರ್ಣ ಆರೋಗ್ಯದಾಯಕ ಆಹಾರವೆಂದರೆ ಜೋಳದ ನುಚ್ಚುಮತ್ತು ಮಜ್ಜಿಗೆ. ವಿಶೇಷವಾಗಿ ಬಿಜಾಪುರ ಜಿಲ್ಲೆಯಲ್ಲಿ ಹುಳ್ಳ ನುಚ್ಚು ಎಂದು ಕರೆಯಲ್ಪಡುವ ಅಡಿಗೆಯು



**ಶ್ರೀ ಶ್ರೀ ಬಸವಾನಂದಸ್ವಾಮಿಗಳವರು**
ಗುರುಬಸವ ಮಹಾಮನೆ,
ಮನಗುಂಡಿ, ಧಾರವಾಡ

ಅಲ್ಲಿನ ರೈತರಿಗೆ ಅಮೃತ ಸಮಾನವಾಗಿ ತೋರುತ್ತದೆ. ಜೋಳದ ನುಚ್ಚನ್ನು ಮಜ್ಜಿಗೆಯಲ್ಲಿ ನೆನೆಯಲು ಹಾಕಿ ರಾತ್ರಿಯೆಲ್ಲಾ ನೆನೆಯಲು ಬಿಟ್ಟು ಬೆಳಿಗ್ಗೆ ಅದನ್ನು ಕುದಿಸಿ ಇನ್ನಷ್ಟು ಮಜ್ಜಿಗೆ ಬೆರೆಸಿಕೊಂಡು ಈರುಳ್ಳಿ, ಬೆಳ್ಳುಳ್ಳಿಗಳೊಂದಿಗೆ ತಿನ್ನುತ್ತಿದ್ದರೆ ರೈತನ ಪಾಲಿಗೆ ಅದರ ಮುಂದೆ ದೇವಲೋಕದ ಅಮೃತವು ಬೇಡವೆನಿಸುತ್ತದೆ. ಇಂತಹ ಆರೋಗ್ಯಪೂರ್ಣ ಆಹಾರ ತೆಗೆದುಕೊಂಡು ಬೆವರು ಸುರಿಸಿ ದುಡಿದರೆ ಆಯುಷ್ಯ ಹೆಚ್ಚಾಗದೆಯೇ ಇರುತ್ತದೆಯೇ?

ಈ ಸಂಧರ್ಭದಲ್ಲಿ ನಿಮಗೆ ಬೇಸರವಾಗುವುದಿಲ್ಲ ಎಂದರೆ ನಾನು ಬಾಲ್ಯದಲ್ಲಿ ಪಠ್ಯಪುಸ್ತಕದಲ್ಲಿ ಓದಿದ ಒಂದು ಸರ್ವಜ್ಞನನ ವಚನವನ್ನು ನೆನಪಿಸಿಕೊಳ್ಳುತ್ತೇನೆ.

**ಕಚ್ಚೆ ಕೈ ಬಾಯಿಗಳು ಇಚ್ಚೆಯಲಿ ಇದ್ದಿಹರೆ**
**ಅಚ್ಚುತನಪ್ಪ ಅಜನಪ್ಪ। ಲೋಕದೊಳ್**
**ನಿಶ್ಚಿಂತನಪ್ಪ ಸರ್ವಜ್ಞ**

ಆರೋಗ್ಯವನ್ನು ಹೊಂದಲು ನಿಶ್ಚಿಂತತೆ ಅಳವಡುವುದು ಬಹಳ ಅಗತ್ಯವೆಂಬುದನ್ನು ಈಗಾಗಲೇ ನೋಡಿದ್ದೀರಿ.

**ನಯನೇಂದ್ರಿಯ ವಿಷಯದಿಂದೆ ಪತಂಗ ಕೆಡುವುದು ದೀಪದ ಜ್ವಾಲೆಯಲಿ**

ನಯನೇಂದ್ರಯ ಎಂದರೆ ಕಣ್ಣು. ಈ ಇಂದ್ರಿಯದ ವಿಕಾರಕ್ಕೊಳಗಾಗಿ ಪತಂಗಗಳೂ ಸೇರಿದಂತೆ ಅನೇಕ ಹುಳುಗಳು ದೀಪದ ಜ್ವಾಲೆಯಲ್ಲಿ ಬಿದ್ದು ಸಾಯುವುದನ್ನು ನೋಡಿದ್ದೀರಿ. ಇಲ್ಲಿ ಒಂದು ತಮಾಷೆ ಹೇಳುತ್ತೇನೆ; ನಗುತ್ತೀರ ತಾನೇ? ಈಗ ನಾನು ಎರಡೂ ಕೈ ಬಳಸಿ ಬ್ರೈಲ್ ಲಿಪಿಯನ್ನು ಬರೆಯುತ್ತಿದ್ದೇನೆ. ಸೊಳ್ಳೆಗಳು ಕಚ್ಚಿ ನನ್ನ ರಕ್ತವನ್ನು ತಮ್ಮ ಆಹಾರವನ್ನಾಗಿ ಮಾಡಿಕೊಂಡು ನಲಿಯುತ್ತವೆ. ಎರಡೂ ಕೈ ಕೆಲಸದಲ್ಲಿ ನಿರತವಾಗಿರುವುದರಿಂದ ಸೊಳ್ಳೆಗಳನ್ನು ಹೊಡೆದುಕೊಳ್ಳಲು ಆಗುತ್ತಿಲ್ಲ. ಮೈ ಅಲುಗಾಡಿಸಿ ಸೊಳ್ಳೆಗಳನ್ನು ಓಡಿಸಲು ಪ್ರಯತ್ನಿಸುತ್ತಿದ್ದೇನೆ. ಮನಸ್ಸಿನಲ್ಲಿ ಒಂದು ಆಲೋಚನೆ ಬರುತ್ತಿದೆ. ನಾನೇನಾದರೂ ಬ್ರಹ್ಮನಾಗಿ ಸೃಷ್ಟಿಸುವ ಅದಿಕಾರ ಇದ್ದಿದ್ದರೆ ನೂರಾರು ಹುಳುಗಳು ದೀಪದ ಜ್ವಾಲೆಯಲ್ಲಿ ಬಿದ್ದು ಸಾಯುವಂತೆ ಈ ಸೊಳ್ಳೆಗಳ ಕಣ್ಣನ್ನು ಹಾಗೇ ನಿರ್ಮಾನ ಮಾಡಿಬಿಡುತ್ತಿದ್ದೆ. ಬೇರೆ ಹುಳುಗಳಂತೆ ಈ ಸೊಳ್ಳೆಗಳು ಸಾಯುತ್ತಿದ್ದವು. ಡಿಡಿಟಿ ಉಳಿಯುತ್ತಿತ್ತು. ಮಲೇರಿಯಾ ಹರಡುತ್ತಿರಲಿಲ್ಲಾ. ಎಷ್ಟು ಚೆನ್ನಾಗಿರುತ್ತಿತ್ತು. ಅಲ್ವೇ? ಆದರೆ ಈಗ ಹಾಗಾಗುವುದಿಲ್ಲ. ಬೆಂಕಿ ಹಾಕಿದ ಕೂಡಲೇ ಹೊರಗೆ ಹೋಗುತ್ತವೆ. ಹೊಗೆ ಕಡಿಮೆಯದ ತಕ್ಷಣ ಮತ್ತೆ ಒಳಗೆ ಹಾಜರಗುತ್ತವೆ. ಆ ದೇವರು ಸೊಳ್ಳೆಗಳನ್ನು ಬೆಂಕಿಯಲ್ಲಿ ಬಿದ್ದು ನಾಶವಾಗುವಂತೆ ಸೃಷ್ಟಿಸಬಾರದೇ? ಎಂದು ಶಪಿಸುತ್ತಿದ್ದೇನೆ. ಸೊಳ್ಳೆಗಳು ಹಾಗಾಗುವುದಿಲ್ಲ. ಬದಲಾಗಿ ಮನುಷ್ಯನ ನಯನೇಂದ್ರಿಯಕ್ಕೆ ವಿಪರೀತ ವಿಕಾರವನ್ನಿಟ್ಟಿದೆ ಪ್ರಕೃತಿ. ನಗೆಮರಿ ತಂದೆ ಎಂಬ ಶರಣರು ಪರಮಾತ್ಮನನ್ನು ಅರಿಯುವ ಉಪಾಯವನ್ನು ಹೇಳುತ್ತಾ ತಮ್ಮ ಒಂದು ವಚನದಲ್ಲಿ ಹೀಗೆ ಹೇಳಿದ್ದಾರೆ.

**ಕಂಗಳ ಮುಂದಣ ಕಾಂನ ಕೊಂದು**
**ಮನದ ಮುಂದಣ ಆಸೆಯ ತಿಂದು**
**ಆತನನರಿ ಆತುರವೈರಿ ಮಾರೇಶ್ವರನ**

ಕಾಮನ ವಾಸಸ್ಥಾನ ಕಣ್ಣು ಎಂಬುದು ಮಾರಿತಂದೆಗಳ ಅಬಿಪ್ರಾಯ. ಒಂದು ದೃಷ್ಟಿಯಿಂದ ಅದು ಸತ್ಯವೇ. ಕಣ್ಣು ನೋಡುತ್ತದೆ, ಮನ ಬಯಸುತ್ತದೆ. ಪ್ರೇಮಿಗಳ ಮಾತು ಶುರುವಾಗುವುದು ಕಣ್ಣಿನಿಂದಲೇ ಎಂಬುದು ನಿಮಗೆ ಗೊತ್ತಿರುವ ವಿಷಯವೇ ಆಗಿದೆ. ಇಲ್ಲಿ ನೀವು ಇನ್ನೊಂದು ಸಂದೇಹ ಎತ್ತಬಹುದು. ಹಾಗಾದರೆ ಕಣ್ಣೇ ಇಲ್ಲದವರಿಗೆ ಕಾಂವಿಕಾರವೇ ಇಲ್ಲವೇ? ಕೆಲವರು ಹಾಗೆ ಭಾವಿಸಿರುವುದೂ ಉಂಟು. ಕಣ್ಣು, ಕಾಮನ ವಾಸಸ್ಥಾನ ಎನ್ನುವುದು ಎಷ್ಟು ಸತ್ಯವೋ? ಅಷ್ಟೇ ಸತ್ಯ ಕಾಮ ಮನಸಿಜ ಎಂಬುದು. ಕಣ್ಣಿಲ್ಲದವರಿಗೂ ಮನಸ್ಸು ಇದ್ದೇ ಇರುತ್ತದೆ. ಕನಕದಾಸರು ಹೇಳಿರುವಂತೆ 'ಅನ್ನದಿಂದ ಬಂದ ಕಾಮ'. ಆದ್ದರಿಂದ ಅನ್ನ ಸೇವಿಸುವವರಿಗೆಲ್ಲರಿಗೂ ಕಾಮವಿಕಾರ ಇದ್ದೇ ಇರುತ್ತದೆ. ಪ್ರಮಾಣದಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಇರಬಹುದು ಅಷ್ಟೆ.

ಈ ಮಾನವರೆಂಬ ಪತಂಗಗಳು ಟಿ.ವಿ.ಯೆಂಬ ಬೆಂಕಿಯಲ್ಲಿ ಬಿದ್ದು ತಮ್ಮ ಸ್ವಯಂಶಕ್ತಿಯನ್ನು ಕಳೆದುಕೊಂಡು ನಿರ್ವೀರ್ಯರಾಗಿ ಬದುಕಿರುವುದನ್ನು ಕಾಣುತ್ತಿದ್ದೇವೆ. ಇಂಥಹ ವಿಕಾರಗಳಿಂದ ಕಣ್ಣನ್ನು ಮುಕ್ತಮಾಡಿ ಈ ದೃಷ್ಟಿಯನ್ನು ಇಷ್ಟಲಿಂಗದ ಕಡೆಗೆ ತಿರುಗಿಸಿದರೆ ಅಥವಾ ಪ್ರಕೃತಿ ದೃಶ್ಯಗಳಾದ ಸೂರ್ಯೋದಯ, ಬೆಳದಿಂಗಳು ನಕ್ಷತ್ರಗಳ ಮೇಲೆ ಕೇಂದ್ರೀಕರಿಸಿದರೆ ಕಣ್ಣು ಮಂಗಳಮಯವಾದ ದೃಶ್ಯಗಳನ್ನು ತುಂಬಿಕೊಂಡು 'ಶಿವಲಿಂಗ'ವಾಗುತ್ತದೆ.

**ಮುಂದುವರೆಯುವುದು........**

# ಮಹಾಕವಿ ರಾಘವಾಂಕನ "ಶ್ರೀ ಸಿದ್ಧರಾಮೇಶ್ವರರು"

ಶರಣ ತಿಂತಿಣಿಯಲ್ಲಿ ಭಕ್ತಿಯ ಬಸವ ಜ್ಞಾನದ ಚನ್ನಬಸವ, ವೈರಾಗ್ಯದ ಅಲ್ಲಮ, ಕರ್ಮದ ಸಿದ್ಧರಾಮ ಮತ್ತು ಶರಣಸತಿ ಲಿಂಗಪತಿ ಅಕ್ಕಮಹಾದೇವಿಯರು ಪ್ರಸಿದ್ದರು. ಶ್ರೀ ಗುರು ಸಿದ್ಧರಾಮೇಶ್ವರರನ್ನು 'ಕಾಯಕ ಕಲಿ', 'ಕರ್ಮಯೋಗಿ' ಶಿವಯೋಗಿ ಎಂದೆಲ್ಲಾ ವರ್ಣಿಸಿದ್ದಾರೆ. ಬಸವಣ್ಣನವರೇ ಅವರ ಒಂದು ವಚನದಲ್ಲಿ ಹೀಗೆ ಅಪ್ಪಣೆ ಕೊಡಿಸಿದ್ದಾರೆ. ''ದೇವರು ಕಾಮನಕೊಂದೆನೆಂಬರು ದೇವಂಗಿಬ್ಬರು ಹೆಂಡಿರುಂಟು ದೇವರು ಕಾಮನ ಕೊಂದುದಿಲ್ಲ, ಕಾಮನ ಕೊಂದವರು ಕಾಮವೈರಿಗಳು ಮೂವರಿದ್ದಾರೆ ಕೂಡಲ ಸಂಗಯ್ಯನಲ್ಲಿ ಶುಕ, ಸೊನ್ನಲಿಗೆ ಸಿದ್ಧರಾಮ, ಹನುಮಂತ" ಎಂದು ಆದ್ದರಿಂದ ಶ್ರೀ ಗುರು ಸಿದ್ಧರಾಮರು ಕಾಮಕೋಲಾಹಲರೂ, ಮಾಯಾತೀತರೂ ಆಗಿದ್ದಾರೆಂಬುದು ಅವರ ವಚನಗಳು ಮತ್ತು ಮಹಾಕವಿ ರಾಘವಾಂಕ ರಚಿಸಿರುವ ಸಿದ್ಧರಾಮ ಚಾರಿತ್ರ್ಯದಿಂದ ತಿಳಿದುಬರುತ್ತವೆ.

ರಾಘವಾಂಕನ ಜೀವನ ಚರಿತ್ರೆ ಅವನ ಕೃತಿಗಳಿಂದಲೂ ಮತ್ತು ಸಿದ್ದನಂಜೇಶನ ರಾಘವಾಂಕ ಚಾರಿತ್ರದಿಂದಲೂ ತಿಳಿದುಬರುತ್ತದೆ. ಅಲ್ಲದೆ ಬಸವಪುರಾಣ, ಚನ್ನಬಸವಪುರಾಣ, ಪದ್ಮರಾಜಪುರಾಣ, ವೀರಶೈವಾಮೃತ ಮಹಾಪುರಾಣಗಳಿಂದಲೂ ತಿಳಿದುಬರುತ್ತದೆ. ಮಹಾದೇವಭಟ್ಟ ಮತ್ತು ರುದ್ರಾಣಿಯರ ಮಗನಾಗಿ ಹುಟ್ಟಿ ಸೋದರ ಮಾವ ಮಹಾಕವಿ ಹರಿಹರನಿಂದ ಪ್ರೇರಣೆ ಪಡೆದು ಪಂಪಾಕ್ಷೇತ್ರದ ನಿವಾಸಿಯಾಗಿದ್ದು ಹಿರಿಯಕವಿಗಳಲ್ಲಿ ಕೊಂಡಗುಳಿ ಕೇಶಿರಾಜನನ್ನು ಸ್ತುತಿಸಿ ಉಭಯಕವಿ ಶರಭ ಭೇರುಂಡ, ಉಭಯಕವಿ ಕಮಲರವಿ, ಆದಟಕವಿನಿಕರ ಚೌದಂತ, ಕವಿಶರಭ ಭೇರುಂಡನಾಗಿದ್ದನೆಂದೂ ಈ ಮಹಾಕವಿಯ ಖ್ಯಾತಿಯನ್ನು ಹೊಯ್ಸಳ ನರಸಿಂಹ ಬಲ್ಲಾಳನ ಮಂತ್ರಿ ಕೆರೆಯ ಪದ್ಮರಸರ ಅಪೇಕ್ಷೆಯಂತೆ ದೋರಸಮುದ್ರಕ್ಕೆ ಬಂದು ಕೆಲವು ಕಲವಿದ್ದು ಬೇಲೂರಿನಲ್ಲಿ[1] ಬಯಲಾದಂತೆ ಇತಿಹಾಸ ತಿಳಿಸುತ್ತದೆ. ಬೇಲೂರಿನಲ್ಲಿ 'ಮಹಾಕವಿ ರಾಘವಾಂಕನ ಸಮಾಧಿ' ಇದೆ.

ಮಹಾಕವಿ ರಾಘವಾಂಕ ಸಿದ್ಧರಾಮ ಚಾರಿತ್ರವನ್ನು "ನೆಟ್ಟಕಲ್ಲೆನಿಸದೆ ಇಳೆಯೊಳಗೆ ಸುಳಿವ ಶಾಸನವೆನಿಸಿ ಪೇಳ್ವೆನೀ ಸತ್ಕೃತಿಯನು[2] ಎಂದು ಉಲ್ಲೇಖಿಸಿ ಕಥಾನಾಯಕ ಮಾತಿನಲ್ಲಿ ಸಾಕ್ಷಾತ್ ಪರಶಿವ 'ಶಿವನ ಪರಮಾವತಾರವೇ ಶಿವ ಸಿದ್ಧರಾಮ' ಎಂದಿದ್ದಾನೆ. ಸಿದ್ಧರಾಮ ಕರ್ಮಯೋಗಿ ಎನ್ನುವುದನ್ನು ಚೆನ್ನಾಗಿ ನಿರೂಪಿಸಿದ್ದಾನೆ." ಶಿವಯೋಗಿಯ ಶರೀರಂ ವೃಥಾ ಸವೆಯಲಾಗದು ಆನುಗೊಂಬನಿತು ಕಾಯಕಂ ನಡೆಯುತಿರಬೇಕು[3] ಎಂದು ಸೊನ್ನಲಿಗೆ ತಿರುವಳ್ಳಿ ದಾರಿದ್ರ್ಯದಾಗರವಾಗಿದ್ದದನ್ನು ಸಿರಿಗೆ ಸಿಂಗರ ಸರ್ವವಿದ್ಯಾವಾಸ. ಶಿವಲಿಂಗಬೀಡು, ಪುಣ್ಯದ ಪುಂಜ, ಮುಕ್ತಿಯ ಕ್ಷೇತ್ರ, ಧರ್ಮದ ದಾನಿಯಾಯಿತು ಶಿವಸಿದ್ಧರಾಮನವರಿಂದ.

ಮಹಾಕವಿ ರಾಘವಾಂಕನ ಸಿದ್ಧರಾಮೇಶ್ವರರು ""ಕುಡಿಯರ ಕುಲಶಿರೋಮಣಿಯ ಮಗ ಎಂದು ಚಿತ್ರಿಸಿದ್ದಾನೆ". ಧರೆಯ ಕುಡಿಯರ ಕುಲಶಿರೋಮಣಿಗಳೆನಿಪ ಗೌಡರ ಬಸಿರೊಳು ಒಗೆದ ಸಮುಹೂರ್ತದೊಳು ತಂದೆ ಬಾಲಂಗೆ ಪೆಸರ ಮೊರಡಿಯ ಮುದ್ದಾನೆಂದಿಟ್ಟರು... ಸುಗ್ಗವ್ವೆಗೆ ಅನುರೂಪನಪ್ಪ ಮೊರಡಿಯ ಮುದ್ದುಗೌಡನು ಪತಿಯಾಗೆ ವನಿತೆಯ್ಯೆದಾರು ಸೂಲಂಗೆಲಿದಳು ತನ್ನ ತನುವಿನ ಐದಾರು ಗುಣಂಗಳನು ಗೆಲಿದಂತೆ ಎಂದಿದ್ದಾನೆ. ಅಂದರೆ ಶ್ರೀ ಗುರು ಸಿದ್ಧರಾಮೇಶ್ವರರು ಕುಡಿಯರ ಮುದ್ದುಗೌಡರ ಎಂಟನೆಯಮಗ. ಈಗಾಗಲೇ ಅವರಿಗೆ ಏಳು ಜನ ಮಕ್ಕಳಿದ್ದರು. ಅವರಲ್ಲಿ ಹಿರಿಯ ಮಗನೆ ತುರುಬಿನ ಬೊಮ್ಮಗೌಡ (ಮಾರೇಗೌಡ) ಮತ್ತು ಆರು ಜನ ತಮ್ಮಂದಿರು ಶ್ರೀ ಗುರು ಸಿದ್ದರಾಮೇಶ್ವರರ ಅನುಗ್ರಹ ಪಡೆದು ಮುಂದೆ ಕರ್ನಾಟಕದಲ್ಲಿ ರಾಜ್ಯಸ್ಥಾಪನೆ ಮಾಡಿದರು. ಅದೇ ಏಳುನಾಡು, ಮಹಾನಾಡು ಎಂದು ಪ್ರಸಿದ್ಧವಾದವು.

ಮಹಾಕವಿ ರಾಘವಾಂಕನ ದೃಷ್ಟಿಯಲ್ಲಿ ಶ್ರೀ ಗುರು ಸಿದ್ಧರಾಮೇಶ್ವರರು ಪವಾಡ ಪುರುಷರಲ್ಲ ಶಿವನ ಅನುಭವವನ್ನು ಪಡೆದಿದ್ದು ಸಿದ್ದನೂ ಸಾಧಕನೂ ಹೌದು, ಸಾಕಾರನಿಷ್ಠೆ, ಭೂತಂಗಳೊಳು ಅನುಕಂಪೆಗಳೇ ಅವರ ಜೀವನದ ಸಾರ, ದೇವಾಲಯ ನಿರ್ಮಾಣ, ಲಿಂಗಪ್ರತಿಷ್ಠೆ, ಕ್ಷೇತ್ರ ಪರಿಕಲ್ಪನೆ, ರುದ್ರಾಭಿಷೇಕ, ಯೋಗಮಜ್ಜನ, ದಾನವಿನಿಯೋಗ, ಸಾಮೂಹಿಕ ಮದುವೆ, ವಿದ್ಯಾರ್ಥಿನಿಲಯ, ಕೆರೆ ಕಟ್ಟಿಸುವುದು, ಬಾವಿ ತೋಡಿಸುವುದು, ಕಷ್ಟದಲ್ಲಿ ಸಿಕ್ಕಿದವರನ್ನು ಮುಕ್ತಗೊಳಿಸುವುದು, ಶಿಷ್ಟರನ್ನು ರಕ್ಷಿಸುವುದು, ಪಶುಪಕ್ಷಿ, ಕ್ರಿಮಿಕೀಟಗಳೂ ಬಾಳಿನಲ್ಲಿ ಗುರಿ ಮೂಡಿಸುವುದೇ ಸಿದ್ಧರಾಮರ ಬಾಳಿನ ಮುಡಿಯ ಮಾಣಿಕ್ಯಗಳು.

ಪರಮ ಸುಖವಳವಟ್ಟು, ದುರ್ನೀತಿಯಂ ಬಿಟ್ಟು, ಶಂಕರ ಭಕ್ತಿ ಮನದೊಳ್ ನೆಟ್ಟು ಧನ್ಯತೆಯ ಕಟ್ಟೆಯಂ ಕಟ್ಟು ಎಂದು ಸಿದ್ಧರು ಸಂದೇಶ ಸಾರಿದ್ದಾರೆ. ಸಿದ್ಧರಾಮನು ಕರುಣಾಕರ, ದಯಾನಿಧಿ, ಮಮತೆಯ ಸಮಗ್ರ, ಭೂತಸ್ನೇಹಿ, ಪ್ರಾಣಿಪ್ರಿಯ ಎಂದೆಲ್ಲಾ ರಾಘವಾಂಕ ಕವಿ ತನ್ನ ಕಾವ್ಯದಲ್ಲಿ ಚಿತ್ರಿಸಿದ್ದಾರೆ.

ಮಹಾಕವಿ ರಾಘವಾಂಕನು ಸಿದ್ಧರಾಮ ಚಾರಿತ್ರ್ಯದಲ್ಲಿ ವ್ಯಾಳಿ, ಕೋರಾಂಟ, ನಾಗಾರ್ಜುನ, ರತ್ನಘೋಷ, ಮರುಜೀವಣಿ, ರುದ್ರಗಮ್ಮರಿ, ಉದಯತಾಳು, ಮೋಹನೀಗಜ, ಶೈಲೋದಕ, ಕುಮಾರಧಾರೆ, ಪಾಪಿಯಕೂಸು, ಕತ್ತರಿವಾಣಿ, ನಂಜಿನೆರಳು, ಬಿಲ್ವದಾರ ಮೊದಲಾದ ವಿಚಾರದೊಡನೆ ಅಷ್ಟಕ ಕ್ಷೇತ್ರ ಹಾಡಿದನೊಂದು ಗುರುವಚನ, ಶಿರದಿಂ ಪಾಳಮಂ ಗೆಲಿದು, ಪಾಲ್ಗೆಪೀರವಾರ್ಧಿಯಂ ಪಡೆದು ಎಂಬ ಸುಸಂದರ್ಭಗಳೊಡನೆ ಕೇತಾರಗುರು, ಹಾವಿನಹಾಳ ಕಲ್ಲಯ್ಯ ಮತ್ತು ಸೊಡ್ಡಳ ಬಾಚರಸ ವಚನಕಾರರನ್ನು ತಂದಿದ್ದಾರೆ.

ಅತಿಜಡರಪ್ಪ ಮಾನವರನು ಇನ್ನೇನೆಂಬೆ ಆತನುಹನು ಇರಲು ಅನ್ಯದೈವಗಳನೋನುವರೆ ಪತಿತರಿರ ನಿಮ್ಮ ಮನೆಯೊಳು ನಿಲುವನಲ್ಲೆಂದು ಲಿಂಗಮಂ ಧರಿಸಿ ಪಿಡಿದು ಗತಿಗೆಟ್ಟು ಬೇರಿನ್ನು ದೈವವೆಂದೆನ್ನದಿರಿ ಧೃತಿಗೆಟ್ಟಿ ಬೇರಿನ್ನು ದೈವವೆಂದೆನ್ನದಿರಿ ಧೃತಿಗೆಟ್ಟು ಬೇರಿನ್ನು ದೈವವೆಂದೆನ್ನದಿರಿ ಆತನುಹರ ಮಲ್ಲಿಕಾರ್ಜುನನು ಈವನೆಂದು ಹಾಡಿದನೊಂದು ಗುರುವಚನ[4] ಸಮಾಧಿ ಸಂಚಳಿಸಿ ಕಣ್ದೆರೆಯುತಾಗಳು ಹಾಡಿದಂಗೀತವ[5] ಹರಣ ಬಂದಿಂತೆನ್ನ ಮೇಲು ವಾಯ್ದಡೆ ಬಳಿಕ ಕರಹರಿಸಿ ನಾನೆಂತು ನಿಲುವೆ ಹೇಳೈ ತಂದೆ ಹರ ಕಪಿಲಸಿದ್ಧಮಲ್ಲಿಯಯ್ಯ ಎಂದು ಹಾಡಿದನು[6] ಅತಿಭಂಗವೆನ್ನವೀರಕ್ಕೆ ಸಿದ್ಧೇಂದ್ರಯೆನೆ ಧೃತಿಗುಂದಬೇಡ ನಿನ್ನೂಳಿಗದನು ಅಂಬಿಕಾಪತಿಯೈದಿಸುವನು ಎನುತ ಆತನಂ ಕಳಿಪಿ ಗುರುವಚನಮಂ ಹಾಡುತಿರಲು[7] ಕಪಿಲಸಿದ್ಧಮಲ್ಲಯ್ಯ ಹಿರಿದೆನಿಪ ಘೋರ ಸಂಸಾರದಾರಣ್ಯದೊಳು ಹರವರಿಯ ಕಾಂನೆಂದೆಂಬ ಬೇಂಟೆಯ ಬೇಡನುರವಣೆಯ ಅನ್ಯಾಯವ ಮಾಣಿಸೈ ಎಂಬ ಗೀತವಹಾಡಿ ಸುಖದೊಳಿರಲು[8] ಅಯ್ಯ ಕೇಳಯ್ಯ ನೀನೊಡ್ಡಿದೊಡ್ಡಿದ ಸಮಂ ಮೆಯ್ಯನಿರಿದಿರಿದು ಕಿರಿಕಿರಿದಾಗಿ ಕಡಿದಡಂ ಅಯ್ಯಯೆಂದಳುಕೆ ಹಿರಿಹಿರಿದಾಗೆ ನೆನವೆ ಕೇಳಯ್ಯ ಅಯ್ಯಾಯೆನುತ ಕಯ್ಯಲಾಕುಳವನಂದಲುಗುತ್ತ ಹಾಡುತ್ತಲೊಯ್ಯನೀ ಕಾಮವಿವಳಿಗೆ ಜೀವ ನಿಮಗೆಂದು ಸಯ್ಯಮಿವ್ರತನಿರತ ಶ್ರೀ ಸಿದ್ಧರಾಮನಾಥಂ ಹಾಡಿದಂ ಗೀತವಂ[9] ದೇಹಮಂ ಬಿಟ್ಟು ಜೀವಮ ಮಲ್ಲಿನಾಥನೆಡೆಗೆ ಹಿಂಡುಗೊಂಡು ಅಡಗುತಿರೆ ನಿತ್ಯ ನೇಮದೊಳಿರ್ದು ಕಂಡು ಸಿದ್ದರ ದೇವನಾ ಜೀವವಂ ಹಿಡಿದುಕೊಂಡು ಜೀವದ ಹೋಹಬಹ ಗೀತಮಂ ಬಿನ್ನಹಂ ಮಾಡಿ ನಡೆತಂದನು[10] ಹರಮುನ್ನ ಹರಸಿ ಕಟ್ಟಿದ ಲಿಖಿತಪಟ್ಟಮಂ ಪರಿಹರಿಸಿ, ಮತ್ತೊಂದಮಾಡುನೀ ಸಾಮರ್ಥ್ಯ ಹರಿಯಜರಿಗಾಗದೆನೆ ಸುರರ ನರರಳೆವೆ ಮಲ್ಲಯ್ಯನೇ ಬಲ್ಲನೆಂಬ ಗುರುವಚನಮಂಕೊಂಡು ಮರಳಿಯವರ್ಗರಿಪಿ ಬಾಚರಸ ಸೊಡ್ಡಳ ಲಿಂಗದೊಳು ಸಮದನೆಂಬುದರ ನಿರುಪಮನು ಕಂಡು ಮತ್ತೊಂದು ವಚನವ ಹಾಡಿ ಸುಖಮಿರ್ಪ ಕಾಲದೊಳಗೆ[11] ಜಡರ ನಡುವಿರಲು ಅವರ ಸಂಗದಿಂ (ಲೋಹಸಂಗದಿಂ ಕಿಚ್ಚು ಬಡಿಹಡೆದುದೆಂಬಂತೆ) ಕಾಯಗುಣವಿಡಿದು ಬಳಲುವರೆನಲು ನಸುನಗುತ ಗಾಳಿಯಂ ಹುಡಿ ಹಿಡಿವುದೇ ರಸನೆ ಹೆಡಸುವುದೇ ಆಲಿಯಂಜನವ ಬಳಕೊಂಡಿರ್ಪುದೆ ಪೊಡವಿಯೊಳು ಶಿವಯೋಗಿ ಸುಳಿದಡಂ ನೀರ ನಡುಮಿಡಿದ ಕಂಜದ ತೆರದಿ ಭಕ್ತಿಮುಕ್ತನು ಅಲ್ಲಮ್ಯಡಮೂರ್ತಿಗೆ ಅಗ್ರನೆಂದೆನುತ ಹಾಡಿದನು ಗುರುವಚನದ ಅಲ್ಲಮ ಮೆಚ್ಚಲು[12] ಎಂಬ ಮಹಾಕವಿ ರಾಘವಾಂಕನ ಮಾತಿನ ಪ್ರಕಾರ ಶ್ರೀ ಗಳುರು ಸಿದ್ಧರಾಮೇಶ್ವರರು ಸುಮಾರು ವಚನಗಳನ್ನು ಹಾಡಿರಬೇಕು.

ಅರವತ್ತೆಂಟು ಸಾವಿರ ವಚನಂಗಳ ಹಾಡಿ ಹಾಡಿ ಸೋತಿತೆನ್ನ ಮನ ನೋಡಯ್ಯ, ಹಾಡುವುದೊಂದೇ ವಚನ, ನೋಡುವುದೊಂದೇ ವಚನ, ವಿಷಯವ ಬಿಟ್ಟು ನಿರ್ವಿಷಯವಾಗುವುದೊಂದೆ ವಚನ ಕಪಿಲಸಿದ್ಧಮಲ್ಲೇಶನಲ್ಲಿ[13] ಎಂಬ ವಚನದಿಂದ ಶ್ರೀ ಗುರು ಸಿದ್ಧರಾಮೇಶ್ವರರು ಅರುವತ್ತೆಂಟು ಸಾವಿರ ವಚನ ಹಾಡಿದಂತೆ ತಿಳಿದುಬರುತ್ತದೆ. ನಮಗೆ ಸಿಕ್ಕಿರುವುದು ಇದುವರೆಗೆ ಕೇವಲ ಒಂದೂವರೆ ಸಾವಿರ ವಚನಗಳು ಮಾತ್ರ ಇನ್ನೂ ಬಹಳಷ್ಟು ವಚನಗಳು ಲಭ್ಯವಾಗಬೇಕು.

ಮಹಾಕವಿ ರಾಘವಾಂಕನ ಸಿದ್ಧರಾಮ ಚಾರಿತ್ರವನ್ನು ಓದಿದ ಮೇಲೆ ಶ್ರೀ ಗುರು ಸಿದ್ಧರಾಮೇಶ್ವರರು ಶೈವರೇ ಅಥವಾ ಲಿಂಗಾಯತರೇ ಎಂಬ ಪ್ರಶ್ನೆ ತಲೆದೋರುತ್ತದೆ. ಸಿದ್ಧರಾಮರು ಶೈವ ಅಥವಾ ಲಿಂಗಾಯತನಾದರೂ ಕಾವ್ಯಕ್ಕೆ ಯವ ಕುಂದೂ ಬಂದಿಲ್ಲ

ಬದಲಾಗಿ ಅಗ್ಗಳಿಕೆ ಹೆಚ್ಚಾಗಿದೆ. ಇದೊಂದು ಕೊರತೆಯೆಂದು ತಿಳಿದು ಶೂನ್ಯ ಸಂಪಾದನೆಕಾರರು ಚನ್ನಬಸವಣ್ಣನವರಿಂದ ಸಿದ್ಧರಾಮಣ್ಣನವರಿಗೆ ಲಿಂಗಧಾರಣೆ ಮಾಡಿಸಿದ ಪ್ರಸಂಗವನ್ನು ಸೃಷ್ಟಿಸಿಕೊಂಡರು. ಮಹಾಕವಿ ರಾಘವಾಂಕ, ಘಳಿಲನಂತಾ ಗಳೆದ್ದು ಗಗನದೊಳಗೊಂದು ಬೆಳಗು ಮೊಳೆಯಿತ್ತದರ ಬಳಿವಿಡಿದು ಕಣ್ಗೆ ಮಂಗಳಮಪ್ಪ ಶೈತ್ಯ ಪ್ರಭಾಪಟಲದಿಂದ ನಾನಾ ದಿವ್ಯನಾದದಿಂದ ಬಳಸಿ ಪರುಷದ ಕರಂಡಗೆಯೊಳಣಿಮಾದಿ ಗುಣಮಿಳಿತ ಸೆಜ್ಜೆಯೊಳಮಲ ಲಿಂಗವಿಳಿ ಸಿದ್ಧಕುಲ ತಿಲಕನಿರ್ದ ಮಂದಾರಗುಲ್ಮದ ತಳದ ಭೂಮಿಯೊಳು[14] ಮನಮೊಸೆದು ಧರ್ಮಾರ್ಥಕಾಮ ಮೋಹಂಗಳೆಂದೆನಿಪ ಕನ್ನಿಕೆಯರಂ ಸಿದ್ಧರಾಮವರಂಗೆ ಘನಲಿಂಗ ವೀವಮದುವೆಗೆ ಹಿಡಿದ ಜವನಿಕೆಯ ಸೆರಗು ತೆರಹಪ್ಪಂದದಿಂ ವಿನಯದಿಂದ ಆದಿಲಿಂಗದ ಸೆಜ್ಜೆಯರಳ್ವಂತೆ ವಿನುತಧರೆ ಹಿಗ್ಗಿ ಸರಿದಿಂಬುಗೊಡೆ[15] ಫಳದ ಮೇಲಣ ಸೊಪ್ಪು ತಿರುಳರಸಮಂ ತೆಗೆಯೆ ಬಳಿಕೊಳಗೆ ಬೀಜ ಸ್ವಯಂಭುವಾಗಿಪ್ಪಂತೆ ಬಳಸಿ ಲಿಂಗದ ಮುಖಕೆ ಕವಿದಡ್ಡವಾದ ಕಪ್ಪಳಿಕೆ ಹೊರೆತೆರೆಸೆರೆಗಳ ಅಳವಟ್ಟ ಸೆಜ್ಜೆಗಳೆವಂತೆ ಪಿಂಗಿಸಿಕಳೆದು ತೊಳಪ ಸ್ವಯಂಭು ಲಿಂಗವ ಕಂಡರಾಗ ನಿರ್ಮಳ ಲಿಂಗದೊಳು ಕಠಿನಮಂ ನುಡಿದವಂಗೆ ಆಗದಿಹುದೆ ನಾಯಕನರಕ[16] ಮಗಮಗಿಪ ಕರ್ಪೂರ ಕಸ್ತುರಿಯ ಪರಿಮಳದ ಸೊಗಸೆಸೆವ ಪೆಟ್ಟಿಗೆಯ ನಡುವೆ ಗದ್ದುಗೆಯಿಕ್ಕೆ ಬಿಗಿಬಿಗಿದು ಸುತ್ತುವೊತ್ತುದ ಮೊಳ್ಕೆಯಿಂ ಹಂಸತೂಳದ ಮೃದುವಲೇಪಿಸಿ ಮಿಗೆ ರಂಜಿಸುವ ಪರುಷ ಪುರುಷರೂಪಿನ ಲಿಂಗ ಸೊಗಸು ಕರಡಗೆಯೊಳಿಡುವಂತಿಟ್ಟು ಬಳಿಕ ಮೂಜಗಭರಿತವನು ಅರಿಯದಲ್ಲಿರ್ದನೆಂದು ಮುದ್ರಿಸಿ ಹೂಡಿ ನಡೆಗೊಂಡರು[17] ಎಂಬ ಮಾತುಗಳಿಂದ ಮಹೇಶ್ವರ (4–5) ಜಂಗಮ (4–4) ಕಾಯಕ (4–23) ಶರಣ (8–97), ಭವಿ (8–3) ಮೊದಲಾದ ಲಿಂಗಾಯತ ಪರಿಭಾಷೆಗಳು ಅಲ್ಲಮಪ್ರಭು ಸೊಡ್ಡಳ ಬಾಚರಸರು ಹಾವಿನಹಾಳಕಲ್ಲಯ್ಯ ಮೊದಲಾದ ಶರಣರ ಉಲ್ಲೇಖ ಈ ಎಲ್ಲ ಕಾರಣಗಳಿಂದ ಸಿದ್ಧರಾಮೇಶ್ವರರು ಲಿಂಗಾಯತರು, ಸಿದ್ಧರಾಮ ಲಿಂಗವಂತಿಕೆಯ ಬಗ್ಗೆ ಇದ್ದ ಸಂದೇಹ, ಸಂಶಯ ನಿವಾರಣೆಯಾಗುತ್ತದೆ. ರಾಘವಾಂಕನು ಚಿತ್ರಿಸಿರುವ ಸಿದ್ಧರಾಮನ ಶುದ್ಧ, ಸಿದ್ಧ ಮತ್ತು ಪ್ರಸಿದ್ಧ ಲಿಂಗಾಯತನು, ಲಿಂಗಾಯತ ತತ್ವ ಅವ ಜನ್ಮಸಿದ್ಧಹಕ್ಕು ಎಂಬುದಂತೂ ಸಿದ್ಧವಾಯಿತು. "ಧರೆ ಸೊನ್ನಲಿಗೆ ಪುರ ಕೈಲಾಸವು, ಜಗದ್ಗುರು ಸಿದ್ಧರಾಮೇಶ್ವರನಂ ಮೆರೆವಂಗ ಉಡ್ಡರು ಗಣೇಶ್ವರರು ಅಖೀಲಜನ ಅವರದು ಅವಸತಿಯರು ರುದ್ರಕನ್ಯೆಯರು ನೆರೆದ ಶಿವಭವನಂಗಳು ಅಷ್ಟಷಷ್ಟಿಕ್ಷೇತ್ರವಾಗುವಂತೆ ಜಗದಗುರು ಸಿದ್ಧರಾಮನಾಥಂ ಮನುಜನಂ ಕಾರಣ ರುದ್ರನಾಗಿ ಉದ್ಧಾರ ಮಾಡಿದಂಥೆ ಕವಿ ಚಿತ್ರಿಸಿದ್ದಾರೆ.[18]

ನಾರು ಬೇರು ಅಂಜನಂ ಘಟಿಕೆ ಮೂಲಿಕೆ ಬಿಲ್ವಾರ ರಸಸಿದ್ಧಿ ಧಾತುವಾದ ವಶ್ಯ ಕುಟಿಲಾರಾಧನ ವಲಿತ ಕಲಿತನಾಶಂ ಕಾಲವಂಚನಾಭ್ಯಾಸಯೋಗಂ ಮಾರಣಾದಿ ವಿಕರ್ಮ ಮಂತ್ರಯಂತ್ರತಂತ್ರಸಾರ ಪರಕಾಯ ಪರವೇಶಂ ಬಯಸುವ ವಿಕಾರಿಸಿದ್ಧರು ಸರಿಯೆ ಸಿದ್ಧರಾಮಂಗೆ ಶಿವಸಿದ್ಧಕುಲ ಕಮಲರವಿಗೆ[19] ಎಂದ ಮಹಾಕವಿರಾಘವನು "ಭಸಿತವೇ ಘಟಿಕೆ ರುದ್ರಾಕ್ಷಿ ಮೂಲಿಕೆ ಸಿದ್ಧರಸ ಮೂಲಮಂತ್ರ ನಿಜಹಸ್ತ ಮೂಷಿಕ ನಿಯಾಮಿಸುವ ಆಜ್ಞೆ ಇಂಧನಂ ಜ್ಞಾನಾಗ್ನಿ ಅಗ್ನಿಯಪದೇಶ ಕಣ್ಣಿಡುವುದಾಗಿ ಹೊಸ ಪಾಪಗಂಧ ಕಾಳಿಕೆ ಕೆಡಲು ಭವಿಲೋಹ ವಿಸರಮಂ ಕಳೆದಾ ಮಹಾಮಹೇಶ್ವರನೆನಿಪ ಮಿಸುನಿಯಂ ಮಾಡಿ ರುದ್ರಂಗೆ ಮಾರುವ ಸಿದ್ಧನಾ ಸಿದ್ಧರಾಮಯ್ಯನು"[20] ಎಂದು ಶ್ರೀ ಗುರು ಸಿದ್ಧರಾಮೇಶ್ವರರು ಸಾಮಾನ್ಯ ಸಿದ್ಧನಲ್ಲ ಮಹಾಸಿದ್ಧ, ಸಿದ್ಧರಸಿದ್ಧ ಅವರು ಭವಿಯನ್ನು ಭಕ್ತರೆಂಬ ಚಿನ್ನವಾಗಿಮಾಡಿ ಮಹಾರುದ್ರನಿಗೆ ಮರುತ್ತಿದ್ದರಂತೆ. ಅಂತಹ ಸಿದ್ಧಪುರುಷರು ಶ್ರೀ ಗುರುಸಿದ್ಧರಾಮರು ಎಂದು ಚಿತ್ರಿಸಿದ್ದಾರೆ.

ಮಹಾಕವಿ ರಾಘವಾಂಕನು ಚಿತ್ರಿಸಿರುವ ಬಾಲಕ ಸಿದ್ಧರಾಮರ ಚಿತ್ರವಂತೂ ವಿಶ್ವಪ್ರಸಿದ್ಧವಾದುದು. ಜಗತ್ತಿನ ಯಾವ ಸಾಹಿತ್ಯದಲ್ಲಿಯೂ ಇಂತಹ ಅಪರೂಪದ, ಅಪೂರ್ವವಾದ ಮುಗ್ಧ ಚಿತ್ರ ದೊರೆಯದು. ಬಾಲಕ, ಸಿದ್ಧರಾಮ ಹಿಂದೆ ಹೊಲದಲ್ಲಿ ಕಂಡ ಶಿವಮೂರ್ತಿಯನ್ನು ತೋರಿಸಿ ಎಂದಾಗ ಲಿಂಗಾಕಾರವಂಕಂಡು ಅಡವಿಯೊಳಗೆ ದಾರಿತಪ್ಪಿ ಅಳುವ ಮುಗ್ದನಂತೆ ದಾರಿತಪ್ಪಿ ತಂದೆಬಾ, ಮಲ್ಲಯ್ಯ ಬಾ ಎಂದು ಪೇರಡವಿ, ಗುಹೆ, ಗಿಡು, ಕಮ್ಮಡು, ಹೊದರು, ಬೆಟ್ಟಗುಡ್ಡಗಳಲ್ಲಿ ಮಲ್ಲಯ್ಯ ಎಂದು ಒದರಿ ಕರೆದು ಕರೆದನು ಅವೆಡೆಯೊಳಿರ್ಪೆಯೋ ಮಲ್ಲಯ್ಯ ನೀನಿರ್ಪ ಠಾವೆಂದರುಹಿ ಅಡಗುದರೆ ಎಂದು ಬಾಯಿಬಿಟ್ಟು ಘನ ಸತಮಯನಪ್ಪ ನೀನು ಪರ್ವತದಲ್ಲಿಪ್ಪ ನಿನ್ನ ಕಾಣಲೆಂದಾನು ಇಲ್ಲಿಗೈತಂದೆ ಆದೊಡೆ ಅನಿಮಿತ್ತ ಅಡಗುವರೆ ಹಿಂದೆ ಕಯ್ಯೊಳಗೆ ತೋರಿದ ನಿಜವನು ಎನಗೀಗ ತೋರುವುದ ಇನ್ನೊಮ್ಮೆ ಕರೆವೆನು ಅಲ್ಲಿಂ ಈ ತನುವಂ ರುದ್ರಕಮ್ಮರಿಗೆ ಕುಡುವೆ ಎಂದು ಕೊರಳೆತ್ತಿ ಕೈಮುಗಿದು ನೆಗಪಿಕಣ್ಣಿಂ ಮುಚ್ಚಿಕರುಣಾಬ್ದಿ ಮಲ್ಲಿನಾಥ

ಎಂದೊಡೆ ಓ ಕಂದ ಬಳಲಿದೆಯ ಎನುತ ಎತ್ತಿ ತರ್ಕೈಸಿ ತಲೆದಡವಿ ಮುಂಡಾಡಿನೋಡಿ ಗಿರಿಸುತೆವೆರಸಿ ತೋರಿದ ನಿಜರೂಪವನು ಸಿದ್ಧರಾಮ ಕಂಡು ಹಿಗ್ಗಿ ಹಾರೈಸಿ ಕುಣಿದು ಕುಕಿಲಿರಿದು ಕುಂಬಿಕ್ಕಿ ಚರಣದಲಿ ಬಿದ್ದನು. ಸರ್ವಸಿದ್ಧಿಗೆ ತವರ್ಮನೆಯೆ ನಿಪಲಾಕುಳವನೆತ್ತಿ(ದೊಣ್ಣೆ) ಈ ಕುಮಾರನ ಭಕ್ತಿಜ್ಞಾನವೈರಾಗ್ಯಕ್ಕೆ ಎಣೆಯಪ್ಪ ವೇಷವಾಯ್ತು. ಎಲೆ ಸಿದ್ಧರಾಮಯ್ಯ ನಿನ್ನ ಮನದ ಅರಕೆ ಫಲಿಸಿತು ಇನ್ನೇಳ್ ನಿನ್ನನೆಲೆಗೆ ಪೋಗು ಮಾತಾಪಿತರು ಮಮ್ಮಲ ಮರುಗುತಿಹರು ನಿನ್ನ ಹಿಂದುಗೊಂಡೇ ಬಂದು ನೀಂ ಹಿಡಿದುದಂ ಹಿಡಿದು ಬಿಟ್ಟುದಂ ಬಿಟ್ಟು ನಿಂದಲ್ಲಿ ನಿಂದು ನಡೆದಡೆ ನಡೆದು ಕರೆದೊಡೆ ಓಯೆಂದು ಬೇಡಿತ್ತನಿತ್ತು ಕೊಟ್ಟುದಂಕೊಂಡು ನೀನೆಂದಂತೆ ಮಾಳ್ಪೆ ಎಂದು ಪರಶಿವನಿಂದ ಆದೇಶಪಡೆದ ಸಿದ್ಧರಾಮನ ಚಿತ್ರ ವಿಶ್ವದ ವಿನೂತನವಾದ ವಾಸ್ತವ ಚಿತ್ರ.

ಹೀಗೆ ಶಿವಯೋಗಿ ಕರ್ಮಯೋಗಿ ಕಾಯಕದಲ್ಲಿ ಶ್ರೀ ಗುರುಸಿದ್ಧರಾಮೇಶ್ವರರು “ಕೆರೆಯಂ ಕಟ್ಟಿಸುವ, ಬಾವಿಯಂ ತೆಗೆಸುವ, ದೇವಾಗಾರಮಂ ಮಾಡಿಸು, ಜ್ವರೆಯೊಳ್ ಸಿಕ್ಕಿದ ಅನಾಥರಂ ಬಿಡಿಸು, ಮಿತ್ರರ್ಗೆ ಇಂಬುಗೆಯ್ ಶಿಷ್ಟರಂ ಪೊರೆ” ಎನುತ ಸುಗ್ಗಲಾದೇವಿ ಎಳಮೆಯಲ್ಲಿ ಹಾಲು ಹಾಕಿದ್ದರ ಪರಿಣಾಮವಾಗಿ ಶ್ರೀ ಗುರು ಸಿದ್ಧರಾಮೇಶ್ವರರು ಲೋಕದ ಲೋಕೋಪಕಾರಿ, ಜಗದ ಜನೋಪಕಾರಿ, ವಿಶ್ವದ ವಿಭೂತಿಯಾಗಿ ಮೆರೆದರು.

ಶ್ರೀ ಗುರುಸಿದ್ಧರಾಮೇಶ್ವರರ ಕಲ್ಪನೆ ಮೂರು ಮನೆಗೆ ಒಂದು ಬಾವಿ, ಆರು ಮನೆಗೊಂದು ಶಾಲೆ, ನೂರು ಮನೆಗೊಂದು ಗುಡಿ, ಸಾವಿರ ಮನೆಗೊಂದು ಕೆರೆ, ಲೋಕ ಕಲ್ಯಾಣವೇ ಅವರ ಜೀವನದ ಉಸಿರು. ಆದ್ದರಿಂದಲೇ ಲೋಕದ ಒಡೆಯ, ಜನನಾಯಕ, ಧರ್ಮಪ್ರಭು ವಿಭೂತಿ ಪುರುಷರಾದ ಅವರ ಪೆಸರ್ಗೊಳ್ವುದು ಪುಣ್ಯಕಾರಕವಾದುದು ಅವರನ್ನು ನೆನೆದರೆ ಆಳುರದುಕಿಚ್ಚು, ಮುಟ್ಟದು ವಿಷಾಹಿ ಮಹಾಗುರುವಿದ್ದ ನಾಡು ಬೆಳೆವುದು, ಬೇಡಿದಂತೆ ಮಳೆಕೊಳ್ವುದು ಎನಿಪ್ಪ ಜಸಕ್ಕೆ ನೋಂತ ಶ್ರೀ ಗುರುಸಿದ್ಧರಾಮೇಶ್ವರರ ಸ್ತುತಿಸುವುದು ಸ್ಮರಿಸುವುದು ಪುಣ್ಯಪ್ರದವಾದುದು.

**ಹೀ.ಚಿ. ಶಾಂತವೀರಯ್ಯ**

---

**ಪುಟ 32 ರಿಂದ ಮುಂದುವರೆದಿದೆ.**

ಓದುವವರಿಗೆ ಅಮೂಲ್ಯವಾಗುತ್ತದೆ ಮತ್ತು ಹೊಸ ಓದುಗರನ್ನು ಆಕರ್ಷಿಸುವಲ್ಲಿ ಚುಂಬಕ ಶಕ್ತಿಯೂ ಹೌದು. ಇದೆಲ್ಲವೂ ಸಂಪಾದಕದ್ವಯರ ನಿಂರತರ ಬೌದ್ಧಿಕ ಶ್ರಮದ ಫಲ.

**ಕೃತಿಯ ಭೌತಿಕತೆ :** ಪುಸ್ತಕ ಮಾರಾಟ ಮಳಿಗೆಯಲ್ಲಿ ಕೆಲವೊಂದು ಪುಸ್ತಕಗಳು ಒಂದೇ ನೋಟದಲ್ಲಿ ಆಕರ್ಷಿಸಿ ಬಿಡುತ್ತವೆ. ಬಹುಶಃ ಅಚ್ಚುಕಟ್ಟಾದ ಪುಸ್ತಕ ರಕ್ಷಾಪುಟ ಈ ಭಾವನೆಗೆ ಕಾರಣವಾಗುತ್ತದೆ. ಕೇವಲ ರಕ್ಷಾಪುಟದಿಂದ ಕೃತಿಯು ಶ್ರೇಷ್ಠ ಗುಣಮಟ್ಟದ್ದು ಎಂದು ಹೇಳಲಾಗದು. ಆದರೆ ಗುಣಮಟ್ಟದ ಕೃತಿಗೆ ವ್ಯವಸ್ಥಿತವಾದ ಭೌತಿಕ ಸೌಂದರ್ಯ ಇದ್ದರೆ ಆ ಪುಸ್ತಕದ ಮೌಲ್ಯ ಹೆಚ್ಚಾಗುತ್ತದೆ. ಈ ಮೌಲ್ಯ ನೊಳಂಬರ ಶಾಸನಗಳು ಕೃತಿಗೆ ಸಂದಿದೆ. ಸಂಪಾದಕರು ಪುಸ್ತಕದ ಬೌದ್ಧಿಕ ಶಿಸ್ತಿನ ಜೊತೆಗೆ ಭೌತಿಕ ಶಿಸ್ತಿಗೂ ಪ್ರಾಮುಖ್ಯತೆ ಕೊಟ್ಟಿದ್ದಾರೆ. ಆಧುನಿಕ ಪುಸ್ತಕ ವಿನ್ಯಾಸದ ಮಾದರಿ, ಸುವ್ಯವಸ್ಥಿತ ಅಕ್ಷರ ಜೋಡಣೆ, ಚಂದದ ಪುಟವಿನ್ಯಾಸ, ಪದಗಳ ಮಧ್ಯದ ನಿಯಮಿತ ಸ್ಥಳ, ಛಾಯಾಚಿತ್ರಗಳ ಉತ್ಕೃಷ್ಟ ಮುದ್ರಣ, ರಕ್ಷಾಪುಟಗಳ ಹಿನ್ನೆಲೆಯಲ್ಲಿ ನೊಳಂಬರ ಶಾಸನಗಳ, ಶಿಲ್ಪಗಳ ಬಳಕೆ, ಮುದ್ರಣಕ್ಕೆ ಬಳಸಿದ ಕಾಗದ, ಪುಸ್ತಕದ ಕಡಿಮೆ ಭಾರ ಹೀಗೆ ಎಲ್ಲ ವಲಯಗಳಲ್ಲೂ ಸಂಪಾದಕರು ಪುಸ್ತಕಗದ ಗುಣಮಟ್ಟವನ್ನು ಹೆಚ್ಚಿಸಿದ್ದಾರೆ.

ಶಾಸನ ಸಂಪುಟ ಹೀಗೇಕಿದೆ ಎನ್ನುವ ಬದಲು ಹೀಗೆ ಇರಬೇಕು ಎನ್ನುವುದನ್ನು “ನೊಳಂಬರ ಶಾಸನಗಳು” ಸಂಪುಟದ ಮೂಲಕ ಪ್ರೊ. ಡಿ.ವಿ.ಪರಮಶಿವಮೂರ್ತಿ ಯವರು ಮತ್ತು ಡಿ. ಸಿದ್ಧಗಂಗಯ್ಯ ಅವರು ತೋರಿಸಿಕೊಟ್ಟಿದ್ದಾರೆ. ಈ ಕೃತಿಯು ಸೃಜನಶೀಲ ಕೃತಿಗಳಿಗೆ ಸಮಾನವಾಗಿ ನಿಲ್ಲಬಲ್ಲ ಶ್ರೇಷ್ಠ ಮಾದರಿಯ ಗ್ರಂಥ ಎನ್ನುವುದರಲ್ಲಿ ಅನುಮಾನಕ್ಕೆ ಎಡೆಯಿಲ್ಲ. ಆಳವಾದ ಅಧ್ಯಯನ, ನಿರಂತರ ಪರಿಶ್ರಮದ ಫಲ ಈ ಕೀರ್ತಿಗೆ ಕಾರಣ.

(ಕೃಪೆ : ಶಾಸನ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.)

**ಡಾ. ರವಿಕುಮಾರ .ಕೆ ನವಲಗುಂದ**
ಉಪನ್ಯಾಸಕರು, ದಾವಣಗೆರೆ.

# ಶ್ರೀ ವೀರಶೈವ ಗುರುಕುಲ ವಿದ್ಯಾರ್ಥಿ ನಿಲಯ, ತುಮಕೂರು

ತುಮಕೂರು ಜಿಲ್ಲಾ ಕೇಂದ್ರದಲ್ಲಿರುವ ಶ್ರೀ ಗುರುಕುಲ ವಿದ್ಯಾರ್ಥಿ ನಿಲಯ ನೊಳಂಬ ಸಮುದಾಯಕ್ಕೆ ಸೇರಿದ್ದು 1949 ರಲ್ಲಿ ಪ್ರಾರಂಭವಾಯಿತು. 24-11-2024 ರಂದು ಈ ಸಂಸ್ಥೆಯಿಂದ ಸ್ಥಾಪಿಸಲ್ಪಟ್ಟ 'ಗುರುಕುಲ ಆರ್ಕೆಡ್' ವಾಣಿಜ್ಯ ಸಂಕೀರ್ಣವನ್ನು ಮಾನ್ಯ ಕೇಂದ್ರ ರೈಲ್ವೆ ಮತ್ತು ಜಲಶಕ್ತಿಯ ರಾಜ್ಯಖಾತೆಯ ಸಚಿವರಾದ ವಿ. ಸೋಮಣ್ಣ ನವರಿಂದ ಉದ್ಘಾಟನೆಗೊಂಡ ಈ ಸಂಸ್ಥೆ 75 ವರ್ಷಗಳ ಸವಿನೆನಪಿಗಾಗಿ 'ಗುರುಶ್ರೀ' ಎಂಬ ನೆನಪಿನ ಸ್ಮರಣ ಸಂಚಿಕೆಯನ್ನು ನನ್ನ ಸಂಪಾದಕತ್ವದಲ್ಲಿ ಹೊರತಂದಿದೆ. ಸ್ಮರಣ ಸಂಚಿಕೆಯಲ್ಲಿ ಜಿ.ಆರ್. ನಂಜುಂಡಯ್ಯನವರು ಬರೆದಿರುವ ಲೇಖನದಲ್ಲಿ ಈ ವಿದ್ಯಾರ್ಥಿ ನಿಲಯದ ಹಿನ್ನೋಟದ ದಾಖಲೆಗಳು, ಆಧಾರಗಳು ಅಸ್ಪಷ್ಟವಾಗಿದ್ದನ್ನು ಆಯಾ ಕಾಲಾನುಕ್ರಮದ ಆಧಾರದಲ್ಲಿ ಸ್ಪಷ್ಟವಾಗಿ ತಮ್ಮ ಪರಿಶ್ರಮದಿಂದ ಶಾಶ್ವತವಾಗಿ ದಾಖಲಿಸಿಕೊಟ್ಟಿರುವುದು ಈ ಸಂಚಿಕೆಯ ವಿಶೇಷ. ವಿದ್ಯಾರ್ಥಿ ನಿಲಯ ನಡೆದು ಬಂದ ದಾರಿಯ ಫೋಟೋಗಳು ದಾಖಲಾಗಿ ಸಂಚಿಕೆ ವಿಶೇಷ ಲೇಖನಗಳೊಂದಿಗೆ ಅದರ ಇತಿಹಾಸವನ್ನು ಉಳಿಸಿಕೊಳ್ಳಲು ಅನುಕೂಲವಾಗಿದೆ ಎಂದೇ ಭಾವಿಸಬಹುದು.

**ಹೋರಾಟದ ಹೆಜ್ಜೆಯ ಗುರುತುಗಳು :** 1949ರಲ್ಲಿ ಶ್ರೀ ವೀರಶೈವ ಗುರುಕುಲ ವಿದ್ಯಾರ್ಥಿ ನಿಲಯಕ್ಕೆ ಆಗಿನ ತುಮಕೂರು ಪುರಸಭೆಯ ಅಧ್ಯಕ್ಷರಾಗಿದ್ದ ಶ್ರೀ ಬಿ.ಸಿ. ನಂಜುಂಡಯ್ಯನವರು ತುಮಕೂರು ವಿದ್ಯಾ ನಗರವಾಗಿ ಬೆಳೆಯಬೇಕೆಂಬ ಮಹದಾಸೆಯಿಂದ ಸಿದ್ಧಗಂಗಾ ಬಡಾವಣೆ ಬಿ.ಎಚ್. ರಸ್ತೆಯಲ್ಲಿ 200/110 ಅಡಿಗಳ ನಿವೇಶನವನ್ನು ಮಂಜೂರು ಮಾಡಿತು. ಗಂಗಸಂದ್ರದ ಶ್ರೀ ಬೆಟ್ಟಲಿಂಗೇಗೌಡರ ಹೆಸರಿನಲ್ಲಿದ್ದ ನಿವೇಶನವನ್ನು ವಿದ್ಯಾರ್ಥಿ ನಿಲಯದ ಹೆಸರಿಗೆ ವರ್ಗಾಯಿಸಿಕೊಂಡು ಸಮಾಜದ ಮುಖಂಡರಾಗಿದ್ದ ಸಾಗರನಳ್ಳಿರೇವಣ್ಣನವರು, ಜಿ.ಎನ್. ಪುಟ್ಟಪ್ಪನವರು, ನ್ಯಾಯವಾದಿಗಳಾಗಿದ್ದ ಎನ್. ಚನ್ನಪ್ಪನವರು, ಕುರಂಕೋಟೆ ಸಿದ್ಧಲಿಂಗಪ್ಪನವರು, ಬಿ.ವಿ. ಶಂಭುಲಿಂಗಪ್ಪನವರು, ಹಾರ್ನಹಳ್ಳಿ ಚನ್ನಬಸವಣ್ಣನವರು, ಎಸ್. ಮಲ್ಲಿಕಾರ್ಜುನಯ್ಯನವರು, ಗಂಜಲಗುಂಟೆ ಜಿ.ಎಂ. ಚಿಕ್ಕವೀರಣ್ಣನವರು, ಇಂಜಿನಿಯರ್ ಆಗಿದ್ದ ಎಸ್. ಮಹದೇವಯ್ಯನವರು ಮುಂತಾದ ಹಿರಿಯ ಮುಖಂಡರು ಕೈಗೊಂಡ ತೀರ್ಮಾನದಂತೆ ಶ್ರೀ ವೀರಶೈವ ಗುರುಕುಲ ವಿದ್ಯಾರ್ಥಿನಿಲಯ ಸ್ಥಾಪಿಸಲು ಕಾರಣವಾಯಿತು. 1949 ರಲ್ಲಿ ಚಿಕ್ಕದಾಗಿ ಪ್ರಾರಂಭವಾದ ಶ್ರೀ ಗುರುಕುಲ ವಿದ್ಯಾರ್ಥಿ ನಿಲಯಕ್ಕೆ ನಿವೇಶನ ದೊರಕುವುದಕ್ಕೂ ಮೊದಲು ಇದಕ್ಕೆ ತನ್ನದೇ ಆದ ಸ್ವಂತ ಅಸ್ತಿತ್ವವಿರಲಿಲ್ಲ. ಹೊರಪೇಟೆ, ಶಿರಾಗೇಟ್, ಅಂತ್ಯದಲ್ಲಿ ಲಿ. ಪುಟ್ಟಸಿದ್ದಯ್ಯನವರು ಉಚಿತವಾಗಿ ನೀಡಿದ್ದ ಚಿಕ್ಕಪೇಟೆಯ ಹಿರೇಮಠದ ಎದುರಿಗೆ ಇದ್ದ ಮನೆಯಲ್ಲಿ ಹಾಸ್ಟಲ್ ನಡೆಸಲಾಯಿತು. ಸ್ಥಾಪನಾ ಯೋಜನೆ 1974 ರಿಂದ ಆರಂಭಗೊಂಡಿತು 1983 ರವರೆಗೆ ಇದಕ್ಕೆ ತನ್ನದೇ ಸ್ವಂತ ಕಟ್ಟಡವಿರಲಿಲ್ಲ. ಸುಮಾರು 1974 ರ ಸಮಯದಲ್ಲಿ ನಮ್ಮ ತಾತನವರಾದ ತುರುವೇಕೆರೆ ತಾಲ್ಲೂಕ್ ಮಾಚೇನಹಳ್ಳಿಯ ಸಿ. ಶಿವನಂಜಪ್ಪನವರು ವಿದ್ಯಾರ್ಥಿ ನಿಲಯದ ನಿವೇಶನದಲ್ಲಿ ಮೊದಲಿಗೆ ನಾಲ್ಕು ಕೊಠಡಿಗಳ ಹೆಂಚಿನ ಮನೆಯನ್ನು ಕಟ್ಟಿಸಿಕೊಟ್ಟರು. ಅದರಲ್ಲಿ ವಿದ್ಯಾರ್ಥಿಗಳ ಊಟ, ವಸತಿಗೆ ಅನುಕೂಲ ಕಲ್ಪಿಸಲಾಯಿತು. ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾದ ಹಾಗೆ ಬೇರೆಕಡೆ ವಸತಿ ವ್ಯವಸ್ಥೆಯನ್ನು ಮಾಡಿಕೊಂಡು ವಿದ್ಯಾರ್ಥಿಗಳು ಊಟಕ್ಕೆ ಇದನ್ನೇ ಅವಲಂಬಿಸಿಕೊಂಡಿದ್ದರು. 21-4-1980 ರಲ್ಲಿ 10 ಕೊಠಡಿಗಳ ನಿರ್ಮಾಣಕ್ಕೆ ಸಿದ್ಧಗಂಗಾ ಮಠಾಧೀಶರಾದ ಶ್ರೀ ಶಿವಕುಮಾರ ಸ್ವಾಮೀಜಿಗಳ ಅಮೃತಹಸ್ತದಿಂದ ಶಿಲಾನ್ಯಾಸವಾಗಿ ಅರಂಭವಾಗಿ ಪೂಜ್ಯಶ್ರೀ ಚನ್ನಮಲ್ಲಿಕಾರ್ಜುನ ಮಹಾಸ್ವಾಮಿಯವರ ಅಧ್ಯಕ್ಷತೆಯಲ್ಲಿ ಅಂದಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರಿಂದ ಉದ್ಘಾಟನೆಗೊಂಡಿತು.

ಮುಂದೆ ವಿದ್ಯಾರ್ಥಿ ನಿಲಯಕ್ಕೆ ಓದಲು ಬರುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾದಂತೆ ಅದರ ಕಟ್ಟಡ ನಿರ್ಮಾಣವು ಬೆಳೆಯುತ್ತಾ ಹೋಯಿತು. ಎರಡು ಅಂತಸ್ತಿನ ಕಟ್ಟಡ ನಿರ್ಮಾಣಗೊಂಡು ಹಳ್ಳಿಯ ಭಾಗಗಳಿಂದ ವಿದ್ಯಾರ್ಜನೆಗೆ ಬರುವ ವಿದ್ಯಾರ್ಥಿಗಳಿಗೆ ಸೂಕ್ತ ವ್ಯವಸ್ಥೆ ಕಲ್ಪಿಸಲಾಯಿತು. ತುಮಕೂರು ನಗರ ಬೆಳೆದಂತೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗತೊಡಗಿತು. ತುಮಕೂರು ಬೆಂಗಳೂರು ನಗರಕ್ಕೆ ಹತ್ತಿರವಾಗಿ ವಿದ್ಯಾಕೇಂದ್ರವಾಗಿ ಬೆಳೆಯತೊಡಗಿದಂತೆ ಗುರುಕುಲ ವಿದ್ಯಾರ್ಥಿ ನಿಲಯಕ್ಕೆ ಸೇರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಯಿತು. ಅದನ್ನು1984-85ರಲ್ಲಿ ಮತ್ತಷ್ಟು ವಿಸ್ತರಿಸಿ ಡಿ.ಬಿ.ಸಿದ್ದಪ್ಪನವರು ತಮ್ಮ ಪತ್ನಿ ಶ್ರೀಮತಿ ಪುಟ್ಟತಾಯಮ್ಮನವರ ಹೆಸರಿನಲ್ಲಿ ನಿರ್ಮಿಸಿಕೊಟ್ಟ ಸಭಾಂಗಣ (ಪ್ರಾರ್ಥನಾ ಮಂದಿರ) ಸಾರ್ವಜನಿಕ ಅನುಕೂಲಕ್ಕೆ ತೆರೆದುಕೊಂಡು ತನ್ನ ಶೋಭೆಯನ್ನು ಹೆಚ್ಚು ಮಾಡಿಕೊಂಡಿತು.



**ಸುಶೀಲಾ ಸದಾಶಿವಯ್ಯ**
'ಪ್ರಣವಂ' ಟೂಡಾಕಛೇರಿ ಹಿಂಭಾಗ
1ನೇ ಬ್ಲಾಕ್, 3ನೇ ಮೈನ್,
ಕುವೆಂಪುನಗರ, ತುಮಕೂರು.
ಮೊ : 7019843776

2005 ಜನವರಿಯಲ್ಲಿ ತುಮಕೂರಿನಲ್ಲಿ ನಡೆದ ಶ್ರೀ ಗುರು ಸಿದ್ಧರಾಮೇಶ್ವರ 832ನೇ ಜಯಂತ್ಯೋತ್ಸವದಲ್ಲಿ ಸಮಾಜದ ಹಿರಿಯರು, ಮುಖಂಡರು ಪ್ರತ್ಯೇಕವಾಗಿ ಮಹಿಳಾ ವಿದ್ಯಾರ್ಥಿ ನಿಲಯ ಮಾಡಬೇಕೆಂದು ಎಲ್ಲರ ಸಮ್ಮತವಾದ ಒಪ್ಪಿಗೆ ಪಡೆದು, ಜಿ.ಎನ್. ಬಸವರಾಜಪ್ಪನವರ ಆಡಳಿತ ಮಂಡಳಿ 2005–06 ರಲ್ಲಿ 'ಶ್ರೀ ವೀರಶೈವ ಗುರುಕುಲ ಮಹಿಳಾ ವಿದ್ಯಾರ್ಥಿನಿಯರ ನಿಲಯ'ವನ್ನು ಗಂಗೋತ್ರಿ ಬಡಾವಣೆಯಲ್ಲಿ ಎರಡು ಕಟ್ಟಡಗಳನ್ನು ಬಾಡಿಗೆಗೆ ತೆಗೆದುಕೊಂಡು ಪ್ರಾರಂಭದಲ್ಲಿ 80 ಜನ ವಿದ್ಯಾರ್ಥಿನಿಯರಿಗೆ ಅನುಕೂಲ ಕಲ್ಪಿಸಲಾಯಿತು. ನಂತರ 26/42 ಅಡಿಗಳ ನಿವೇಶನದಲ್ಲಿ 35 ಕೊಠಡಿಗಳ 4 ಅಂತಸ್ತಿನ ಕಟ್ಟಡ ನಿರ್ಮಾಣಗೊಂಡು ಇಲ್ಲಿ ಈಗ 270 ವಿದ್ಯಾರ್ಥಿನಿಯರಿಗೆ ಅವಕಾಶ ಕಲ್ಪಿಸಿಕೊಡಲಾಗಿದೆ. ರಾಜ್ಯದ ನಾನಾ ಭಾಗಗಳಿಂದ ವಿದ್ಯಾರ್ಥಿನಿಯರು ಬಂದು ಸೇರಿದ್ದಾರೆ.

ತುಮಕೂರು ನಗರಕ್ಕೆ ಉನ್ನತ ವ್ಯಾಸಂಗಕ್ಕೆ ಬರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾದಂತೆ ವಿದ್ಯಾರ್ಥಿ ನಿಲಯದ ಪ್ರವೇಶಕ್ಕೆ ಬರುವವರ ಸಂಖ್ಯೆ ಹೆಚ್ಚಾಗಿ ನಿಲಯದ ಬೇಡಿಕೆ ಹೆಚ್ಚಾಯಿತು. ಅದಕ್ಕಾಗಿ ಶಂಕರಪುರಂ ಬಡಾವಣೆಯಲ್ಲಿ 21–6–2017 ರಲ್ಲಿ 4 ಅಂತಸ್ತಿನ ಸ್ವಂತ ಕಟ್ಟಡದಲ್ಲಿ 'ಶ್ರೀ ಬಸವೇಶ್ವರ ಗುರುಕುಲ ವಿದ್ಯಾರ್ಥಿ ನಿಲಯವನ್ನು' ಪ್ರಾರಂಭ ಮಾಡಲಾಯಿತು. ಈ ವಿದ್ಯಾರ್ಥಿ ನಿಲಯ ಸುವ್ಯವಸ್ಥಿತವಾದ ಅನುಕೂಲಗಳನ್ನು ಒಳಗೊಂಡು ವಿಶಾಲವಾಗಿ ಅಧುನಿಕ ರೀತಿಯಲ್ಲಿ ರೂಪುಗೊಂಡಿದೆ. ಉನ್ನತ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ವೈದ್ಯಕೀಯ, ಇಂಜಿನಿಯರಿಂಗ್, ಸ್ನಾತಕೋತ್ತರ ಪದವಿಗಳ ವಿದ್ಯಾರ್ಥಿಗಳಿಗೆ ಇಲ್ಲಿ ಅವಕಾಶ ಕಲ್ಪಿಸಿಕೊಡಲಾಗಿದೆ. ಇಲ್ಲಿ 250 ವಿದ್ಯಾರ್ಥಿಗಳಿಗೆ ವ್ಯವಸ್ಥೆಮಾಡಿಕೊಡಲಾಗಿದೆ.

ನಗರದ ಬಿ.ಎಚ್. ಮುಖ್ಯರಸ್ತೆ ಹೊಂದಿಕೊಂಡಂತಿರುವ ಶ್ರೀ ಗುರುಕುಲ ವಿದ್ಯಾರ್ಥಿ ನಿಲಯದ ಮುಂಭಾಗದಲ್ಲಿ ಮೊದಲಿಗೆ ಸಣ್ಣ ಪುಟ್ಟ ಅಂಗಡಿಗಳು ತಾತ್ಕಾಲಿಕ ವ್ಯವಸ್ಥೆಯಲ್ಲಿದ್ದವು ಅದರಿಂದ ವಿದ್ಯಾರ್ಥಿಗಳಿಗೆ ನಾನಾ ರಿತಿಯಲ್ಲಿ ಆಗುತ್ತಿದ್ದ ತೊಂದರೆ ಮನಗೊಂಡು ಅದನ್ನು ತೆರವುಗೊಳಿಸಲು ದಕ್ಷತೆಯಿಂದ ನಿರ್ವಹಿಸಿ ವಿದ್ಯಾರ್ಥಿ ನಿಲಯದ ಜಾಗವನ್ನು ತಮ್ಮದಾಗಿಸಿಕೊಂಡು, ತಮ್ಮದೇ ಕಟ್ಟಡದಲ್ಲಿ ವಾಣಿಜ್ಯ ಸಂಕೀರ್ಣವನ್ನು ಪ್ರಾರಂಭ ಮಾಡಿದರು. ಇದರಿಂದ ಬರುವ ಬಾಡಿಗೆಯಿಂದ ವಿದ್ಯಾರ್ಥಿ ನಿಲಯಕ್ಕೆ ಆರ್ಥಿಕವಾಗಿ ಅನುಕೂಲವಾಗಿತ್ತು. ನಂತರದ ಕಾಲದಲ್ಲಿ ಬಿ.ಎಚ್. ರಸ್ತೆಯ ಅಗಲೀಕರಣದ ಸಮಯದಲ್ಲಿ ಇದ್ದ ವಾಣಿಜ್ಯ ಸಂಕೀರ್ಣವನ್ನು ನೆಲಸಮ ಮಾಡಲಾಯಿತು. ಆಡಳಿತ ಮಂಡಳಿ ಉಳಿದ 90/45ರ ಜಾಗದಲ್ಲಿ 4 ಅಂತಸ್ಥಿನ ವಾಣಿಜ್ಯ ಸಂಕೀರ್ಣವನ್ನು ನಿರ್ಮಿಸಲಾಗಿದೆ. ಮೊದಲ ಎರಡು ಅಂತಸ್ತುಗಳು ಆಭರಣ ಮಳಿಗೆಗೆ ಬಾಡಿಗೆ ನೀಡಿದ್ದು, ನೆಲ ಅಂತಸ್ಥಿನಲ್ಲಿ ವಾಹನ ನಿಲುಗಡೆಗೆ ಅನುಕೂಲ ಕಲ್ಪಿಸಲಾಗಿದ್ದು, 4ನೇ ಅಂತಸ್ಥಿನಲ್ಲಿ ಗುರುಕುಲ ಸಭಾಂಗಣವನ್ನು ಎಲ್ಲಾ ಸೌಕರ್ಯಗಳ ಜೊತೆಗೆ ಏರ್ ಕಂಡೀಷನ್ ಸೌಲಭ್ಯವನ್ನು ಅಳವಡಿಸಿ ನಿರ್ಮಾಣ ಮಾಡಲಾಗಿದೆ. ಇದರಿಂದ ಬರುವ ಆದಾಯವನ್ನು ವಿದ್ಯಾರ್ಥಿಗಳ ಅನುಕೂಲಕ್ಕೆ ಬೇರೆ ರೀತಿಯಲ್ಲಿ ಉಪಯೋಗಿಸುವ ಅವಕಾಶಗಳಿವೆ.

ವಿದ್ಯಾರ್ಥಿ ನಿಲಯ ಈ ಮಟ್ಟದಲ್ಲಿ ಬೆಳೆಯುವುದಕ್ಕೆ ಇದರ ಹಿಂದೆ ಅನೇಕಾನೇಕ ಹಿರಿಯರು, ಗಣ್ಯರು, ಸಮಾಜ ಬಾಂಧವರು,ದಾನಿಗಳು, ರಾಜಕೀಯ ಮುಖಂಡರ ಆರ್ಥಿಕ ಸಹಕಾರ, ಒತ್ತಾಸೆಗಳು, ಕೈನೀಡಿ ಬೆಂಬಲಿಸಿವೆ. ಅನುದಾನಗಳ ಬೆಂಬಲವೂ ಸಾಕಷ್ಟು ದೊರಕಿದೆ. ಇವರೆಲ್ಲರ ತ್ಯಾಗ, ಶ್ರಮ, ಸಹಕಾರ, ಬೆಂಬಲ ಬಹಳ ದೊಡ್ಡದುಎಂದೇ ಹೇಳಬಹುದು. ಸಾಗರನಹಳ್ಳಿ ರೇವಣ್ಣನವರು, ಜಿ.ಎಸ್. ಶಿವನಂಜಪ್ಪನವರು, ಎಸ್. ಮಲ್ಲಿಕಾರ್ಜುನಯ್ಯನವರು, ಸೊಗಡು ಶಿವಣ್ಣನವರು, ಎಸ್. ಮಹದೇವಯ್ಯನವರು, ಜಿ.ಎಸ್. ಬಸವರಾಜು, ಜ್ಯೋತಿಗಣೇಶ್, ವಿದ್ಯಾರ್ಥಿ ನಿಲಯದ ಅಧ್ಯಕ್ಷರಾಗಿ 21 ವರ್ಷದಿಂದ ಸೇವೆ ಸಲ್ಲಿಸುತ್ತಿರುವ ಜಿ.ಎನ್. ಬಸವರಾಜಪ್ಪನವರ ದೂರದೃಷ್ಠಿ, ಅವಿರತವಾದ ಶ್ರಮ, ಸಂಪತ್ತಿನ ಕ್ರೋಢೀಕರಣದ ಜಾಣ್ಮೆ, ವಿದ್ಯಾರ್ಥಿ ನಿಲಯದ ಪ್ರಗತಿಗೆ ಕಾರಣವಾಗಿದೆ. ಇವರ ಸೇವೆಯನ್ನು ಗುರುತಿಸಿ ಶ್ರೀ ಸಿದ್ಧಗಂಗಾ ಮಠದಿಂದ ಈ ಸಾರಿ ನೀಡುತ್ತಿರುವ 'ಶ್ರೀ ಶಿವಕುಮಾರ ಶ್ರೀ' ಪ್ರಶಸ್ತಿಗೆ ಭಾಜನರಾಗಿದ್ದಾರೆ. ಇವರ ಜೊತೆಗಿನ ಆಡಳಿತ ಮಂಡಳಿಯ ಎಲ್ಲಾ ಸದಸ್ಯರುಗಳು ವಿದ್ಯಾರ್ಥಿ ನಿಲಯದ ಪ್ರಗತಿಗೆ ಕಾರಣಕರ್ತರಾಗಿದ್ದಾರೆ. ಈ ವಿದ್ಯಾರ್ಥಿ ನಿಲಯ ತನ್ನದೇ ದೃಢತೆಯನ್ನು ಪಡೆಯುವ ಮೊದಲು ಇದರ ಜಾಗವನ್ನು ಕಬಳಿಸುವ ಅನೇಕ ಸ್ಥಳೀಯ, ಹೊರಗಿನ ಶಕ್ತಿಗಳ ವಿರುದ್ಧ ಆಡಳಿತ ಮಂಡಳಿ ದಿಟ್ಟವಾಗಿ ನಿಂತು ಸಮಾಜಕ್ಕೆ ಉಳಿಸಿಕೊಡುವಲ್ಲಿ ಶ್ರಮ ಪಟ್ಟಿರುವುದು ಶ್ಲಾಘನೀಯವಾದ ಕಾರ್ಯ. ಸಮಾಜದ ಹೆಸರನ್ನು ಉಳಿಸುವಂತ, ಸಮಾಜಕ್ಕೆ ಉಪಯುಕ್ತವಾದ ಇನ್ನೂ ಹೆಚ್ಚು ಮಹತ್ವಾಕಾಂಕ್ಷೆಯ ಯೋಜನೆಗಳು ಶ್ರೀ ವೀರಶೈವ ಗುರುಕುಲ ವಿದ್ಯಾರ್ಥಿ ನಿಲಯದಿಂದ ಕಾರ್ಯರೂಪಕ್ಕೆ ಬರಲಿ. ಅದರಿಂದ ಈ ಸಮಾಜಕ್ಕೆ ಸದಾ ಒಳಿತಾಗಲಿ.

# ಕರ್ಮಯೋಗಿ ಸಿದ್ಧರಾಮ

ಪ್ರತಿಯೊಬ್ಬ ಶರಣನಿಗೂ ವಿಶಿಷ್ಟ ವ್ಯಕ್ತಿತ್ವ ಇರುವಂತೆ ಆತನ ಅಭಿವ್ಯಕ್ತಿಯು ವಿಶಿಷ್ಟವಾಗಿರುತ್ತದೆ. ಸಮಾಜದಲ್ಲಿನ ತಾರತಮ್ಯಗಳನ್ನು ದೂರೀಕರಿಸುವ ಸತ್ಯಶುದ್ದವಾದ ಎಲ್ಲಾ ಕೆಲಸಗಳನ್ನು ಗೌರವಿಸುವ ಇಹಪರಗಳೊಳಗಿರುವ ಕ್ರಿಯಾತ್ಮಕ ಸಂಬಂಧವನ್ನು ಗುರುತಿಸುವ ಇಂತಹ ಹಲವು ಅಂಶಗಳಲ್ಲಿ ಶರಣರಿಗೆ ಸಮಾನಾ ಭಿಪ್ರಾಯವಿದ್ದುದನ್ನು ನಾವು ಗಮನಿಸಬಹುದು. ಒಬ್ಬೊಬ್ಬ ಶರಣನು ಒಂದೊಂದು ವಿಚಾರದಲ್ಲಿ ಆಸಕ್ತರಾಗಿ ಪ್ರಸಿದ್ದರಾಗುತ್ತಾರೆ. ಇಂತಹ ಪ್ರಸಿದ್ದ ಶರಣರಲ್ಲಿ ಸಿದ್ದರಾಮನು ಕರ್ಮಯೋಗಕ್ಕೆ ಪ್ರಸಿದ್ದನಾಗಿದ್ದನು.

ಸಿದ್ದರಾಮನು ಕರ್ಮಯೋಗಿಯಾಗಿ ಕೆರೆ ಗುಡಿಗಳನ್ನು ಕಟ್ಟಿಸುವ ಸಾಮೂಹಿಕ ವಿವಾಹಗಳನ್ನು ಮಾಡಿಸುವ ಮುಂತಾದ ಜನಹಿತ ಕಾರ್ಯಗಳನ್ನು ಮಾಡುವುದರ ಮೂಲಕ ಸಮಾಜ ಕಾರ್ಯಕರ್ತನಾಗಿದ್ದನು.

12ನೇ ಶತಮಾನದ ಶಿವಶರಣರ ಭಕ್ತಿ ಚಳವಳಿಯಲ್ಲಿ ಕಂಡುಬರುವ ಅತ್ಯಂತ ಪ್ರಭಾವಶಾಲಿಯಾದ ವ್ಯಕ್ತಿ ಸಿದ್ದರಾಮ.

ಪರಮೇಶ್ವರನ ಒಡ್ಡೋಲಗದಲ್ಲಿ ಭೃಂಗಿಯ ಶಾಪದಿಂದ ಮುದ್ದಗೌಡ ಮತ್ತು ಸುಗ್ಗಲೆಯರು ಭೂಲೋಕದಲ್ಲಿ ಸತಿಪತಿಗಳಾಗಿ ಹುಟ್ಟುತ್ತಾರೆ. ಈ ದಂಪತಿಗಳಿಗೆ ಬಹಳ ವರ್ಷಗಳ ನಂತರ ಪರಮೇಶ್ವರನೇ ಜಗದ ಹಿತಕ್ಕಾಗಿ ಸಂಭವಿಸಿದಂತೆ ಸಿದ್ದರಾಮ ಹುಟ್ಟುತ್ತಾನೆ.

ರೇವಣಸಿದ್ಧರ ಕೃಪೆಯಿಂದ ಜನಿಸಿದ ಸಿದ್ದರಾಮ ಬಾಲ್ಯದಲ್ಲಿ ಮಂಕನಂತಿದ್ದು ಶ್ರೀಶೈಲದ ಯಾತ್ರಿಕರೊಡನೆ ತಂದೆತಾಯಿಗೆ ಹೇಳದೆ ನಡೆದೇ ಬಿಟ್ಟ ಮಂಕನಾಗಿ ಹೋದವನು ಶ್ರೀಶೈಲದಿಂದ ದೈವಭಕ್ತನಾಗಿ ಹಿಂತಿರುಗಿದ. ಸಿದ್ದರಾಮನು ಶ್ರೀಶೈಲದಿಂದ ಹಿಂತಿರುಗಿ ತನ್ನ ಹುಟ್ಟೂ ರಾದ ಸೊನ್ನಲಿಗೆಗೆ ಬರುತ್ತಾನೆ.

ಶ್ರೀಶೈಲ ಮಲ್ಲಿಕಾರ್ಜುನ ಲಿಂಗವನ್ನು ಪ್ರತಿಷ್ಠಾಪಿಸಿ ಅಲ್ಲಿಯೇ ಒಂದು ಮಠವನ್ನು ಕಟ್ಟಿ ತನ್ನ ಉಳಿದ ಜೀವನವನ್ನು ಸಮಾಜಸೇವೆಗೆ ವಿನಿಯೋಗಿಸಿ ಕರ್ಮಯೋಗಿಯಾಗುತ್ತಾನೆ. ಕೆರೆ ಬಾವಿಗಳನ್ನು ಕಟ್ಟಿಸಿ ಕಷ್ಟದಲ್ಲಿದ್ದವರಿಗೆ ಬಡವರಿಗೆ ಸಹಾಯ ಮಾಡುತ್ತಾನೆ.



**ಆರ್. ರಂಗನಾಥ್**
ಬೆಂಗಳೂರು.
ಮೊ : 7829999060

ಸಾಮಾಜಿಕ ಕಾರ್ಯಗಳಲ್ಲೇ ತನ್ನ ಜೀವನವನ್ನು ಕಳೆದ ಅವನು ತಾನು ಕಟ್ಟಿಸಿದ ಕೆರೆಯ ನೀರು ತನ್ನ ಮನದ ಸರ್ವ ಜೀವ ದಯಾ ಪರತ್ವಗಳು ಎಂದಿಗೂ ಬತ್ತಿ ಹೋಗುವುದಿಲ್ಲ ಎಂದು ಪ್ರತಿಜ್ಞೆ ಮಾಡಿದನು.

ಸಿದ್ದರಾಮ ಸಮಾಜ ಸೇವೆ ಎಂಬುದನ್ನು ತನ್ನ ಬಾಳಿನ ಉಸಿರಾಗಿ ಭಾವಿಸಿದ್ದ.

ಸಿದ್ದರಾಮ ವಚನಕಾರನಾಗಿ ಮಹತ್ವದ ವಚನಗಳನ್ನು ರಚಿಸಿದ್ದಾನೆ ಆತನು ರಚಿಸಿದ ವಚನಗಳನ್ನು ನೋಡಿದಾಗ ಪಾಂಡಿತ್ಯಕ್ಕಿಂತ ಅನುಭವಕ್ಕೆ, ಹೃದಯಶುದ್ಧಿಗೆ ಸರ್ವ ಜೀವನಕ್ಕೆ ಹೆಚ್ಚಿನ ಮಹತ್ವ ನೀಡಿದ್ದಾನೆ.

ಸೊನ್ನಲಿಗೆಯನ್ನು ತನ್ನ ಕಾರ್ಯಕ್ಷೇತ್ರ ಮಾಡಿಕೊಂಡು ಯತಿಯಾಗಿ, ಮಹಾಯೋಗಿಯಾಗಿ ಪ್ರಸಿದ್ಧ ಗುರುವಾಗಿ ಸಾವಿರಾರು ಶಿಷ್ಯರನ್ನು ಸಂಪಾದಿಸಿದನು. ಇಡೀ ಶಿವಶರಣರಭಕ್ತಿ ಚಳವಳಿಯನ್ನು ಅನೇಕ ಸಮಾಜ ಸೇವಾ ಕಾರ್ಯ ಗಳ ಮೂಲಕವಾಗಿ ಕರ್ಮಯೋಗಿ ಎನಿಸಿದ್ದಾನೆ.

ಸಿದ್ದರಾಮನು ಮೂಲತಃ ವೇದ–ಆಗಮಾದಿಗಳ ಪ್ರಾಮಾಣ್ಯವನ್ನು ಒಪ್ಪಿದ ಶೈವ ಸಂಪ್ರದಾಯಕ್ಕೆ ಸೇರಿದವನಾಗಿ ಸೊನ್ನಲಿಗೆಯ ಕ್ಷೇತ್ರದಲ್ಲಿ ಅರ್ಚನೆ–ಹೋಮ ಹವನಾದಿಗಳನ್ನು ಕೈಕೊಂಡವನು ಅನಂತರ ಅವನು ಅಲ್ಲಮ ಪ್ರಭುವಿನ ಮಾರ್ಗದರ್ಶನದಿಂದ ಶರಣ ಧರ್ಮದ ಕಕ್ಷೆಯೊಳಗೆ ಬಂದವನು ಹೀಗೆ ಶರಣ ಧರ್ಮವನ್ನು ಒಪ್ಪಿಕೊಂಡ ನಂತರ ವೇದ–ಶಾಸ್ತ್ರ ಪುರಾಣಾಗಮಗಳನ್ನು ಕುರಿತು' ವೇದ ವೇದಾಂತವನೋದಿ ಫಲವೇನು' ವೇದಂಗಳು ದೈವವಲ್ಲ ಶಾಸ್ತ್ರಂಗಳು ದೈವವಲ್ಲ, ಆಗಮಂಗಳು ದೈವವಲ್ಲ ಎಂದು ವೇದಶಾಸ್ತ್ರಾಗಮಗಳ ಪ್ರಾಮಾಣ್ಯವನ್ನು ನಿರಾಕರಿಸುತ್ತಾನೆ.

ವ್ಯಕ್ತಿಯಾದವನು ತನ್ನ ಅಂಗ ಭಾವವನ್ನು ನೀಗಿಕೊಂಡು ಲಿಂಗಭಾವವನ್ನು ಅಳವಡಿಸಿಕೊಳ್ಳ ಬೇಕೆಂಬುದು ಶರಣ ಸಿದ್ಧಾಂತ.

ಆತನು ಇದಕ್ಕಾಗಿ ವ್ಯಕ್ತಿ ಅನುಸರಿಸಬೇಕಾದುದು ಷಟ್‌ಸ್ಥಲ ಮಾರ್ಗವನ್ನು ಅಂಗನಾಗಿರುವ ವ್ಯಕ್ತಿ ತನ್ನ ಆತ್ಮ ಸ್ವರೂಪವಾದ ಇಷ್ಟಲಿಂಗವನ್ನು ಸಾಧನವಾಗಿ ಹಿಡಿದುಕೊಂಡು ಶ್ರದ್ಧಾ, ನಿಷ್ಠಾ, ಅವಧಾನ,

ಅನುಭವ, ಆನಂದ, ಸಮರಸ ಭಾವಗಳನ್ನು ಸಾಧಿಸಿಕೊಳ್ಳುತ್ತಾ ಕ್ರಮವಾಗಿ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಐಕ್ಯ ಸ್ಥಿತಿಗಳನ್ನು ಪಡೆದು ಲಿಂಗವಾಗುವುದು ಈ ಷಟ್ ಸ್ಥಲಮಾರ್ಗದ ಗುರಿ.

ಹೀಗೆ ಲಿಂಗ ವ್ಯಕ್ತಿತ್ವವನ್ನು ಪಡೆದು ಶರಣಾಗಿ ತನ್ನ ಜೀವನದ ಸಕಲ ವ್ಯಾಪಾರವನ್ನು ಲಿಂಗ ಭಾವದಿಂದ ಅನುಭವಿಸುತ್ತಾನೆ. ಗುರುವಿಗೆ ತನು ದಾಸೋಹ ಲಿಂಗಕ್ಕೆ ಮನ ದಾಸೋಹಗಳಂತೆ, ಜಂಗಮಕ್ಕೆ ಧನ ದಾಸೋಹ ನಡೆಸಬೇಕೆಂಬುದು ಶರಣ ಸಿದ್ಧಾಂತ.

ಬಸವಣ್ಣನ ಸಾಮಾಜಿಕ ಸಿದ್ಧಾಂತವೂ ಕಾರ್ಲ್ ಮಾರ್ಕ್ಸ್ ನಂತೆ ಧನದ ಅಂದರೆ ಹಣದ ನೆಲೆಗಟ್ಟಿನ ಮೇಲೆ ನಿಂತಿದ್ದಿತು. ಆರ್ಥಿಕತೆಯಲ್ಲಿ ಸಮಾನತೆಯನ್ನು ಸಾಧಿಸಿದರೆ ಸಮಾಜದಲ್ಲಿ ಸಮಾನತೆ ತಾನಾಗಿಯೇ ಸಾಧ್ಯವಾಗುವುದೆಂದು ತಿಳಿದಿದ್ದರು.

ಬಸವಣ್ಣನ ಅರ್ಥ ತತ್ವಕ್ಕೆ ಎರಡು ಮಗ್ಗಲು ಗಳುಂಟು ಒಂದು ಕಾಯಕ (ಶ್ರಮ) ಇನ್ನೊಂದು ದಾಸೋಹ (ವಿತರಣೆ) ಕಾಯಕ ಮಾಧ್ಯಮದಿಂದ ಗಳಿಸಬೇಕು, ದಾಸೋಹ ಮಾಧ್ಯಮದಿಂದ ಬಳಸಬೇಕು. ಈ ಹಿನ್ನೆಲೆಯಲ್ಲಿ ಶರಣರು ತಮ್ಮ ಭಾವನೆಗಳನ್ನು ಕಲಾತ್ಮಕಗೊಳಿಸಲು ಹೋರಟ ಕವಿಗಳಲ್ಲಿ ಬದುಕನ್ನು ಕಲಾತ್ಮಕಗೊಳಿಸಲು ಹೋರಾಡಿದ ಕಲಿಗಳಾದರು.

ಶರಣ ಸಂಕುಲದಲ್ಲಿ ವೃತ್ತಿ ಬೇರೆಯಲ್ಲ, ಪ್ರವೃತ್ತಿ ಬೇರೆಯಲ್ಲ, ವೃತ್ತಿಯಲ್ಲಿಯೇ ಪ್ರವೃತ್ತಿಯನ್ನು, ಪ್ರವೃತ್ತಿ ಯಲ್ಲಿಯೇ ವೃತ್ತಿಯನ್ನು ಕಂಡರು. ವ್ಯಕ್ತಿಯು ಸಮಾಜದಲ್ಲಿ ಒಕ್ಕಲುತನ ಮಾಡುವವನಿರಲಿ, ಕುಂಬಾರನಿರಲಿ, ನೇಕಾರ ನಿರಲಿ, ಮಡಿವಾಳನಿರಲಿ, ಸ್ತ್ರೀ ಇರಲಿ, ಪುರುಷನಿರಲಿ, ತನ್ನ ನಿತ್ಯ ಸತ್ಯ ಶುದ್ಧಕಾಯಕದ ಫಲವನ್ನು ನಿತ್ಯ ಜೀವನಕ್ಕೆ ಅವಶ್ಯವಿದ್ದಷ್ಟು ಮಾತ್ರ ಶಿವನ ಪ್ರಸಾದವೆಂದು ಇಟ್ಟುಕೊಂಡು ಮಿಕ್ಕದ್ದನ್ನು ಶಿವನಿಗೆ ಅರ್ಪಿಸುವವನು ತನ್ನ ಕಾಯಕ ಮಾಡುತ್ತಿರುವಾಗಲೇ ಶಿವ ಸಾನಿಧ್ಯವನ್ನು ಅನುಭವಿಸಬಲ್ಲನು.

ಯಾವುದೇ ಕಾಯಕ ಕೈಕೊಳ್ಳಲಿ ಅದನ್ನು ಈಶ್ವರಾರ್ಪಣ ಭಾವದಿಂದ ಪವಿತ್ರಗೊಳಿಸಿ ಶಿವಪಥದಲ್ಲಿ ಅಡಿಇಟ್ಟು ಆತ್ಮಾನುಭವ ಪಡೆಯಬಲ್ಲನು.

ಇಲ್ಲಿ ಜಾತಿ, ಕುಲ, ಬೇದಕ್ಕೆ ಸ್ಥಾನವೇ ಇಲ್ಲ. ಸ್ತ್ರೀ, ಪುರುಷ ಬೇದಕ್ಕೆ ಅವಕಾಶವಿಲ್ಲ. ಈ ರೀತಿ ಶಿವಶರಣರು ಆಧ್ಯಾತ್ಮಿಕತೆಯನ್ನು ಬೆಳೆಸಿದರು. ಇವರದೇ ಒಂದು ಸಿದ್ಧಾಂತವಾಗಿ ಸಮಾಜಕ್ಕೆ ಉಪಯುಕ್ತವಿರುವ ವಿವಿಧ ಬಗೆಯ ಕಾರ್ಯಗಳಲ್ಲಿ ಉಚ್ಚ–ನೀಚವೆಂಬ ಭೇದಭಾವಕ್ಕೆ ಸ್ಥಾನವಿರಲಾರದು ಎಂಬ ತತ್ವವನ್ನು ಪ್ರತ್ಯಕ್ಷ ವ್ಯವಹಾರದಲ್ಲಿ ಆಚರಿಸಿ ಸಾಮಾಜಿಕ, ಸಮತಾಧರ್ಮಕ್ಕೆ ತಳಹದಿ ಇಟ್ಟರವರು.

ಶರಣರು ಬೋಧಿಸಿದ ಸಾಧನಾ ಮಾರ್ಗದಲ್ಲಿ ಕಾಯಕತತ್ವದ ಆಚರಣೆಗೆ ತನ್ನದೇ ಆದ ಮಹತ್ವವಿದೆ. ಕಾಯಕವೆಂದರೆ ಜೀವನ ನಿರ್ವಹಕ್ಕಾಗಿ ಕೈಕೊಳ್ಳಲಾದ ಯಾವುದೇ ಪ್ರಾಮಾಣಿಕ ಉದ್ಯೋಗವೆಂದು ಸಾಮಾನ್ಯ ಕಲ್ಪನೆ ಇದೆ ಆದರೆ ಶರಣರು ತಮ್ಮ ಸಮಗ್ರ ಜೀವನವೆ ಶಿವನಿಗೆ ಅರ್ಪಿತ ಎಂಬ ಭೂಮಿಕೆಯಲ್ಲಿ ನಿಂತು ಅದಕ್ಕನು ಗುಣವಾಗಿ ಕೈಗೊಂಡ ಮತ್ತು ಆಚರಿಸಿದ ಕಾಯಕವೇ ಶರಣರು ಭೋಧಿಸಿದ ಕಾಯಕದ ಮುಖ್ಯ ತತ್ವ. ಕಾಯಕದ ಗಳಿಕೆಯ ಮೇಲಿನ ಪ್ರಭುತ್ವ ಶಿವನದು ಆ ಗಳಿಕೆಯನ್ನು ಅವನಿಗೆ ಅರ್ಪಿಸಿ ಶಿವನ ಸೇವೆಗೆ ಸಾಧನವಾದ ತನ್ನ ಶರೀರಕ್ಕೆ ಅವಶ್ಯವಿದ್ದಷ್ಟೇ ಅದರೊಳಗಿಂದ ಶಿವನಿತ್ತ ಪ್ರಸಾದವೆಂದು ಸ್ವೀಕರಿಸತಕ್ಕದ್ದು. ಆಯಾದಿನದ ಗಳಿಕೆಯಿಂದ ಮರುದಿನಕ್ಕೆಂದು ಸಂಗ್ರಹಿಸಕೂಡದು ಈ ರೀತಿ ಪ್ರತಿನಿತ್ಯ ಶ್ರಮಪಟ್ಟು ಮಾಡುವುದೇ ಕಾಯಕ ಮತ್ತು ದಾಸೋಹ ವಾಗುತ್ತದೆ. ಕಾಯಕದಿಂದ ನಡೆವ ಗುರು, ಲಿಂಗ, ಜಂಗಮದ ದಾಸೋಹವೇ ಶ್ರೇಷ್ಠವಾದುದು.

ಜನಜೀವನಕ್ಕೆ ಅತ್ಯಗತ್ಯವಾದ ಅನುಕೂಲಗಳನ್ನು ಕಲ್ಪಿಸಿ ಜೀವನ ದೃಷ್ಟಿಗೆ ಅಲೌಕಿಕದ ದರ್ಶನದ ಅಗತ್ಯವೂ ಇದೆ ಎಂಬುದನ್ನು ಅಲ್ಲಮನಿಂದ ಅರಿತುಕೊಂಡು ಇಷ್ಟಲಿಂಗ ಉಪಾಸನೆಯಿಂದ ತನ್ನ ಕಾಯಕಕ್ಕೆ ಮತ್ತಷ್ಟು ಗುರುತ್ವ ದೊರೆಯುತ್ತದೆ ಎಂದು ಚನ್ನಬಸವಣ್ಣನಿಂದ ದೀಕ್ಷೆಪಡೆದು ಬಸವಣ್ಣನ ಮಾರ್ಗದರ್ಶನ ಪಡೆದು ಇತರ ಶರಣರ ಸಂಘದಿಂದ ಸಂತೃಪ್ತಿಯನ್ನು ಹೊಂದಿ ತನ್ನ ಕರ್ಮಜೀವನಕ್ಕೆ ಆಧ್ಯಾತ್ಮದ ನೆಲೆಗಟ್ಟನ್ನು ಸೇರಿಸಿಕೊಂಡನು. ಸಿದ್ಧರಾಮನು ಲೋಕಹಿತವೆಂದು ತಿಳಿದು ಕೆರೆ ಗುಡಿಗಳನ್ನು ನಿರ್ಮಿಸುವುದ ಕ್ಕಾಗಿ ಕೆಲಸಗಾರರಿಗೆ ಸೂಕ್ತವಾದ ಮಾರ್ಗದರ್ಶನವನ್ನು ನೀಡಿ ಅವರ ಪ್ರೀತಿ ವಿಶ್ವಾಸಗಳನ್ನು ಪಡೆದರು. ತನಗೂ ತನ್ನ ಕೆಲಸಗಾರರಿಗೂ ಅವಮಾನವಾದಾಗ ಅದನ್ನು ದಿಟ್ಟತನದಿಂದ ಪ್ರತಿಭಟಿಸಿದನು. ಸಿದ್ಧರಾಮನು ಜನೋ ಪಯೋಗಿ ಕಾರ್ಯಗಳನ್ನು ಜನರನಿಷ್ಠಾಪೂರ್ಣ ಕೃತಜ್ಞತಾ ಭಕ್ತಿಯನ್ನು ಗಳಿಸಿತು. ಸಿದ್ಧರಾಮನು ಎಲ್ಲಾ ವರ್ಗದವರಿಂದ ಗೌರವಿಸಲ್ಪಡುವ ವ್ಯಕ್ತಿಯಾಗಿ ಪರಿಣಮಿಸಿದನು. ಇಹಪರಗಳೆರಡನ್ನೂ ಬೆಸೆದು ಸಹಕಾರ ಮೂರ್ತಿಯಾದನು.

# ಅಷ್ಟಾವರಣ ರೂಪವಲ್ಲ

ಅಪ್ಪ ಬಸವಣ್ಣನವರ ವಚನ :

**"ಎನ್ನರಿವಿನಲ್ಲಿ ಗುರುವಾಗಿ**
**ಎನ್ನ ಪ್ರಾಣದಲ್ಲಿ ಲಿಂಗವಾಗಿ**
**ಎನ್ನ ಜ್ಞಾನ ದಲ್ಲಿ ಜಂಗಮವಾಗಿ**
**ಎನ್ನ ಜಿಹ್ವೆಯಲ್ಲಿ ಪಾದೋದಕವಾಗಿ**
**ಎನ್ನ ನಾಸಿಕದಲ್ಲಿ ಪ್ರಸಾದವಾಗಿ**
**ಎನ್ನ ತ್ವಕಿನಲ್ಲಿ ವಿಭೂತಿಯಾಗಿ**
**ಎನ್ನ ನೇತ್ರದಲ್ಲಿ ರುದ್ರಾಕ್ಷಿಯಾಗಿ**
**ಎನ್ನ ಶ್ರೋತದಲ್ಲಿ ಮಂತ್ರವಾಗಿ**
**ಇಂತಿವು ಅಷ್ಟಾವರಣ ಸ್ವರೂಪವಾಗಿ ಎನ್ನ ಕರಸ್ಥಲದಲ್ಲಿ ಬಂದು ನಿಂತಾತನೇ ಕೂಡಲಸಂಗಮದೇವಾ."**

ತುಂಬ ಅದ್ಭುತವಾದ ವಚನ, ಅಷ್ಟಾವರಣಗಳನ್ನು ಸಹಜವಾಗಿ ಚಂದವಾಗಿ ಸರಳಿಕರಿಸಿಕೊಟ್ಟಿದ್ದಾರೆ ಇದರೊಳಗೆ ಹೋದಷ್ಟು ದೂರ, ಇಳಿದಷ್ಟು ಆಳ, ದೃಷ್ಟಿಸಿದಷ್ಟು ಅಗಲ.

ಸರಳವಾದದನ್ನು ಯಾಕಷ್ಟು ಆಳ ದೂರ ಅಗಲ ಎಂಬ ಸಣ್ಣ ಗೊಂದಲ ಸಹಜ ಅದು ಈಗಿನ ಪ್ರಸಕ್ತ ಸಮಾಜ ಹಾಗೂ ಹನೇರಡನೆ ಶತಮಾನದ ಅಂತರದಲ್ಲಿ ಸಮಾಜದಲ್ಲಿ ಕೆಲವು ಪಟ್ಟಭದ್ರರು ಅಪ್ಪಾಜಿಯವರ ನಿಲುವನ್ನು ತಿರುಚಿ ನಮ್ಮನು ದಿಕ್ಕು ತಪ್ಪಿಸಿ ಅಂಧಕಾರದ ದಾರಿಯಲ್ಲಿ ಮೌಢ್ಯತೆಯನ್ನೆ ಭೋದಿಸಿ ಅದ್ದನೆ ಆಚಾರಣೆ ಎಂದು ಮಾಡಿಸುತ್ತಿದ್ದರು. ಆ ಅಜ್ಞಾನವನ್ನು ಮೆಟ್ಟಲು ತುಂಬ ಆಳ ದೂರ ಅಗಲವಾಗಿ ಚಿಂತನೆ ಅಗತ್ಯವಿದೆ ಅಷ್ಟು ಅಗಲ ಆಳ ದೂರಕ್ಕೆ ಅಜ್ಞಾನದ ಪಥದಲ್ಲಿದೇವೆ . ಆ ಪಥದ ಅಷ್ಟು ಅಗಲ ಆಳ ದೂರದಿಂದ ಹೊರಬಂದು ಇನ್ನು ಜ್ಞಾನದೆಡೆಗೆ ಸಾಗಬೇಕಲ ಅದ್ದಕೆ ಅಗಲ ಆಳ ದೂರದ ಪ್ರಯಾಸ.

ಆದರೆ ಅಪ್ಪಜೀಯವರ ಕರುಣೆಯಿಂದ ನಿಜ ಶರಣರ ಸಂಗ ದೊರಕಿ ಶರಣರ ಜ್ಞಾನದ ಮಾರ್ಗದರ್ಶನದ ಒಲವಿನ ಅನುಭಾವದ ಚಿಲುಮೆಯಿಂದಾಗಿ ನಮ್ಮದು ಸಣ್ಣ ಪ್ರಯತ್ನ. ಎನಗಿಂತ ಕಿರಿಯನಿಲ್ಲ ತಪ್ಪಿದ್ದರೆ ತಿಳಿಸಿ.



**ವಿನಯ್ ಆದಿಹಳ್ಳಿ**
ಶಿವಶಕ್ತಿ ಸಂಗಮ, ಆದಿಹಳ್ಳಿ,
ಅರಸೀಕೆರೆ ತಾಲ್ಲೂಕು, ಹಾಸನ
ಮೊ : 9901209374

**ಎನ್ನ ಅರಿವಿನಲ್ಲಿ ಗುರುವಾಗಿ :** ವ್ಯಕ್ತಿ ಗುರುವಲ್ಲ, ವೇಷಧಾರಿ ಕಪಟಿ ಗುರುವಲ್ಲ, ದಕ್ಷಿಣೆ ಪೀಕುವನ, ಮಂತ್ರ ಪಠಣೆ ಮಾಡುವವ, ತಂತ್ರಯಂತ್ರ ವಾಮಚಾರ ಮಾಡುವವ ಗುರುವಲ್ಲ, ಪಂಚಾಂಗ ಜ್ಯೋತಿಷ್ಯ ಹೇಳುವವ ಗುರುವಲ್ಲ, ದೇವ ಮಾನವ ಗುರುವಲ್ಲ, ಪೀಠದಲ್ಲಿ ವಿಜ್ರಂಭಣೆಯಿಂದ ದರ್ಬಾರ್ ಮಾಡಿಸಿಕೊಳ್ಳುವವ ಗುರುವಲ್ಲ. ಅವರು ಅನುಸರಿಸುವ ಮಾರ್ಗ ಮೋಸದ ಮೌಢ್ಯತೆ ಫಲ ನೀಡದ ಪಥ ಅಂಥವು ಅಂಥವರನ್ನು ಧಿಕ್ಕರಿಸಿದ್ದಾರೆ. ವ್ಯಕ್ತಿ ಕೇಂದ್ರಿತ ಗುಲಾಮಗಿರಿ ಶೋಷಣೆ ಹಾಗೂ ಅವುಗಳ ಕಂದಾಚಾರಣೆಗಳನ್ನು ಧಿಕ್ಕರಿಸಿದ್ದಾರೆ ಅಪ್ಪಾಜಿಯವರು.

ಮನುಜ ತನ್ನ ಸ್ವಯಂ ವಿಶ್ವಾಸ ಬೆಳೆಸಿಕೊಂಡು ಪ್ರಬುದ್ಧತೆಯನ್ನು ನಿರಂತರವಾಗಿ ಸಂಪಾದಿಸುವ ಮೆದುಳಿನ ಸಹಜ ಕ್ರಿಯೆ ಅರಿವು. "ಅರಿವೇ ಗುರು".

**ಎನ್ನ ಪ್ರಾಣದಲ್ಲಿ ಲಿಂಗವಾಗಿ :** ಕಲ್ಲು ಲಿಂಗವಲ್ಲ, ಸ್ಥಾವರ ಲಿಂಗವಲ್ಲ, ಆಕಾರ ಲಿಂಗವಲ್ಲ, ನಿರ್ಜೀವ ವಸ್ತು ಲಿಂಗವಲ್ಲ, ಮತ್ತು ಲಿಂಗ ವಸ್ತುವಲ್ಲ.

ಇಲ್ಲಿ ಗಮನಿಸಬೇಕು ಸ್ಥಾವರಗಳನ್ನು ಸುತ್ತುವುದರಿಂದ ಆರ್ಥಿಕ ಹಿನ್ನಡೆ, ಸಮಯ ವ್ಯರ್ಥ, ಮೇಳು ಕೀಳು ಆದ್ಯತೆಯಿಂದ ಕಿರಿಕಿರಿಯಲ್ಲದೆ ಮತ್ತೇನೂ ಅಲ್ಲ.

ನಮ್ಮಲೆ ದೇವನಿದ್ದಾನೆ ಅವನನ್ನು ಒಳ್ಳೆಯ ಆಚಾರದಿಂದ ನಮ್ಮ ಪ್ರಾಣವನ್ನೇ ಲಿಂಗವಾಗಿಸುವ ದೇಹವೆ ದೇವಾಲಯದ ಭಾವ. ಪ್ರಾಣ ಬೇರೆ ಅಲ್ಲ ಲಿಂಗ ಬೇರೆ ಅಲ್ಲ ಪ್ರಾಣ ಲಿಂಗದ ಸಮ್ಮಿಕರಣ. "ಆಚಾರವೇ ಲಿಂಗ".

**ಎನ್ನ ಜ್ಞಾನದಲ್ಲಿ ಜಂಗಮವಾಗಿ :** ಕಾವಿ ಹಾಕಿಕೊಂಡವ, ಪುರಾಣವೆಂಬ ಸುಳ್ಳು ಬೊಗಳುವವ, ಕೂಳಿಗಾಗಿ ಭಿಕ್ಷೆ ಬೇಡುವವ, ಜಾತಿಯಿಂದ ಅಯ್ಯನಾದವ, ಕುತಂತ್ರಿ ಅಜ್ಞಾನಕ್ಕೆ ದೂಡುವ ಜಂಗಮ ಜಂಗಮನಲ್ಲ.

ಶ್ರೇಷ್ಠ ಕನಿಷ್ಟದ ತಾರತಮ್ಯವನ್ನು ಧಿಕ್ಕರಿಸಿ ಅಜ್ಞಾನದಿಂದ ಮುಕ್ತಿ ಪಡೆದು ಜಡತ್ವದಿಂದ ಚಲನಶೀಲತೆಯೆಡೆಗೆ ನಡೆಸುವ ಪ್ರಬುದ್ಧತೆಯೆ ಜ್ಞಾನ. ಅನುಭಾವದ ಜ್ಞಾನದಿಂದ ಸಮಾಜವನ್ನು ಕೂಡಿ ಅಭಿವೃದ್ಧಿ ಸಾಧಿಸಬೇಕು. "ಅನುಭಾವವೇ ಜಂಗಮ".

**ಎನ್ನ ಜಿಹ್ವೆಯಲ್ಲಿ ಪಾದೋದಕವಾಗಿ :** ವ್ಯಕ್ತಿಯ ಪಾದ ತೊಳೆದ ನೀರು / ಅಭಿಷೇಕ ಪಾದೋದಕವಲ್ಲ. ಅವೈಜ್ಞಾನಿಕ ಪದ್ದತಿಯನ್ನು ಧಿಕ್ಕರಿಸಿದ್ದಾರೆ, ಇದರಿಂದ್ದಾಗಿ ಇದ್ದ ಅಸಮಾನತೆಯನ್ನು ತೊಡೆದುಹಾಕಿದ್ದಾರೆ.

ಪಾದೋದಕ ಪ್ರತಿ ಜೀವಿಯಲ್ಲಿಯು ಹರಿದಾಡುವ ಜೀವ ಜಲವೇ ಆಗಿದೆ. ಸಾಮಾನ್ಯವಾಗಿ ಶ್ರಮಜೀವಿಯಲ್ಲಿ ಸಾಕಷ್ಟು ಪಾದೋದಕ ಜಲ ಉತ್ಪತ್ತಿ ಆಗುತ್ತದೆ. ಲಿಂಗಾಗಯೋಗಿಯಾದಲ್ಲಿ ಪ್ರಾಣ ಲಿಂಗ ಸಮ್ಮಿಕರಣದಲ್ಲಿ ಮೆದುಳಿಂದ ಪಾದದವರೆಗೂ ಹರಿವ ಜಲವೇ ಪಾದೋದಕ.

**ಎನ್ನ ನಾಸಿಕದಲ್ಲಿ ಪ್ರಸಾದವಾಗಿ :** ಕೂಳು, ಊಟ, ತನುವಿನಿಚ್ಚೆಗೆ ಆಶ್ವಾದಿಸುವ ಆಹಾರ ಪ್ರಸಾದವಲ್ಲ.

ಅರಿವಿನಿಂದ ಜ್ಞಾನದಿಂದ ಕಾಯಕದಿಂದ ಸಮಾಜೀಕ ಉತ್ತಮ ಸಮಾಜದೊಂದಿಗಿನ ಆನಂದವೇ ಪ್ರಸಾದ. ಸಮಾಜಕ್ಕೆ ಸೇವೆಯ ಅರ್ಪಿಸಿದರೆ, ದಾಸೋಹವನ್ನು ಅರ್ಪಿಸಿದರೆ ಆನಂದದ ಪ್ರಸಾದ.

ಸಮಾಜಕ್ಕೆ ಕೆಡುಕನ್ನು ಬಯಸಿದ್ದರೆ ದುಃಖದ ಪ್ರಸಾದ. " ಅಂತರಂಗದ ಆನಂದವೇ ಪ್ರಸಾದ".

**ಎನ್ನ ತ್ವಕ್ಕಿನಲ್ಲಿ ವಿಭೂತಿಯಾಗಿ :** ಸುಟ್ಟ ವ್ಯಕ್ತಿಯ ಬಸ್ಮ ವಿಭೂತಿಯಲ್ಲ. ವಿಭೂತಿ ತೋರಿಕೆಯ ಅಲಂಕಾರಿಕ ವಸ್ತು ಅಲ್ಲ. ಬರಿ ಧರಿಸಿದರೆ ಶರಣನಾಗಲಾರ.

ದೇಹದ ಹೊರ ಪದರವೇ ನಿರ್ಭಾವದಿ ನಿರಹಂಕಾರದಿ ವಿಭೂತಿಕರಣವಾಗಬೇಕು. ಅಹಂಕಾರ ಜೇಷ್ಠತೆ ಶ್ರೇಷ್ಠತೆಗಳನ್ನ ಕಾಮನೆಗಳನ್ನ ತನ್ನೊಳಗೆ ಬಿಟ್ಟುಕೊಳ್ಳದ ದಿಟ್ಟತನ.

**ಎನ್ನ ನೇತ್ರದಲ್ಲಿ ರುದ್ರಾಕ್ಷಿಯಾಗಿ :** ಗೋಲಿ ಆಕಾರದ ಮರದ ವಸ್ತು ರುದ್ರಾಕ್ಷಿ ಯಲ್ಲ. ರುದ್ರಾಕ್ಷಿ ಹಾಕಿಕೊಂಡು ಮೆರೆಯುವುದರಿಂದ ಸಮಾಜಕ್ಕಾಗಲಿ ವಯ್ಯಕ್ತಿಕವಾಗಿ ಆಗಲಿ ಯಾವ ಮುನ್ನಡೆಯು ದೊರಕದು.

ನಾವು ಪಂಚಚಾರದ ದ್ರುಷ್ಠಿಕೋನದಿಂದ ನಡೆದದ್ದೆ ಆದಲ್ಲಿ ಬದುಕು ಸಾಕಾರಗೊಳ್ಳುವುದು.

**ಎನ್ನ ಶ್ರೋತ್ರದಲ್ಲಿ ಮಂತ್ರವಾಗಿ :** ಮಂತ್ರವೆಂದರೆ ಪಠಣೆ ಮಾಡಿ ದೇವರನ್ನು ಬಂಧಿಯಾಗಿಸಲು ಸಾದ್ಯವಿಲ್ಲದ ತಂತ್ರವಲ್ಲ. ಅರ್ಥ ಆಗದ ಪದಗಳನ್ನು ಧಿಕ್ಕರಿಸಿದ್ದಾರೆ ಅವೈಜ್ಞಾನಿಕವೆಂಬುದಾಗಿ.

ಶರಣರೊಂದಿಗಿನ ಸಹಬಾಳ್ವೆಯಲ್ಲಿ ಶರಣರ ಸತ್ಯ ನುಡಿಗಳೆ ಮಂತ್ರ ಎಂಬುದಾಗಿದೆ.

**ಇಂತಿವು ಅಷ್ಟಾವರಣದ ಸ್ವರೂಪವಾಗಿ :** ಸ್ಪಷ್ಟತೆ, ನೋಡಿ ಇಲ್ಲಿ ಅಷ್ಟಾವರಣಗಳು ವ್ಯಕ್ತಿಯುಲ್ಲ ವಸ್ತುವು ಅಲ್ಲ ಅಂತಹ ಬಾಹ್ಯ ಹೇರಿಕೆಯನ್ನು ಸಾರಸಗಟಾಗಿ ತಿರಸ್ಕಾರ ಮಾಡಿದ್ದಾರೆ. ಪ್ರತಿ ಶರಣನಲ್ಲಿಯು ಪಂಚೇಂದ್ರಿಯಗಳನ್ನು ಒಳಗೊಂಡು ಮತ್ತು ಅರಿವು ಆಚಾರ ಅನುಭಾವಗಳ ಇರುವಿಕೆಯನ್ನು ಅಷ್ಟಾವರಣಗಳ ಸ್ವರೂಪವಾಗಿ ಪರಿವರ್ಸಿಕೊಂಡಾಗ ಎನ್ನ ಕಲಸ್ಥಲದಲ್ಲಿ ಬಂದು ನಿಂತಾತನೇ ಕೂಡಲಸಂಗಮದೇವಾ.

**ಒಟ್ಟರೆಯಾಗಿ :** ಅಷ್ಟಾವರಣಗಳು ವಸ್ತುಗಳಲ್ಲ ವ್ಯಕ್ತಿಯು ಅಲ್ಲ.

ಶರಣನಲ್ಲಿ ಅಡಕವಾಗಿರುವ ಪ್ರಾಕೃತಿಕ ಸಹಜ ನಿರುಪಾಧಿತ ಗುಣಗಳೆ ಅಷ್ಟಾವರಣದ ಸ್ವರೂಪ, ಆ ಸ್ವರೂಪವನ್ನು ಕಂಡುಕೊಂಡಾಗ ದೇವನನ್ನು ನಮ್ಮ ಕರಸ್ಥಲದಲ್ಲಿಯೇ ನಿಲ್ಲಿಸಿಕೊಳ್ಳಬಹುದು.

ಬದುಕನ್ನು ಅಪ್ಪಾಜಿ ಸರಳವಾಗಿ ಹೇಳಿದ್ದಾರೆ. ಅದನ್ನು ತಿರುಚಿದವರಿಗೆ ಧಿಕ್ಕಾರ. ನಾವು ಅಜ್ಞಾನದಲ್ಲಿದೇವು ನಮಗೂ ಧಿಕ್ಕಾರ.

ವಚನ ಜ್ಞಾನವು ಮನೆ ಮನೆಗೆ ಪ್ರತಿ ಮನಕ್ಕೆ ಎಲ್ಲಾ ಆತ್ಮಗಳಿಗೂ ಅರ್ಥ ಆಗಿ ಜ್ಞಾನವು ಪಸರಿಸಲಿ ಎಂಬ ಆಶಯದೊಂದಿಗೆ.

**ಸದ್ಭಕ್ತ ಸಮಾಜ ಬಾಂಧವರಲ್ಲಿ ಮನವಿ**

ನೊಳಂಬ ಲಿಂಗಾಯತ ಸಂಘ (ರಿ), ಬೆಂಗಳೂರು ವತಿಯಿಂದ ಚಿಕ್ಕಮಗಳೂರು ಜಿಲ್ಲೆ, ಕಡೂರು ಪಟ್ಟಣದಲ್ಲಿ "ಶ್ರೀಗುರು ಸಿದ್ಧರಾಮೇಶ್ವರ ಸಮುಧಾಯ ಭವನ"ದ ನಿರ್ಮಾಣ ಕಾರ್ಯ ಆರಂಭವಾಗಿದ್ದು, ಕಾಮಗಾರಿ ಭರದಿಂದ ಸಾಗುತ್ತಿದೆ. ಈ ಸದುದ್ದೇಶಕ್ಕಾಗಿ ಸದ್ಭಕ್ತರಾದ ಸಮಾಜ ಬಾಂಧವರು ಭಾವ ಶುದ್ಧಿಯಿಂದ ತನು-ಮನ-ಧನವನ್ನು ನೀಡುವುದರ ಮುಖೇನ ಸಮಾಜದ ಏಳಿಗೆಗೆ ತಾವು ಕೈ ಜೋಡಿಸಿ ಶ್ರೀಗುರು ಸಿದ್ಧರಾಮೇಶ್ವರರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ ಮಾಡಿಕೊಳ್ಳುತ್ತೇವೆ.

**ದೇಣಿಗೆ ನೀಡುವ ದಾನಿಗಳು ಈ ಕೆಳಕಂಡ ಖಾತೆ ಜಮಾ ಮಾಡಿ ನಮಗೆ ಮಾಹಿತಿ ನೀಡತಕ್ಕದ್ದು:**
**(ಮೊ. : 94480 61972/94486 39121)**

**ಬ್ಯಾಂಕಿನ ಹೆಸರು : ಚಿಕ್ಕಮಗಳೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ ( ಕೆ.ಎಸ್.ಸಿ.ಬಿ)**
**ಖಾತೆಯ ಹೆಸರು : ನೊಳಂಬ ಲಿಂಗಾಯತ ಸಂಘ (ರಿ) ಉಪಸಮಿತಿ ಕಡೂರು**
**ಖಾತೆಯ ಸಂಖ್ಯೆ : 120003461358**
**ಐ.ಎಫ್.ಎಸ್.ಸಿ.ಕೋಡ್ : ಕೆಎಸ್‌ಸಿಬಿ0012001**
**ಶಾಖೆಯ ಹೆಸರು : ಕಡೂರು**

**ಇಂತಿ,**
**ಅಧ್ಯಕ್ಷರು ಹಾಗೂ ಗೌರವಾನ್ವಿತ ಸದಸ್ಯರು**
**ಉಪಸಮಿತಿ ಕಡೂರು.**

# ನೊಳಂಬರ ಕೆರೆಕಟ್ಟೆಗಳು

ಜಗತ್ತಿನ ಸಕಲ ಜೀವರಾಶಿಗಳ ಬಾಳಿಗೆ ಅತಿ ಮುಖ್ಯವಾದ ಮೂಲಾಧಾರಗಳೆಂದರೆ, ಶುದ್ಧ ನೆಲ, ಶುದ್ಧ ಜಲ, ಶುದ್ಧ ವಾಯು. ಇವುಗಳಲ್ಲಿ ವ್ಯತ್ಯಾಸವಾದರೆ ಜಲವು ಕಲುಷಿತ ವಾಗುವುದು. ನೆಲ ಜಲ ಕಲುಷಿತವಾದರೆ ವಾಯುವುದು ಕಲುಷಿತವಾಗುವುದು. ಇದರಲ್ಲಿ ಸಂಶಯವೇ ಇಲ್ಲ. ಈ ಅಮೂಲ್ಯ ಪ್ರಕೃತಿದತ್ತ ಮೂಲಗಳನ್ನು ಶುದ್ಧವಾಗಿ ಸಂರಕ್ಷಿಸಿಕೊಳ್ಳುವುದು ಮಾನವರ ಮುಖ್ಯ ಜವಾಬ್ದಾರಿ ಹಾಗೂ ಕರ್ತವ್ಯವು ಆಗಿದೆ. ಜಗತ್ತನ್ನು ಆಳುತ್ತಿರುವ ಅಧಿಕಾರ ಮುತ್ಸದ್ಧಿಗರು ತಮ್ಮ ಗಮನವನ್ನು ಈ ಸೂಕ್ಷ್ಮ ಕೆಲಸದ ಕಡೆ ಇಡಬೇಕಾಗಿದೆ. ಶತಮಾನಗಳ ಹಿಂದೆ ಭಾರತದ ಭೂಪ್ರದೇಶ ದಲ್ಲಿ ಆಳ್ವಿಕೆ ನಡೆಸಿದ ನೊಳಂಬ ಅರಸರು ಪ್ರಕೃತಿ ರಕ್ಷಣೆಗೆ ಅತಿ ಪ್ರಾಮುಖ್ಯತೆ ನೀಡುತ್ತಿದ್ದರು. ಇದನ್ನು ಇತಿಹಾಸ ಅಧ್ಯಯ ನದ ಮೂಲಕ ನಾವು ತಿಳಿಯಬಹುದು. ಇವರ ಆಡಳಿತಾ ವಧಿಯಲ್ಲಿ ನಿರ್ಮಿಸಿರುವ ಕೆರೆ ಕಟ್ಟೆಗಳು ಹಾಗೂ ಬೆಳೆಸಿ ರಕ್ಷಿಸಿದ್ದ ಗುಂಡುತೋಪುಗಳು ಜೀವಂತ ಸಾಕ್ಷಿಯಾಗಿವೆ. ನೊಳಂಬ ಅರಸರ ಈ ತತ್ವಪರಿಪಾಲನೆಯ ಮಹತ್ವ ಎಂತಹುದೆಂದು ವಿಶ್ವದ ಎಲ್ಲರಿಗೂ ಮನವರಿಕೆಯಾಗಿದೆ. ಪರಿಣಾಮವಾಗಿ ಇಂದು ವರ್ಷದ ಒಂದುದಿನ ವಿಶ್ವ ಪರಿಸರ ದಿನಾಚರಣೆ ನಡೆಯುತ್ತಿರುವುದು.

ದಕ್ಷಿಣ ಭಾರತದ ಕರ್ನಾಟಕ, ಆಂಧ್ರ, ತಮಿಳುನಾಡು, ಮಹಾರಾಷ್ಟ್ರ ಹಾಗು ಕೇರಳ ಸೇರಿದಂತೆ ವಿಶಾಲ ಪ್ರಾಂತ್ಯ ಪ್ರದೇಶವನ್ನು ಹಲವಾರು ರಾಜ ಮನೆತನಗಳು ಆಳಿರುವುದನ್ನು ತಿಳಿಯಬಹುದು. ಇಂತಹ ರಾಜಮನೆತನಗಳಲ್ಲಿ ನೊಳಂಬ ಮನೆತನ ರಾಜವಂಶವೂ ಒಂದು. ಬಹುಕಾಲ ಸಾಮಂತ ರಾಜರಾಗಿ, ಕೆಲಕಾಲ ಸ್ವತಂತ್ರ ರಾಜರಾಗಿ ಆಳ್ವಿಕೆ ನಡೆಸಿರುವರು. ಕ್ರಿ.ಶ. 8ನೇ ಶತಮಾನದಿಂದ 11ನೇ ಶತಮಾನದವರೆಗಿನ ಇವರ ಆಳ್ವಿಕೆಯ ಸಮಯದಲ್ಲಿ ಇವರು ಮಾಡಿರುವ ಪ್ರಕೃತಿ ರಕ್ಷಣಾ ಕಾರ್ಯಗಳು ಅಮೂಲ್ಯವಾದವು. ಹಾಗು ವಿಶ್ವದ ಎಲ್ಲರಿಗೂ ಮಾರ್ಗ ದರ್ಶಕವಾಗುವ ಕಾರ್ಯಗಳು. ಜಾಗ ತಿಕ ಮಟ್ಟದಲ್ಲಿ ಕಾರ್ಯರೂಪಕ್ಕೆ ಬರ ಬೇಕಿದೆ. ಕಾರಣ ಇಂದು ವೇಗವಾಗಿ ಬೆಳೆಯುತ್ತಿರುವ ಪರಿಸರಮಾಲಿನ್ಯ. ಹಿತ ಪರಿಸರ ಸಮತೋಲನವನ್ನು ಕಾಪಾಡಲು ಹಾಗೂ ಮಾನವ, ಪ್ರಾಣಿ ಪಕ್ಷಿಗಳ ಸುಖಜೀವನಕ್ಕೆ ಬೇಕಾದ ಅವಶ್ಯಕತೆಯುನ್ನು ಮನಗಂಡ ನೊಳಂಬರು ಮಾಡಿ ತೋರಿರುವ ಲೋಕಹಿತ ಕಾರ್ಯಗಳ ಬಗ್ಗೆ ತಿಳಿದು ಕೊಳ್ಳಬಹುದು. ಇದಕ್ಕೆ ನಾವು ಪಾಲನೆ ಮಾಡಬೇಕು. ಆಗ ಶುದ್ಧ ಪರಿಸರ ತಾನಾಗಿಯೇ ಸಮತೋಲನ ಕಾಪಾಡುವುದು ಸುಖಜೀವನ ಬಾಳಿಗೆ ನೆಮ್ಮದಿ ನಿಡುವುದು.



**ಶಿವಕುಮಾರ್ .ಎಸ್**
ಈಡೇನಹಳ್ಳಿ,
ತಿಪಟೂರು ತಾ. ತುಮಕೂರು ಜಿಲ್ಲೆ.

ಕೆರೆಯ ಏರಿಯ ಮೇಲೆಯೇ ಮುಖ್ಯರಸ್ತೆ ಇರುವುದರಿಂದ ಈ ಮೂಲಕ ಸಂಚರಿಸುವ ಪ್ರಯಾಣಿಕರು ಸುಂದರ ದೃಶ್ಯವನ್ನು ಕಾಣಬಹುದು. ಒಂದು ಬದಿಯಲ್ಲಿ ಹಸಿರು ತುಂಬಿ, ತೆಂಗು, ಅಡಿಕೆ ತೋಟ, ಭತ್ತದ ಗದ್ದೆಗಳು ತಂಪುಗಾಳಿ ನೀಡುತ್ತಿದ್ದರೆ, ಮತ್ತೊಂದು ಬದಿಯಲ್ಲಿ ವಿಶಾಲವಾದ ಕೆರೆಯ ನೀರಮೇಲೆ ತೇಲಿಬರುವ ನೀರಿನ ಅಲೆಗಳು ಕಿವಿಗಳಿಗೆ ಸೊಗಸಾದ ಶಬ್ದವನ್ನು ನೀಡುತ್ತವೆ. ನೀರಿಗಾಗಿ ಹಾಹಾಕಾರ ಪಡುತ್ತಿರುವ ತಿಪಟೂರು ತಾಲ್ಲೂಕಿನ ಬಹುತೇಕ ಭಾಗದ ಜನರು ಇಲ್ಲಿಗೆ ಆಗಮಿಸಿದರೆ ಹವಾನಿಯಂತ್ರಿತ ಕೊಠಡಿಯನ್ನು ಪ್ರವೇಶಿಸಿದ ಅನುಭವವಾಗುತ್ತದೆ. ನೊಣವಿನ ಕೆರೆ ಹೋಬಳಿಯ ಸುಸ್ಥಿತಿಯು ಉಳಿದ ಭಾಗಕ್ಕೂ ಬಂದು ಲೋಕ ಕಲ್ಯಾಣವಾಗಲೆಂದು ಜನರ ಬಯಕೆಯಾಗಿದೆ. ಕ್ರಿ.ಶ. 1162ರಲ್ಲಿ ನಿರ್ಮಾಣವಾಗಿರುವ ಕೆರೆಯ ನಿರ್ಮಾಣದ ಸಮಯದಲ್ಲೇ ಅಥವಾ ಪೂರ್ವದಲ್ಲೇ ಶಾಸನದ ಪ್ರಕಾರ 10ನೇ ಶತಮಾನಕ್ಕೆ ಮೊದಲು ಇಲ್ಲಿ ನೊಳಂಬರಿಂದ ನಿರ್ಮಿತವಾಗಿರು ನೊಳಂಬೇಶ್ವರ, ಶಾಂತೇಶ್ವರ, ಗಂಗೇಶ್ವರ, ಚೋಳೇಶ್ವರ ಹಾಗೂ ಕಲ್ಲೇಶ್ವರ ಈ ಪಂಚಲಿಂಗೇಶ್ವರ ದೇವಾಲಯಗಳು ಇವೆ. ಇಲ್ಲಿಗೆ 3 ಕಿ.ಮೀ. ಸಮೀಪದ ಆಲ್ಬೂರಿನಲ್ಲಿ ಕಲ್ಲೇಶ್ವರ, ಭೈರವೇಶ್ವರ ದೇವಾಲಯಗಳಿದ್ದು ಇಲ್ಲಿ ನೊಳಂಬ ರಾಜ ಅಯ್ಯಪ್ಪದೇವ ಇವರ ಕುರಿತ ಶಿಲಾಶಾಸನವಿರುವುದು ತಿಳಿದುಬಂದಿದೆ.

**ನೊಣವಿನಕೆರೆ :** ನೊಳಂಬರು ಕರ್ನಾಟಕ, ಆಂಧ್ರ, ತಮಿಳುನಾಡಿನ ಬಹುಭಾಗಗಳಲ್ಲಿ ಮಾಡಿರುವ ಅತ್ಯಮೂಲ್ಯ ಕಾರ್ಯಗಳಲ್ಲಿ ಕೆರೆಕಟ್ಟೆಗಳ ನಿರ್ಮಾಣವು ಪ್ರಮುಖವಾದುದು. ತುಮಕೂರು ಜಿಲ್ಲೆ, ತಿಪಟೂರು ತಾಲ್ಲೂಕಿನ ಹೋಬಳಿ ಕೇಂದ್ರವಾಗಿರುವ ನೊಣವಿನಕೆರೆ ನೊಳಂಬರ ಉಪರಾಜಧಾನಿಯಾಗಿ ತ್ತೆಂದು ಇತಿಹಾಸದಿಂದ ತಿಳಿದುಬರುತ್ತದೆ. ಇಲ್ಲಿ ನಿರ್ಮಿಸಿರುವ ಬೃಹತ್ ಕೆರೆ ಕಲ್ಪ ತರು ನಾಡಿನ ಪ್ರಮುಖ ಕೆರೆಗಳ ಲ್ಲೊಂದಾಗಿದೆ.

ನೊಣವಿನಕೆರೆಯು ಕರ್ನಾಟಕದ ರಾಜಧಾನಿ ಬೆಂಗಳೂರಿಗೆ 155 ಕಿ.ಮೀ., ಜಿಲ್ಲಾ ಕೇಂದ್ರ ತುಮಕೂರಿಗೆ 90 ಕಿ.ಮೀ. ದೂರದಲ್ಲಿ ತಿಪಟೂರು–ಎಡೆಯೂರು ರಸ್ತೆಯಲ್ಲಿ ತುರುವೇಕೆರೆಯಿಂದ 12

ಕಿ.ಮೀ., ತಿಪಟೂರಿನಿಂದ 16 ಕಿ.ಮೀ. ನಡುವಿನ ಅಂತರದಲ್ಲಿದೆ. ಊರ ಒಳಗೆ ಹಾಗೂ ಸುತ್ತಮುತ್ತ ಪ್ರಮುಖ ದೇವಾಲಯಗಳಿದ್ದು ಕಲ್ಪತರು ನಾಡಿನ ದೇವರುಗಳ ಊರಾಗಿ ಪ್ರಸಿದ್ಧಿ ಪಡೆದಿದೆ. ಸಾಂಸ್ಕೃತಿಕ ನಗರ ಮೈಸೂರನ್ನು ನೆನೆದಾಗ ಕೆ.ಆರ್.ಎಸ್. ನೆನಪಾಗುವಂತೆ ನೊಣವಿನಕೆರೆಯನ್ನು ನೆನೆದಾಗ ನೊಳಂಬರ ಈ ಸುಂದರ ಕೆರೆ ನೆನಪಾಗುತ್ತದೆ. ಈ ಕೆರೆಯ ಹೆಸರೆ ಊರಿಗೂ ಇರುವುದು, ನೊಳಂಬರ ಕೆರೆ ಆಡುಭಾಷೆಯಾಗಿ ನೊಣವಿನಕೆರೆ ಎಂದಿರುವುದು ವಿಶೇಷ ವಾಗಿದೆ. ಹೇಮಾವತಿ ನಾಲಾ ವಲಯದಲ್ಲಿದ್ದು ಸಂಪರ್ಕಹೊಂದಿರುವ ಈ ಕೆರೆಯು ಬಹುತೇಕ ವರ್ಷಗಳಲ್ಲಿ ನೀರು ತುಂಬಿರುತ್ತದೆ.

**ಕೆರೆಯ ನಿರ್ಮಾಣ :** ನೊಣವಿನಕೆರೆಯ ಪ್ರಸಿದ್ಧ ಪ್ರಮುಖ ದೇವಾಲಯ ಬೇಟೆರಾಯಸ್ವಾಮಿ ದೇವಾಲಯ ಮುಜರಾಯಿ ಇಲಾಖೆಗೆ ಸೇರಿದ್ದು, ಇಲ್ಲಿರುವ ಲಿಖಿತ ಶಾಸನದ ಮೂಲಕ ಹಾಗೂ ಇತರ ಮೂಲಗಳಿಂದ ತಿಳಿಯುತ್ತದೆ. ಇದು 10ನೇ ಶತಮಾನಕ್ಕೂ ಮೊದಲೇ ನೊಳಂಬ ರಾಜರಿಂದ ನಿರ್ಮಾಣ ವಾಗಿದೆ. ಹಿಂದೆ ಸುಭಿಕ್ಷವಾಗಿ ಮಳೆಯಾಗುತ್ತಿದ್ದು ಸದಾಕೆರೆ ನೀರಿನಿಂದ ತುಂಬಿರುತ್ತಿತ್ತು. ಇತ್ತೀಚೆಗೆ ಮಳೆಯ ಕೊರತೆಯಿಂದ ಕೆಲ ವರ್ಷಗಳಿಂದ ಖಾಲಿಯಾಗಿಯೂ ಇರುತ್ತಿತ್ತು. ಪ್ರಸ್ತುತ ಹೇಮಾವತಿ ನೀರಿನ ಕೃಪೆಯಿಂದ ಜಲಭರಿತ ಕೆರೆಯಾಗಿದೆ. ಕೆರೆ ತುಂಬಿ ಕೋಡಿ ಹರಿದು ಹೋಗುವ ನೀರು ಪ್ರಸಿದ್ಧ ಮಲ್ಲಾಘಟ್ಟ ಕೆರೆಯನ್ನು ಸೇರುತ್ತದೆ. ಈ ಎರಡು ಕೆರೆಗಳನ್ನು ಅಕ್ಕತಂಗಿ ಕೆರೆಗಳೆನ್ನಬಹುದು. ಎರಡೂ ಕೆರೆಗಳು ಪವಿತ್ರ ಗಂಗಾಮಾತೆಯ ಪುಣ್ಯಸ್ಥಳಗಳಾಗಿವೆ. ಮಲೆನಾಡಿನ ಕಪೋತಗಿರಿ ಪಾಲ್ಯಾನಲ್ಲಿ ನಡೆಯುವ ಸುತ್ತಮುತ್ತಲಿನ ದೇವರುಗಳ ಪುಣ್ಯಸ್ನಾನ ಕಾರ್ಯದಂತೆ ಮಲ್ಲಾಘಟ್ಟಕೆರೆ ಪುಣ್ಯ ಗಂಗಾ ಸನ್ನಿಧಿಯಲ್ಲೂ ನಡೆಯುತ್ತದೆ. ಕೆರೆಗಳು ತುಂಬಿ ಕೋಡಿ ಹರಿಯುವ ಸುಂದರ ದೃಷ್ಯವನ್ನು ವೀಕ್ಷಿಸಲು ಜಲಸಾಗರದಂತೆ ಜನಸಾಗರವು ಹರಿದುಬರುತ್ತದೆ. ಪುಣ್ಯಸ್ಥಳದ ಗಂಗಾಮಾತೆಯಲ್ಲಿ ಮಿಂದು ಶುಚಿರ್ಭೂತರಾಗಿ ದೇವರುಗಳ ದರ್ಶನ ಪಡೆದು ಕೃಪೆಗೆ ಪಾತ್ರರಾಗುತ್ತಾರೆ. ಕೆರೆಯಲ್ಲಿ ತುಂಬಿರುವ ಜಲಗರ್ಭದಲ್ಲಿ ವಾಸಿಸುತ್ತಿರುವ ಸಹಸ್ರಾರು ಜಲಚರಗಳನ್ನು ವೀಕ್ಷಿಸಲು ಸಾಧ್ಯವಾಗದಿರಬಹುದು. ನೀರಿನ ಮೇಲ್ಭಾಗದಲ್ಲಿ ಕಾಣುವ ದೃಶ್ಯವನ್ನು ನೋಡಲು ಎರಡು ಕಣ್ಣುಗಳು ಸಾಲದಾಗಬಹುದು. ತೇಲಿ ನಲಿಯುತ್ತಿರುವ ಕಮಲದ ಹೂಗಳು, ನಾನಾ ರೀತಿಯ ಪಕ್ಷಿಸಮೂಹವೇ ಇಲ್ಲಿ ಸೇರಿರುತ್ತದೆ. ಕೊಕ್ಕರೆಗಳು, ಗುಂಡುಮುಳುಗ ಎಲ್ಲಿಯೋ ಮುಳುಗಿ ಎಲ್ಲಿಯೋ ಮೇಲೇಳುವ ಜಲಾಂತರ್ಗಾಮಿ ಪಕ್ಷಿಗಳು, ಮುಗಿಲಲ್ಲೆ ರೆಕ್ಕೆ ಬಡಿಯುತ್ತ ನಿಂತಿದ್ದು ಮೀನು ಕಂಡ ತಕ್ಷಣ ರೆಕ್ಕೆ ಮುದುಡಿ ಅಲ್ಲೇ ಬಿದ್ದು ಮೀನು ಹಿಡಿಯುವ ಪಕ್ಷಿಗಳು, ಹಂಸದಂತೆ ಕಾಣುವ ಉದ್ದ ಕೊಕ್ಕು ಹಾಗೂ ಕುತ್ತಿಗೆಯ ವಲಸೆ ಪಕ್ಷಿಗಳು, ಹಾಗೂ ಇತರೆ ಭಿನ್ನ ರೂಪ, ಭಿನ್ನ ಭಿನ್ನ ಬಣ್ಣದ ಪಕ್ಷಿಗಳ ಚೆಲ್ಲಾಟದ ದೃಶ್ಯ ನಮ್ಮನ್ನು ಘಂಟೆಗಳ ಕಾಲ ಅಲ್ಲಿಯೇ ನಿಲ್ಲಿಸುತ್ತದೆ. ನೊಣವಿನಕೆರೆಯು ಪಕ್ಷಿಕಾಶಿಯಾಗಿ ಕಾಣುತ್ತದೆ. ಪಕ್ಷಿಗಳು ಸೇರುವ ಉದ್ದೇಶ ಹೊಟ್ಟೆಪಾಡು. ಕೆಲವು ಜಾತಿಯ ಪಕ್ಷಿಗಳು ಕೆಲವು ದಿನಗಳು ಇದ್ದು ಕಣ್ಮರೆಯಾಗುತ್ತವೆ, ಮರಳಿ ಮತ್ತೆ ಬರುತ್ತವೆ. ಹವಾಮಾನ, ಸೌಲಭ್ಯ, ಆಹಾರ ಇತರ ಸೌಕರ್ಯಗಳ ಕೊರತೆಯಾದಾಗ ಸ್ಥಾನಪಲ್ಲಟವಾಗುತ್ತವೆ.

ಹಕ್ಕಿಪಕ್ಷಿಗಳ ಜೊತೆಗೆ ಕೆಲವು ಮಾಸಗಳಲ್ಲಿ ಅರಳುವ ತಾವರೆಹೂಗಳು ಕೆರೆಯನ್ನು ನವವಧುವಿನಂತೆ ಸಿಂಗರಿಸುತ್ತವೆ. ದಣಿವಾರಿಸಿಕೊಳ್ಳಲು ಬರುವ ಶ್ವಾನ ಹಾಗೂ ಇತರ ಪ್ರಾಣಿಗಳು ಕೆರೆಯ ಕೋಡಿಯ ಸಮೀಪದಲ್ಲೇ ಈಜುತ್ತಿರುವ ಮಕ್ಕಳು ಹಾಗೂ ಪ್ರವಾಸಿಗರು, ಮನೆಯ ಬಟ್ಟೆಗಳನ್ನು ಶುಭ್ರಗೊಳಿಸಿ ಕೊಳ್ಳುತ್ತಿರುವ ಮಹಿಳೆಯರು, ತಮ್ಮ ತಮ್ಮ ವಾಹನಗಳನ್ನು ಶುಚಿಗೊಳಿಸಿಕೊಳ್ಳುತ್ತಿರುವ ಮಾಲೀಕರು, ಒಂದೊಂದು ಕಡೆ ಕಂಡುಬಂದರೆ, ಕಾಲಾವಧಿ ಮುಗಿದಿರುವ ಕಟ್ಟಲೆ ಕಾಯಿಗಳನ್ನು ಭಕ್ತರು ತಂದು ಕೆರೆಯಲ್ಲಿ ಬಿಡುತ್ತಿರುತ್ತಾರೆ. ತುಂಬಿದ ಕೆರೆಯ ನಾನಾ ಭಾಗದಲ್ಲಿ ತೆಪ್ಪಗಳಲ್ಲಿ ಮೀನುಗಳನ್ನು ಹಿಡಿಯುವ ಮೀನುಗಾರರು ತಮ್ಮ ಕಾರ್ಯದಲ್ಲಿ ಮಗ್ನರಾಗಿರುತ್ತಾರೆ. ಊರಿನಲ್ಲಿ ನಡೆಯುವ ಶುಭ ಹಾಗೂ ದೇವತಾಕಾರ್ಯಗಳ ಪ್ರಯುಕ್ತ ಗಂಗಾಮಾತೆಗೆ ಪ್ರಥಮಪೂಜೆ ಸಲ್ಲಿಸಿ, ಗಂಗೆಯನ್ನು ನಡೆಮುಡಿಯೊಂದಿಗೆ ವಾದ್ಯಮೇಳ ಸಮೇತ ಕೆರೆಯಿಂದ ತರುವ ದೃಶ್ಯಗಳು ಕೆಲವು ಪ್ರತಿದಿನ, ಕೆಲವು ನಿಗದಿತ ದಿನಗಳಲ್ಲಿ ಸಹಜವಾಗಿರುತ್ತವೆ. ಕೆರೆಯಲ್ಲಿ ನೀರು ತುಂಬಿರುವ ಕಾರಣ ಸುತ್ತಮುತ್ತಲಿನ 8–10 ಕಿ.ಮೀ. ವ್ಯಾಪ್ತಿಯ ಭೂಭಾಗದಲ್ಲಿ ಅಂತರ್ಜಲ ವೃದ್ಧಿಯಾಗಿ ಕೃಷಿಯೇ ಮೂಲ ಕಾಯಕವಾಗಿಸಿಕೊಂಡಿರುವ ರೈತರ ಬಾಳಿಗೆ ಮಹದುಪಕಾರವಾಗಿದೆ. ಇಚ್ಛಾಶಕ್ತಿ ಕೊರತೆಯೋ ಅಥವಾ ಬೇರೆ ಕಾರಣವೋ ತಿಪಟೂರು ನಗರಕ್ಕೆ ನೀರನ್ನು ದಿನಬಳಕೆಗೆ ಬಳಸಿಕೊಳ್ಳುವ ಯೋಜನೆಯ ಕಾರ್ಯ ನಿಂತುಹೋಗಿದೆ. ನೊಳಂಬ ಅರಸರು ಪ್ರಾಣಿ, ಪಕ್ಷಿ, ಮಾನವ ಎಂಬ ಭಿನ್ನ ಬೇಧವೆಣಿಸದೆ ಸಕಲ ಜೀವರಾಶಿಗೆ ಮೂಲಾಧಾರವಾದ ಜಲಸಂರಕ್ಷಣ ಪುಣ್ಯಕಾರ್ಯವನ್ನು ಕೆರೆ ನಿರ್ಮಾಣದ ಮೂಲಕ ಮಾಡಿರುವರು. ಇದರ ಸದುಪಯೋಗಪಡಿಸಿ ಕೊಳ್ಳುವಲ್ಲಿ ಪರಸ್ಪರ ಸಹಮತ, ಹೊಂದಾಣಿಕೆಯ ಕೊರತೆಯಿಂದ ಮಾನವ ಸಮಾಜ ವಿಫಲವಾಗಿದೆ.

ಕೆರೆ ನಿರ್ಮಾಣದ ಮೂಲಕ ಬಾಳಿಗೆ ಆಸರೆಕೊಟ್ಟ ನೊಳಂಬ ಅರಸರು ಹಾಗೂ ನಿರ್ಮಾಣದಲ್ಲಿ ಭಾಗಿಯಾಗಿದ್ದ ಎಲ್ಲರಿಗೂ ಮರೆಯದೆ ಧನ್ಯವಾದಗಳು. ಪ್ರಾಣಿ ಪಶುಪಕ್ಷಿಗಳು, ಊರಿನ ದೇವಾಲಯ ಹಾಗೂ ಮರಗಿಡಗಳ ಮೇಲೆ ಕುಳಿತು ಜಲಮಾಲಿನ್ಯಗೊಳಿಸದೆ ಪರಿಶುದ್ಧತೆಯನ್ನು ಉಳಿಸಬೇಕಿದೆ ಮಾನವ ಜನಾಂಗ. 'ರೈತರಿಗೆ ಜಲವಿದ್ದರೆ ಬಲ'. ಜಲದ ಮಹತ್ವವನ್ನು ಎಲ್ಲರೂ ತಿಳಿಯೋಣ.

# ಯೋಗ ಅಭ್ಯಾಸ

ಯೋಗ ವ್ಯಾಯಾಮವಲ್ಲ, ಉಸಿರಾಟದೊಂದಿಗೆ ದೇಹ ಮತ್ತು ಮನಸ್ಸನ್ನು ವಿಲೀನಗೊಳಿಸುವ ಕ್ರಿಯೆಯೇ ಯೋಗ.

ಯಾವುದೇ ರೀತಿಯ ವ್ಯಾಯಾಮವೂ ದೇಹಕ್ಕೆ ಒಳ್ಳೆಯದೇ, ಆದರೆ ಯೋಗವು ವ್ಯಾಯಾಮಕ್ಕಿಂತಲೂ ಮಿಗಿಲಾದುದು.

**ನಿತ್ಯಂ ಹಿತಹಾರ ವಿಹಾರ ಸೇವಿ ಸಮೀಕ್ಷಕಾರಿ ವಿಷಯೇಷು ಆಸಕ್ತಃ।**
**ದಾತಾ ಸತ್ಯಪರಃ ಇತಿ ಭವ ಆರೋಗಃ ॥**

ಪ್ರತಿನಿತ್ಯ ವಾಯು ವಿಹಾರ, ಯೋಗ, ಮಿತವಾಗಿ ಸತ್ವಯುತ ಆಹಾರ ಸೇವನೆ, ಬೇರೆಯವರ ವಿಷಯದಲ್ಲಿ ನಿರಾಸಕ್ತಿರಾಗಿರುವುದು. ದಾನ-ಧರ್ಮ ಮತ್ತು ಸತ್ಯ ಸಂಧತೆ ಇವು ದೇಹವನ್ನು ಮತ್ತು ಮನಸ್ಸನ್ನು ಆರೋಗ್ಯಾವಾಗಿಡುತ್ತವೆ. ಇದರ ಜೊತೆಗೆ ಸೂರ್ಯನ ಬೆಳಕು, ಧನಾತ್ಮಕ ವಿಚಾರಗಳು, ಉತ್ತಮ ಸ್ನೇಹಿತರು, ಕುಟುಂಬ ನಡೆ-ನುಡಿಗಳು ಸಹ ನಮ್ಮ ಆರೋಗ್ಯಕ್ಕೆ ಕಾರಣವಾಗುತ್ತವೆ. ನಾವು ಸೇವಿಸುವ ಮಾತ್ರೆಯೇ ಆಹಾರವಾಗಬಾರದು. ಆಹಾರವೇ ಮಾತ್ರೆಯಾಗಬೇಕು. ಮಾತುಗಳು ಬೇರೆಯವರ ಸಾಧನೆಗೆ ಪೂರಕವಾಗಬೇಕೆ ಹೊರತು, ಮಾತೇ ಸಾಧನೆಯಾಗ ಬಾರದು,ಮಾರಕವಾಗಬಾರದು.

ಸಾಮಾನ್ಯವಾಗಿ ನಮಗೆ 40 ವರ್ಷದ ಒಳಗೆ ಜೀರ್ಣಕ್ರಿಯೆ ಉತ್ತಮವಾಗಿರುತ್ತದೆ. 40 ವರ್ಷ ಕಳೆದ ಮೇಲೆ ಪಚನ ಕ್ರಿಯೆಯಲ್ಲಿ ವ್ಯತ್ಯಾಸವಾಗುವುದು ಸಹಜ ಇದರಿಂದ ಅನಾರೋಗ್ಯ ಹೆಚ್ಚಾಗಿ ರೋಗ-ರುಜಿನುಗಳಿಗೆ ದೇಹ ಈಡಾಗುತ್ತದೆ. ಆದ ಕಾರಣ ಪ್ರತಿಯೊಬ್ಬರು ಪ್ರತಿನಿತ್ಯ ಬೆಳಿಗ್ಗೆ ಅಥವಾ ಸಾಯಂಕಾಲ ತಪ್ಪದೆ ಒಂದು ಗಂಟೆಯಾದರೂ ಯೋಗ ಅಭ್ಯಾಸ ಮಾಡುವುದು ಆರೋಗ್ಯಕರ "Precation is better than cure"ಅಂದರೆ ಚಿಕಿತ್ಸೆಗಿಂತ ಮುನ್ನೆಚ್ಚರಿಕೆ ಉತ್ತಮವಾಗಿದೆ.

ಉತ್ತಮ ಆರೋಗ್ಯಕ್ಕೆ ಹಾಗೂ ಆರೋಗ್ಯಕರ ಸಮಾಜ ನಿರ್ಮಾಣಕ್ಕಾಗಿ ಯೋಗ ಅಗತ್ಯ. ದೇಹದ ತೂಕ ಜಾಸ್ತಿಯಾದಾಗ ವ್ಯಾಯಾಮ, ಮನಸ್ಸಿನ ತೂಕ ಜಾಸ್ತಿಯಾದಾಗ ಧ್ಯಾನ, ಹಣದ ತೂಕ ಜಾಸ್ತಿಯಾದರೆ ದಾನ, ಹೀಗೆ ಜಾಸ್ತಿಯಾದ ತೂಕವನ್ನು ಕಳೆದುಕೊಂಡರೆ ಆರೋಗ್ಯ ಹಾಗೂ ನೆಮ್ಮದಿ ಸಿಗುತ್ತದೆ.

"Human body is living temple of God" ಅಂದರೆ "ಮಾನವನ ದೇಹವು ದೇವರ ಜೀವಂತ ದೇವಾಲಯವಾಗಿದೆ". ಆದುದರಿಂದ ದೇಹ ಮತ್ತು ಮನಸ್ಸನ್ನು ದುಷ್ಚಟಗಳಿಂದ ಹಾಳು ಮಾಡಿಕೊಳ್ಳಬಾರದು ಕಾರಣ 'ದೇಹವೇ ದೇಗುಲ'. ದೇವಾಲಯವು ಸುಂದರ ವಾಗಿದ್ದರೆ ದೇವರು ಸುಂದರವಾಗಿರುತ್ತದೆ. ದೇಹ ಸ್ವಚ್ಚವಾಗಿರ ಬೇಕಾದರೆಯೋಗದ ಅಗತ್ಯವಿದೆ. ದೇಹದ ಮೇಲಿನ ಕೊಳೆ ತೆಗೆಯಲು ಸ್ನಾನ ಹೇಗೆ ಮುಖ್ಯವೋ, ಮನಸ್ಸಿನಸ್ಥಿರತೆಗೆ ಧ್ಯಾನ ಅಷ್ಟೇ ಮುಖ್ಯ. ದೇಹ ಮತ್ತು ಮನಸ್ಸನ್ನು ಸ್ವಾಸ್ಥ್ಯವಾಗಿಡಲು ಯೋಗ ಅಭ್ಯಾಸ ಬಹಳ ಮುಖ್ಯ.

"ಯೋಗ ಶಬ್ದಕ್ಕೆ ಒಂದಾಗಿಸುವುದು" ಅಥವಾ ಸೇರಿಸುವುದು ಎಂಬ ಅರ್ಥ, ಹಾಗಾಗಿ ಯೋಗವೆಂದರೆ ನಮ್ಮ ದೇಹ, ಉಸಿರು, ಮನಸ್ಸು ಹಾಗೂ ಅರಿವು ಇವುಗಳನ್ನು ಸೂಕ್ತವಾಗಿ ಸಂಯೋಜಿಸುವುದೇ ಆಗಿದೆ.

ಯೋಗಾಭ್ಯಾಸವನ್ನು ಯೋಗ ಗುರುಗಳ ಮಾರ್ಗ ದರ್ಶನದಿಂದ ಅಭ್ಯಾಸ ಮಾಡಬೇಕು. 'ಅರಿವೇ ಗುರುವು' ಯೋಗಾಭ್ಯಾಸದ ಅರಿವು ಉಂಟಾಗಬೇಕಾದರೆ ಯೋಗ ಗುರುಗಳ ಮುಖೇನ ಕಲಿಯುವುದು ಮುಖ್ಯ.

"Sound body in sound mind" ಅಂದರೆ "ಸಧೃಡ ದೇಹದಲ್ಲಿ ಸಧೃಡ ಮನಸ್ಸಿಗಾಗಿ" ಪ್ರತಿದಿನ ದೇಹ ಚಟುವಟಿಕೆಯಿಂದ ಕೂಡಿ ಉಲ್ಲಾಸ ದಿಂದಿರಲು ಮತ್ತು ಮನಸ್ಸು ಸ್ಥಿರವಾಗಿ ರಲು ಯೋಗ ಅಭ್ಯಾಸ ಮಾಡಿ ಆರೋಗ್ಯವಾಗಿರಿ, ಕುಟುಂಬವನ್ನು ಆರೋಗ್ಯವಾಗಿಡಿ.

**"ಆರೋಗ್ಯವೇ ಭಾಗ್ಯ"**



**ಆರ್. ರಾಜಯ್ಯ**
ನಿವೃತ್ತ ಶಿಕ್ಷಕರು, ವ್ಯವಸ್ಥಾಪಕರು,
ನೊಳಂಬ ಲಿಂಗಾಯತ ಸಂಘ,
ಬಸವೇಶ್ವರನಗರ, ಬೆಂಗಳೂರು.

# "ಪೌಷ್ಟಿಕತೆ ಹಾಗೂ ಆರ್ಥಿಕತೆಗಾಗಿ – ತೋಟಗಾರಿಕೆ"

**ಸಾರಾಂಶ :** 'ಆರೋಗ್ಯವೇ ಭಾಗ್ಯ' ಎಂಬ ಗಾದೆ ಜನಪ್ರಿಯವಾದುದು. ನಾನಾ ಬಗೆಯ ಧನ ಸಂಪತ್ತುಗಳಿದ್ದರೂ ಆರೋಗ್ಯವಿಲ್ಲದಿದ್ದರೆ ಅನುಭವಿಸಲು ಸಾಧ್ಯವಿಲ್ಲ. ಆದ್ದರಿಂದ ಸರ್ವ ಭಾಗ್ಯಗಳಿಗಿಂತ ಆರೋಗ್ಯ ಭಾಗ್ಯ ಶ್ರೇಷ್ಠ. ಆರೋಗ್ಯವನ್ನು ಕೊಡುವುದರ ಜೊತೆಗೆ ತೋಟಗಾರಿಕೆಯು ರೈತರ ಆರ್ಥಿಕ ಅಭಿವೃದ್ಧಿಯಲ್ಲಿ ಮಹತ್ತರ ಪಾತ್ರವನ್ನು ಒದಗಿಸುತ್ತಿರುವುದರಿಂದ ರೈತರು ಆದಾಯ ವೃದ್ಧಿಯನ್ನು ಹೆಚ್ಚಿಸಿಕೊಂಡಿರುವುದು ಗಮನಾರ್ಹವಾಗಿದೆ.

ಇತ್ತೀಚಿನ ದಿನಗಳಲ್ಲಿ ಕೃಷಿಯು ಹೆಚ್ಚು ವಾಣಿಜ್ಯೀಕರಣಗೊಳ್ಳುತ್ತಾ ಏಕಬೆಳೆ ಪದ್ಧತಿಯೊಂದಿಗೆ, ಅಂತರಬೆಳೆ ಮಿಶ್ರಬೆಳೆ ಹಾಗೂ ಹೆಚ್ಚಿನ ಸಾಂದ್ರತೆಯ ನಿಖರ ಕೃಷಿಯತ್ತ ಒಲವು ಮೂಡಿರುವುದನ್ನು ಕಾಣಲಾಗುತ್ತಿದೆ. ವೈಜ್ಞಾನಿಕವಾಗಿ ಕೃಷಿ ಅನುಸರಿಸಲು ಸಮಗ್ರ ಕೃಷಿ ಪದ್ಧತಿಯಲ್ಲಿ ತೋಟಗಾರಿಕೆ ಬೆಳೆಗಳಾದ ತರಕಾರಿ, ಹಣ್ಣು, ತೋಟಪಟ್ಟಿ, ಸಾಂಬಾರು, ಔಷಧಿ, ಸುಗಂಧದ್ರವ್ಯ, ಜೇನು ಕೃಷಿ, ಅಣಬೆ ಬೇಸಾಯದೊಂದಿಗೆ ವಾಣಿಜ್ಯವಾಗಿ ಪುಷ್ಪ ಕೃಷಿಯನ್ನು ಕೈಗೆತ್ತಿಕೊಂಡು ಕುಟುಂಬದ ಸಮಾಜದ ಒಟ್ಟಾರೆ ಮಾನವ ಜನಾಂಗದ ಸುಸ್ಥಿರ ಪೌಷ್ಠಿಕತೆ ಹಾಗೂ ಕೃಷಿ ಆದಾಯವನ್ನು ಹೆಚ್ಚಿಸಿಕೊಂಡು ದೇಶದ ಆರ್ಥಿಕ ಪ್ರಗತಿಗೆ ತೋಟಗಾರಿಕೆ ತನ್ನದೇ ಆದ ಪರಿಣಾಮವನ್ನು ಬೀರಿದೆ. ದೇಶದ ಆರ್ಥಿಕ ಪ್ರಗತಿ ಪ್ರತಿಶತ 33ರಷ್ಟು ತೋಟಗಾರಿಕೆಯಿಂದ ಸಾಧಿಸಿದ್ದನ್ನು ಆರ್ಥಿಕ ತಜ್ಞರು ದೃಢಪಡಿಸಿರುತ್ತಾರೆ.

ಪ್ರಸ್ತುತ ವರ್ಷಗಳಲ್ಲಿ ವಿಶ್ವ ಆರೋಗ್ಯ ಸಂಸ್ಥೆ (WHO) ಶಿಫಾರಸ್ಸಿನಂತೆ ಪ್ರತಿಯೊಬ್ಬರು ಪ್ರತಿದಿನ 400 ಗ್ರಾಂ ತರಕಾರಿ ಹಾಗೂ 300 ಗ್ರಾಂ ಹಣ್ಣುಗಳ ಸೇವನೆ ಮಾಡಲೇಬೇಕು. ಆಗ ಮಾತ್ರ ದೇಹವು ಆರೋಗ್ಯದ ಸಮತೋಲನ ಕಾಪಾಡಿಕೊಳ್ಳುತ್ತದೆ. ಪ್ರಸ್ತುತದಲ್ಲಿ ಭಾರತೀಯ ಗ್ರಾಮೀಣ ಜನರು ಕೇವಲ 145 ಗ್ರಾಂ ಕಾಯಿಪಲ್ಯ ಹಾಗೂ 15 ಗ್ರಾಂ ಸೇವನೆ ಮಾಡುತ್ತದೆ. ನಗರ ವಾಸಿಗಳು 155 ಗ್ರಾಂ ತರಕಾರಿ ಹಾಗೂ 29 ಗ್ರಾಂ ಹಣ್ಣಿನ ಸೇವನೆ ಮಾಡುತ್ತಿರುವುದು ದೃಢ ಪಟ್ಟಿದೆ, ಈ ಹಿನ್ನೆಲೆಯಲ್ಲಿ ಪ್ರತಿಶತ 80 ಕ್ಕೂ ಹೆಚ್ಚು ಭಾರತೀಯರು ಪೌಷ್ಟಿಕಾಂಶದ ಕೊರತೆಯಿಂದ ಹಲವಾರು ಆರೋಗ್ಯ ಸಮಸ್ಯೆಗೆ ಒಳಗಾಗುತ್ತಿದ್ದಾರೆ.



**ಡಾ. ಶಶಿಕುಮಾರ್ ಎಸ್.**
ಪ್ರಾಧ್ಯಾಪಕರು ಹಾಗೂ ಸಂಪಾದಕರು,
ಸಂವಹನ ಕೇಂದ್ರ ತೋವಿವಿ,
ಬಾಗಲಕೋಟ
ಮೊ : 9741900255

ಉತ್ತಮ ಪೌಷ್ಟಿಕತೆಗಾಗಿ ಪ್ರಸ್ತುತದಲ್ಲಿ ಪ್ರತಿಶತ 20 ರಷ್ಟು ಸ್ಥಿತಿವಂತರು ಓಟ್ಸ್, ಅವಲಕ್ಕಿ, ದೇಶಿ ಹಾಲು, ಆಲಿವ್ ಎಣ್ಣೆ, ತುಪ್ಪ, ಬೆಳೆಕಾಳು ಹಾಗೂ ಸಿರಿಧಾನ್ಯಗಳನ್ನು ಸೇವಿಸುತ್ತಾರೆ. ಇದರಿಂದ ದೇಹಕ್ಕೆ ಬೇಕಾಗಿರುವ ಶಕ್ತಿ, ಪೋಷಕಾಂಶಗಳಾದ ಕ್ಯಾಲ್ಸಿಯಂ, ನಾರು, ಮ್ಯಾಗ್ನೇಷಿಯಂ, ವಿಟಾಮಿನ್ ಇ,ಸಿ,ಎ,ಡಿ, ಪೊಟ್ಯಾಷಿಯಂ, ಪ್ರೋಟೀನ್, ಕಬ್ಬಿನಾಂಶವನ್ನು ಸುಲಭವಾಗಿ ದೊರೆಯುವ ಮೂಲಗಳಾದ ತರಕಾರಿ, ಹಣ್ಣು, ಏಕದಳ ಕಾಳು, ಬೇಳೆಕಾಳು, ಹಾಲು, ಮೊಟ್ಟೆಗಳಿಂದ ಪಡೆಯುತ್ತಿದ್ದಾರೆ. ಆದರೆ ಪ್ರತಿಶತ 80 ರಷ್ಟು ಜನಸಂಖ್ಯೆಗೆ ಪ್ರತಿದಿನ ಶಿಫಾರಿತ ಅಥವಾ ನಿರ್ದಿಷ್ಟ ಪಡಿಸಿದ ಆಹಾರ ಸಿಗದಿರುವುದರಿಂದ ತೋಟಗಾರಿಕೆ ಉತ್ಪನ್ನಗಳಿಗೆ ಹೆಚ್ಚಿನ ಬೇಡಿಕೆ ಬಂದಿದೆ. ತೋಟಗಾರಿಕೆ ಬೆಳೆಗಳ ಅಳವಡಿಕೆ ಹಾಗೂ ಹೆಚ್ಚಿನ ಉತ್ಪಾದನೆಯೊಂದಿಗೆ ಭಾರತೀಯರ ಅಪೌಷ್ಟಿಕತೆ ಹೋಗಲಾಡಿಸುವುದು ಅತೀ ಮುಖ್ಯವಾಗಿದೆ. ಅಂತೆಯೇ 2023–24 ರ ಸಾಲಿನ ಅಂಕಿ ಅಂಶಗಳ ನೋಡಿದಾಗ ಒಟ್ಟು ತೋಟಗಾರಿಕೆ ಉತ್ಪಾದನೆ 351.92 ಮಿಲಿಯನ್ ಟನ್‌ಗಳಿಂದ 355.25 ಮಿಲಿಯನ್ ಟನ್ ಹೆಚ್ಚಾಗಿರುವುದನ್ನು ಕಾಣಲಾಗಿದೆ. ಅರ್ಥಾತ್ ಪ್ರತಿಶತ 1.37 ರಷ್ಟು ಹೆಚ್ಚಿನ ಉತ್ಪಾದನೆಯನ್ನು ಗಮನಿಸಲಾಗಿದೆ. ಬರುವ ವರ್ಷಗಳಲ್ಲಿ ಹಣ್ಣು, ತರಕಾರಿ ಹಾಗೂ ತೋಟಪಟ್ಟಿ ಬೆಳೆಗಳ ಕ್ಷೇತ್ರ ಹಾಗೂ ಉತ್ಪಾದನೆ ಹೆಚ್ಚುತ್ತಲೇ ಹೋಗಬೇಕಾಗಿದ್ದು, ದೇಶದ ಒಟ್ಟಾರೆ ಜನಸಂಖ್ಯೆಗೆ ಪೌಷ್ಟಿಕ ಆಹಾರ ಒದಗಿಸಲು ಸಾಧ್ಯವಾಗುವುದು. ಅಲ್ಲದೆ ದೇಶದ ಆರ್ಥಿಕ ಪ್ರಗತಿಗೆ ಪೂರಕವಾಗುವುದೆಂದು ತಿಳಿಯಲಾಗಿದೆ.

ಹಣ್ಣಿನ ಬೆಳೆಗಳಲ್ಲಿ ಮುಖ್ಯವಾಗಿ ದಾಳಿಂಬೆ (ಪ್ರೋಟೀನ್, ವಿಟಮಿನ್, ರೋಗನಿರೋಧಕಗಳು) ಅವಕಾಡೊ (ಆರೋಗ್ಯಕರ ಕೊಬ್ಬು, ನಾರಿನಾಂಶ

ಮೆಗ್ನೇಶಿಯಂ, ವಿಟಾಮಿನ್ ಸಿ, ಇ, ಕೆ ಪ್ರೋಟೀನ್), ಪೇರಲ (ಪ್ರೋಟಿನ್, ವಿಟಾಮಿನ್ ಸಿ) ಕಿವಿ ಹಣ್ಣು (ಪ್ರೋಟೀನ್, ಪೊಟ್ಯಾಶಿಯಂ, ಪಾಸ್ಪರಸ್, ಕಬ್ಬಿಣಾಂಶ) ಚಕ್ಕೋತಾ (ಪ್ರೋಟೀನ್, ವಿಟಮಿನ್ ಸಿ, ಕ್ಯಾಲ್ಸಿಯಂ, ಕಬ್ಬಿಣಾಂಶ), ಬಾಳೆಹಣ್ಣು (ಪ್ರೋಟೀನ್, ಪೊಟ್ಯಾಶಿಯಂ ನಾರಿನಾಂಶ ಪ್ರೋಬಿಯಾಟಿಕ್ಸ್, ವಿಟಾಮಿನ್ ಎ, ಬಿ6, ಸಿ ಮೆಗ್ನೇಶಿಯಂ ಪೋಷಕಾಂಶಗಳು) ಚೆರ್ರಿ ಹಣ್ಣು (ಪೊಟ್ಯಾಷಿಯಂ, ಪ್ರೋಟೀನ್) ಹಲಸಿನ ಹಣ್ಣು (ಪ್ರೋಟೀನ್, ನಾರಿನಾಂಶ ಪೊಟ್ಯಾಶಿಯಂ, ವಿಟಾಮಿನ್ ಸಿ.ಎ, ಮಗ್ನೇಶಿಯಂ

ಕಾಯಿಪಲ್ಯಗಳಾದ ಬೆಳ್ಳುಳ್ಳಿ (ಸಲ್ಫರ್ ಸಂಯುಕ್ತಗಳು–ಉರಿಯೂತ ಹಾಗೂ ಯಕೃತ್ತಿನ ಆರೋಗ್ಯಕ್ಕಾಗಿ), ಕುಂಬಳಕಾಯಿ (ಬೀಟಾ–ಕ್ರಿಪ್ಟೋ ಕ್ಸಾಂಥೀನ್) ಟೊಮ್ಯಾಟೋ (ಲೈಕೋಪೀನ್– ಯಕೃತ್ತಿನ ರಕ್ಷಣೆ) ಹಾಗೂ ಅರಿಶಿಣ (ಕರ್ಕ್ಯುಮಿನ್–ಉತ್ಕರ್ಷಣ ನಿರೋಧಕ), ಹೀಗೆ ಎಲ್ಲ ತರಕಾರಿಗಳಲ್ಲಿ ಆರೋಗ್ಯವರ್ಧಕ ಹಾಗೂ ಶರೀರ ಕ್ರಿಯೆಗಳಿಗೆ ಪೂರಕವಾಗುವ ಪ್ರೋಟೀನ್, ನಾರಿನಾಂಶ ವಿಟಾಮಿನ್, ಖನಿಜಾಂಶಗಳನ್ನು ಒದಗಿಸಿ ಆಹಾರ ಮತ್ತು ಆರೋಗ್ಯಕ್ಕೆ ಪೂರಕವಾಗಿವೆ.

ಆಹಾರ ಸೇವನೆಯಲ್ಲಿ ಯೋಗ್ಯವಲ್ಲದ ಕೆಲವು ಆಹಾರ ಪದಾರ್ಥಗಳಾದ ಸಕ್ಕರೆ (ದೇಹದ ತೂಕ ಹೆಚ್ಚಳ, ಹಲ್ಲು ಸವೆತ ಹೃದಯಕ್ಕೆ ತೊಂದರೆ, ಸಕ್ಕರೆ ಕಾಯಿಲೆ, ಯಕೃತಕ್ಕೆ ತೊಂದರೆ, ಮೂತ್ರಪಿಂಡಕ್ಕೆ ತೊಂದರೆ ಚರ್ಮ ಸುಕ್ಕುಗಟ್ಟುವಿಕೆ ಸಂದಿವಾತ, ಮೆದುಳಿನ ಕಾರ್ಯ ವಿಫಲತೆ ಹಾಗೂ ಕಣ್ಣಿಗೆ ತೊಂದರೆ) ಗೋಧಿ (ಗ್ಲುಟಿನ್ ಅಂಶ). ವಿದೇಶಿ ಆಕಳುಗಳ ಹಾಲು (ಅಲರ್ಜಿಗೆ ಕಾರಣ), ಮೈದಾ ಹಾಗೂ ತ್ವರಿತ ಆಹಾರ (ಶೇಖರಣಾ ಸಾಮರ್ಥ್ಯ ಹೆಚ್ಚಿಸಲು ಉಪ್ಪು, ಸೋಡಿಯಂ ಕ್ಲೋರೈಡ್ ಬಳಕೆ) ಮಾರುಕಟ್ಟೆಯಲ್ಲಿ ಸಿಗುವ ಲೇಸ್, ಕುರುಕುರೆ (ವ್ಯಾಕ್ಸ್ ಲೇಪಿತ), ಕಾಫಿ (ಕೆಫೆನ್ ಗಂಟಲಿನ ಉರಿತ, ಫಾಸ್ಪರಿಕ್ ಆಮ್ಲದ ಉರಿಯಿಂದಾಗಿ ಕ್ಯಾನ್ಸರ್, ಹೃದಯಘಾತ, ಮೆದುಳಿನ ತೊಂದರೆ) ಆಮ್ಲಯುಕ್ತ ಬಣ್ಣದ ತಂಪು ಪಾನೀಯಗಳು (ಕೆಫೆನ್–ಕ್ಯಾನ್ಸರ್ ಕಾರಕ ಹಾಗೂ ಹೃದಯಕ್ಕೆ ತೊಂದರೆ), ತ್ವರಿತ ಆಹಾರ ಪದಾರ್ಥಗಳಲ್ಲಿ ಹೆಚ್ಚಿನ ಅಂಶದಲ್ಲಿ ಉಪ್ಪು, ಸೋಡಿಯಂ ಕ್ಲೋರೈಡ್ ರಾಸಾಯನಿಕ ಸಂರಕ್ಷಕಗಳು, ಬಣ್ಣದ ರಾಸಾಯನಿಕಗಳು, ರುಚಿ ಹೆಚ್ಚಿಸುವ ರಾಸಾಯನಿಕ ಗಳು ಹಲ್ಲಿನ ಹಾಗೂ ಮೂಳೆಗಳ ಸವೆತಕ್ಕೆ ಕಾರಣ ವಾಗುತ್ತವೆಂದು ತಿಳಿಯಲಾಗಿದೆ.

ಈ ಎಲ್ಲ ಕಾರಣಗಳಿಂದಾಗಿ ಆರೋಗ್ಯದ ದೃಷ್ಟಿಯಿಂದ ಹಣ್ಣುಗಳು, ತರಕಾರಿ, ತೋಟಪಟ್ಟಿ ಬೆಳೆಗಳ ಉತ್ಪನ್ನಗಳು ಸಾಂಬಾರು, ಔಷಧಿ ಹಾಗೂ ಗಿಡಮೂಲಿಕೆಗಳ ನೈಸರ್ಗಿಕ ಉತ್ಪನ್ನಗಳ ಸೇವನೆಯಿಂದಾಗಿ ಆಹಾರದ ಭದ್ರತೆ ಹಾಗೂ ಉತ್ತಮ ಆರೋಗ್ಯ ಕಾಪಾಡಿಕೊಳ್ಳಬಹುದು. ತರಕಾರಿ, ಹಣ್ಣುಗಳು ಒಟ್ಟಾರೆ ತೋಟಗಾರಿಕೆ ಉತ್ಪನ್ನಗಳ ಉತ್ಪಾದನೆ ಕೊರತೆ ಹಾಗೂ ಹೆಚ್ಚಿನ ಬೇಡಿಕೆಯಿಂದಾಗಿ ಪ್ರತಿ ವರ್ಷವು ತೋಟಗಾರಿಕೆ ಕ್ಷೇತ್ರ ಹಾಗೂ ಉತ್ಪಾದನೆ ಹೆಚ್ಚಾಗಲು ಕಾರಣವಾಗಿವೆ.

ತೋಟಗಾರಿಕೆ ಬೆಳೆಗಳ ಅಳವಡಿಕೆ ಹಾಗೂ ಉತ್ಪಾದನೆ ಕೃಷಿಕರ ಹೆಚ್ಚಿನ ಆದಾಯಕ್ಕಾಗಿ ಹೆಚ್ಚಿನ ವೈವಿಧ್ಯೀಕರಣಕ್ಕಾಗಿ ಕ್ಷೇತ್ರದಲ್ಲಿ ಹಾಗೂ ಸಂಸ್ಕರಣೆಯಲ್ಲಿ ಹೆಚ್ಚಿನ ಉದ್ಯೋಗ ಸೃಷ್ಟಿಸಲು, ಮಹಿಳಾ ಕೃಷಿಕರನ್ನು ಕೃಷಿಯಲ್ಲಿ ತೊಡಗಿಸಲು, ವರ್ಷ ಪೂರ್ತಿ ಉತ್ಪಾದನೆ ಪಡೆಯಲು, ಕೃಷಿ ಚಟುವಟಿಕೆಗಳೊಂದಿಗೆ ರಫ್ತು ಮಾಡುವ ಅವಕಾಶಗಳನ್ನು ಹೆಚ್ಚಾಗಿ ಹೊಂದಿರುತ್ತದೆ, ಮಹಿಳಾ ಸಬಲೀಕರಣಕ್ಕಾಗಿ ಹಾಗೂ ಪೌಷ್ಟಿಕಾಂಶದ ಭದ್ರತೆಗಾಗಿ ತೋಟಗಾರಿಕೆ ಅಳವಡಿಕೆ ಅತೀ ಮುಖ್ಯವೆಂದು ಪರಿಗಣಿಸಲಾಗಿದೆ.

ಈ ಹಿಂದಿನ ಐದು ವರ್ಷಗಳ ಅಂಕಿ ಅಂಶಗಳನ್ನು ಗಮನಿಸಿದಾಗ ಹಣ್ಣಿನ ಹಾಗೂ ತರಕಾರಿ ಬೆಳೆಗಳಲ್ಲಿ ಶೇಕಡಾ 6.34 ಉತ್ಪಾದನೆ ಹಾಗೂ 4.7 ಅಧಿಕ ಕ್ಷೇತ್ರದಲ್ಲಿ ಅಳವಡಿಕೆ ಕಂಡು ಬಂದಿದೆ. ಮುಂಬರುವ ವರ್ಷಗಳಲ್ಲಿಯೂ ಸಹ ಕ್ಷೇತ್ರ ಹಾಗೂ ಉತ್ಪಾದನೆ ಹೆಚ್ಚಳಕ್ಕೆ ವಿಪುಲ ಅವಕಾಶಗಳಿದ್ದು, ಬೇಡಿಕೆ ಹಾಗೂ ಆದಾಯ ವೃದ್ಧಿಗೆ ತೋಟಗಾರಿಕೆ ಅಳವಡಿಕೆ ಅತೀ ಅವಶ್ಯಕವಾಗಿದೆ.

**ನೊಳಂಬವಾಣಿಯ ಚಂದಾದಾರರಲ್ಲಿ ಮನವಿ**

ನೊಳಂಬವಾಣಿಯ ಚಂದಾದಾರರು ವಿಳಾಸ ಬದಲಾವಣೆ ಮಾಡಬೇಕಾದರೆ ಮತ್ತು ಪತ್ರಿಕೆ ಬಾರದೇ ಇದ್ದಲ್ಲಿ, ಚಂದಾ ಹಣದ ಮೂಲ ರಸೀದಿ, ಅವಧಿ, ಹಳೆಯ ವಿಳಾಸ, ಕ್ರಮ ಸಂಖ್ಯೆ ಹಾಗೂ ಹೊಸ ವಿಳಾಸದ ಪೂರ್ಣ ಪಿನ್‌ಕೋಡ್ ಸಂಖ್ಯೆ, ಮೊಬೈಲ್ ನಂಬರನ್ನು ಸಂಪಾದಕರ ದೂರವಾಣಿ ಸಂಖ್ಯೆಗೆ ವಾಟ್ಸ್ ಅಪ್ ಮೂಲಕ ಕಳುಹಿಸಬೇಕಾಗಿ ತಮ್ಮಲ್ಲಿ ವಿನಂತಿ.